ಸೋಮವಾರ, ಜೂನ್ 6, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಮಣ್ಣು ಉಳಿಸಿ’

ನವದೆಹಲಿಯ ವಿಜ್ಞಾನ ಭವನದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ‘ಮಣ್ಣು ಉಳಿಸಿ ಅಭಿಯಾನ’ದಲ್ಲಿ ಬಾಲಿವುಡ್ ನಟಿ ಕಂಗನಾ ರನೌತ್ ಪಾಲ್ಗೊಂಡಿದ್ದರು

ಕೇಂದ್ರ ಸರ್ಕಾರ ಮತ್ತು ಬಿಜೆಪಿ ವಿರುದ್ಧ ಹರಿಹಾಯ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

‘ಕಾಶ್ಮೀರ ಸ್ಥಿತಿ ನಿಭಾಯಿಸಲು ಬಿಜೆಪಿ ವಿಫಲ’

ನವದೆಹಲಿ (ಪಿಟಿಐ): ಕಾಶ್ಮೀರಿ ಪಂಡಿತರನ್ನು ಗುರಿ ಮಾಡಿ ಉಗ್ರರು ಹತ್ಯೆ ಮಾಡುತ್ತಿದ್ದಾರೆ. ಇದರಿಂದ ಪಂಡಿತರು ಅನಿವಾರ್ಯವಾಗಿ ಕಣಿವೆ ತೊರೆಯುವಂತಾಗಿದೆ. ಪಂಡಿತರ ಹತ್ಯೆ ತಡೆಯಲು ಕೇಂದ್ರ ಸರ್ಕಾರವು ಕ್ರಿಯಾ ಯೋಜನೆ ರೂಪಿಸಬೇಕು. ಕಾಶ್ಮೀರ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಬಿಜೆಪಿ ವಿಫಲವಾಗಿದೆ. ಬಿಜೆಪಿಗೆ ಕೊಳಕು ರಾಜಕೀಯ ಮಾಡುವುದು ಮಾತ್ರ ಗೊತ್ತು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಪಂಡಿತರ ಮೇಲಿನ ದಾಳಿಯನ್ನು ಖಂಡಿಸಿ ಎಎಪಿ ಜಂತರ್ ಮಂತರ್‌ನಲ್ಲಿ ಆಯೋಜಿಸಿದ್ದ ‘ಜನ ಆಕ್ರೋಶ ರ‍್ಯಾಲಿ’ಯನ್ನು ಉದ್ದೇಶಿಸಿ ಅವರು ಭಾನುವಾರ ಮಾತನಾಡಿದರು. ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಪಾಕಿಸ್ತಾನ ಬೆಂಬಲ ನೀಡುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಪಾಕಿಸ್ತಾನವು ತನ್ನ ಕೀಳು ತಂತ್ರವನ್ನು ನಿಲ್ಲಿಸಬೇಕು ಎಂದು ಹೇಳಲು ಬಯಸುತ್ತೇನೆ. ಕಾಶ್ಮೀರವು ನಮ್ಮದು ಮತ್ತು ಅದು ಎಂದೆಂದಿಗೂ ಭಾರತದ ಭಾಗವಾಗಿಯೇ ಇರುತ್ತದೆ. ಭಾರತ ನಿರ್ಧರಿಸಿದರೆ, ಪಾಕಿಸ್ತಾನದ ಅಸ್ತಿತ್ವವೇ ಇರುವುದಿಲ್ಲ’ ಎಂದು ಕೇಜ್ರಿವಾಲ್ ಹೇಳಿದರು.

ಕಾಶ್ಮೀರದಲ್ಲಿ ಹಿಂದೂಗಳನ್ನು ಗುರುತಿಸಿ ಹತ್ಯೆ ಮಾಡುವುದು ಮೇಯಲ್ಲಿ ತೀವ್ರಗೊಂಡಿತ್ತು. ತಹಶೀಲ್ದಾರ್ ಕಚೇರಿಯಲ್ಲಿ ಕ್ಲರ್ಕ್ ಆಗಿದ್ದ ರಾಹುಲ್ ಭಟ್ ಅವರನ್ನು ಕಚೇರಿಯಲ್ಲಿಯೇ ಇತ್ತೀಚೆಗೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿತ್ತು. ಮೇ 1ರಿಂದ ಈವರೆಗೆ ಎಂಟು ಮಂದಿಯನ್ನು ಹತ್ಯೆ ಮಾಡಲಾಗಿದೆ. ಅವರಲ್ಲಿ ಮೂವರು ಪೊಲೀಸರು ಮತ್ತು ಎಂಟು ಮಂದಿ ನಾಗರಿಕರು. ಪೊಲೀಸರು ಕರ್ತವ್ಯದಲ್ಲಿ ಇಲ್ಲದ ಸಂದರ್ಭದಲ್ಲಿ ಹತ್ಯೆ ಮಾಡಲಾಗಿದೆ.

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆಗೆ ಮಾತನಾಡುತ್ತೇನೆ. ಹತ್ಯೆಯನ್ನು ನಿಲ್ಲಿಸಲು ಕೇಂದ್ರದ ಬಳಿ ಇರುವ ಯೋಜನೆ ಏನು ಎಂಬುದನ್ನು ತಿಳಿದುಕೊಳ್ಳುತ್ತೇನೆ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕಾಶ್ಮೀರಿ ಪಂಡಿತರಿಗೆ ರಕ್ಷಣೆ ಕೊಡುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ. ಸರ್ಕಾರದ ಬಳಿ ಯಾವ ಯೋಜನೆಯೂ ಇಲ್ಲ. ಅವರು ಸಭೆಗಳನ್ನು ಮಾತ್ರ ಮಾಡುತ್ತಿದ್ದಾರೆ. ಹಲವು ಸಭೆಗಳು ನಡೆದಿವೆ. ಕ್ರಿಯಾ ಯೋಜನೆ ಏನು ಎಂಬುದು ಈಗ ಜನರಿಗೆ ತಿಳಿಯಬೇಕಾಗಿದೆ ಎಂದು ಹೇಳಿದ್ದಾರೆ.

ಅಮಿತ್ ಶಾ ಅವರು ಉನ್ನತ ಮಟ್ಟದ ಸಭೆಯನ್ನು ದೆಹಲಿಯಲ್ಲಿ ಶುಕ್ರವಾರವೂ ನಡೆಸಿದ್ದಾರೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಸೇನಾ ಮುಖ್ಯಸ್ಥ ಮನೋಜ್ ಪಾಂಡೆ ಮತ್ತು ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ಕಾಶ್ಮೀರದಲ್ಲಿ ಹತ್ಯೆಯಾದ ಪಂಡಿತ ಸಮುದಾಯದವರಿಗೆ ಕೇಜ್ರಿವಾಲ್ ಅವರು ‘ಜನ ಆಕ್ರೋಶ ರ‍್ಯಾಲಿ’ ಸಂದರ್ಭದಲ್ಲಿ ನಮನ ಸಲ್ಲಿಸಿದರು — ಪಿಟಿಐ ಚಿತ್ರ

ಕಾಶ್ಮೀರದಲ್ಲಿ ಹತ್ಯೆ ನಡೆದಾಗಲೆಲ್ಲ ಕೇಂದ್ರ ಗೃಹ ಸಚಿವರು ಉನ್ನತ ಮಟ್ಟದ ಸಭೆ ನಡೆಸುತ್ತಾರೆ. ಆದರೆ, ಕ್ರಿಯಾ ಯೋಜನೆ ಎಲ್ಲಿದೆ?
ಅರವಿಂದ ಕೇಜ್ರಿವಾಲ್ ದೆಹಲಿ ಮುಖ್ಯಮಂತ್ರಿ

ಕಾಶ್ಮೀರಿ ಪಂಡಿತರಿಗೆ ಮನೆಗೆ ಮರಳುವ ಕನಸು ತೋರಿಸಲಾಯಿತು. ಆದರೆ ಈಗ ಅವರನ್ನು ಗುರಿಯಾಗಿಸಿಕೊಂಡು ಹತ್ಯೆ ಮಾಡಲಾಗುತ್ತಿದೆ. ಪಂಡಿತರ ಸಾಮೂಹಿಕ ವಲಸೆ ಆತಂಕಕಾರಿ
ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

‘ಪಂಡಿತರು ಜೀತದಾಳುಗಳಲ್ಲ’

4,500ಕ್ಕೂ ಹೆಚ್ಚು ಕಾಶ್ಮೀರಿ ಪಂಡಿತರಿಗೆ ಪ್ರಧಾನಿ ಪರಿಹಾರ ಯೋಜನೆ ಅಡಿಯಲ್ಲಿ ಕಾಶ್ಮೀರದಲ್ಲಿ ಉದ್ಯೋಗ ನೀಡಿ ಕೇಂದ್ರ ಸರ್ಕಾರವು ಪುನರ್ವಸತಿ ಕಲ್ಪಿಸಿದೆ. ಆದರೆ, ಕಾಶ್ಮೀರದಿಂದ ಹೊರಗೆ ಹೋಗಬಾರದು ಎಂದು ಷರತ್ತು ಹಾಕಲಾಗಿದೆ ಎಂದು ಕೇಜ್ರಿವಾಲ್ ಆಪಾದಿಸಿದ್ದಾರೆ.

‘ಕಾಶ್ಮೀರದಿಂದ ಹೊರಗೆ ವರ್ಗಾವಣೆ ಕೋರಿದರೆ ಕೆಲಸದಿಂದ ವಜಾ ಮಾಡಲಾಗುವುದು. ನೀವು ಕಾಶ್ಮೀರದಲ್ಲಿಯೇ ಕೆಲಸ ಮಾಡಬೇಕು’ ಎಂಬ ಷರತ್ತು ಕರಾರಿನಲ್ಲಿ ಇದೆ. ಈ ಕರಾರನ್ನು ರದ್ದು ಮಾಡಬೇಕು ಎಂಬುದು ಕಾಶ್ಮೀರಿ ಪಂಡಿತರ ಬೇಡಿಕೆಯಾಗಿದೆ. ಈ ಕರಾರನ್ನು ರದ್ದುಪಡಿಸಬೇಕು ಎಂದು ಇಡೀ ದೇಶವೇ ಬಯಸುತ್ತಿದೆ. ಕಾಶ್ಮೀರಿ ಪಂಡಿತರು ಜೀತದಾಳುಗಳಲ್ಲ. ತಮಗೆ ಇಷ್ಟ ಬಂದಲ್ಲಿ ಕೆಲಸ ಮಾಡುವ ಸ್ವಾತಂತ್ರ್ಯ ಅವರಿಗೆ ಇದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಪ್ರಧಾನಿ ಪರಿಹಾರ ಯೋಜನೆ ಅಡಿಯಲ್ಲಿ 2012ರಲ್ಲಿ ಉದ್ಯೋಗ ಪಡೆದುಕೊಂಡ ಸಾವಿರಾರು ಪಂಡಿತರು, ರಾಹುಲ್ ಭಟ್ ಹತ್ಯೆ ನಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ಸಾಮೂಹಿಕ ವಲಸೆಯ ಬೆದರಿಕೆಯನ್ನೂ ಅವರು ಒಡ್ಡಿದ್ದಾರೆ. ಆದರೆ, ಪಂಡಿತ ಸಮುದಾಯದ ಉದ್ಯೋಗಿಗಳನ್ನು ಕಾಶ್ಮೀರದ ಹೊರಗೆ ನಿಯೋಜಿಸುವುದಿಲ್ಲ, ಬದಲಿಗೆ ಸುರಕ್ಷಿತ ಸ್ಥಳಗಳಿಗೆ ವರ್ಗ ಮಾಡಲಾಗುವುದು ಎಂದು ಜಮ್ಮು-ಕಾಶ್ಮೀರ ಆಡಳಿತವು ಶುಕ್ರವಾರ ಸ್ಪಷ್ಟಪಡಿಸಿದೆ.

ದೇಶದ ಜನರನ್ನು ರಕ್ಷಿಸುವುದು ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ ಕರ್ತವ್ಯ. ಶಾ ಅವರೇ ಖುದ್ದಾಗಿ ಕಾಶ್ಮೀರದ ಜನರಿಗೆ ಭದ್ರತೆ ನೀಡಲು ಕ್ರಮ ಕೈಗೊಳ್ಳಬೇಕು
ಮಹೇಶ್ ತಾಪಸೆ
ಎನ್‌ಸಿಪಿ ಮುಖ್ಯ ವಕ್ತಾರ

ಕಾಶ್ಮೀರದಲ್ಲಿರುವ ಪಂಡಿತರು, ಡೋಗ್ರಾಗಳು ಇಲ್ಲಿಯೇ ಉಳಿದು ನಮ್ಮೊಂದಿಗೆ ಕೈಜೋಡಿಸಬೇಕು. ಶತ್ರುಗಳ ಸಂಚನ್ನು ವಿಫಲಗೊಳಿಸಬೇಕು
ರವಿಂದರ್ ರೈನಾ
ಜಮ್ಮು-ಕಾಶ್ಮೀರ ಬಿಜೆಪಿ ಮುಖ್ಯಸ್ಥ

ಇದು ಸರ್ಕಾರದ ವೈಫಲ್ಯ ಮಾತ್ರವಲ್ಲ, ಬದಲಿಗೆ ನಾಗರಿಕರ ವೈಫಲ್ಯವೂ ಹೌದು. ಇಂತಹ ಹತ್ಯೆಗಳನ್ನು ನಿಲ್ಲಿಸಲು ನಾವು ವಿಫಲರಾದರೆ ಅದಕ್ಕಿಂತ ಅವಮಾನಕರವಾದುದು ಬೇರೇನಿಲ್ಲ
ಅಲ್ತಾಫ್ ಬುಖಾರಿ
ಜಮ್ಮು-ಕಾಶ್ಮೀರ ಅಪ್ನಿ ಪಾರ್ಟಿ ಮುಖ್ಯಸ್ಥ

ಸುದ್ದಿ 2 ನಿಮಿಷ

ಕಲ್ಲಿದ್ದಲು ಸರಬರಾಜಿಗಾಗಿ 1,934 ರೈಲುಗಳ ಸೇವೆ ರದ್ದು

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ಮಂಡಳಿಯು ಈ ವರ್ಷ ಸುಮಾರು 9 ಸಾವಿರ ರೈಲು ಸೇವೆಗಳನ್ನು ರದ್ದುಗೊಳಿಸಿದ್ದು, ಅದರಲ್ಲಿ 1,934 ರೈಲುಗಳ ಸೇವೆಯನ್ನು ಕಲ್ಲಿದ್ದಲು ಸರಬರಾಜಿನ ಕಾರಣಕ್ಕಾಗಿ ರದ್ದುಗೊಳಿಸಲಾಗಿದೆ ಎನ್ನುವುದು ಮಾಹಿತಿ ಹಕ್ಕಿನಡಿ (ಆರ್‌ಟಿಐ) ತಿಳಿದುಬಂದಿದೆ.

ಮಾಹಿತಿ ಹಕ್ಕು ಕಾರ್ಯಕರ್ತ ಚಂದ್ರಶೇಖರ್ ಗೌರ್ ಅವರು ಆರ್‌ಟಿಐ ಅಡಿ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗೆ ಉತ್ತರಿಸಿರುವ ರೈಲ್ವೆ ಮಂಡಳಿಯು, ‘ನಿರ್ಮಾಣ ಅಥವಾ ನಿರ್ವಹಣಾ ಕಾರ್ಯಗಳ ಉದ್ದೇಶಕ್ಕಾಗಿ 6,995 ರೈಲುಗಳ ಸೇವೆಯನ್ನು ಹಾಗೂ ಮಾರ್ಚ್‌ನಿಂದ ಮೇ ಅವಧಿವರೆಗೆ ಕಲ್ಲಿದ್ದಲು ಸರಬರಾಜು ಮಾಡುವ ಕಾರಣಕ್ಕಾಗಿ 1,934 ರೈಲುಗಳ ಸೇವೆಯನ್ನು ರದ್ದುಗೊಳಿಸಲಾಗಿದೆ’ ಎಂದು ಮಾಹಿತಿ ನೀಡಿದೆ.

‘ದೇಶದಲ್ಲಿ ತೀವ್ರ ವಿದ್ಯುತ್ ಕೊರತೆ ಉಂಟಾಗಿದ್ದು, ಈ ಸಮಸ್ಯೆಯ ಪರಿಹಾರಕ್ಕಾಗಿ ಪ್ರಯಾಣಿಕರ ಸೇವೆಗಳಿಗಿಂತ ಕಲ್ಲಿದ್ದಲು ಸರಬರಾಜಿಗಾಗಿ ಆದ್ಯತೆಯ ಮೇರೆಗೆ ರೈಲುಗಳನ್ನು ಬಳಸಿಕೊಳ್ಳಲಾಗಿದೆ. ಇದರಿಂದ ಬೇಸಿಗೆಯಲ್ಲಿ ಪ್ರಯಾಣಿಕರಿಗೆ ಅನನುಕೂಲವಾಗಿದೆ’ ಎಂದೂ ರೈಲ್ವೆಯ ಅಧಿಕಾರಿಗಳು ತಿಳಿಸಿದ್ದಾರೆ.

ಒಡಿಶಾ ಸಂಪುಟದಲ್ಲಿ 12 ಹೊಸ ಮುಖ

ಭುವನೇಶ್ವರ (ಪಿಟಿಐ): ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಭಾನುವಾರ ಸಂಪುಟ ಪುನಾರಚನೆ ಮಾಡಿದ್ದು, 13 ಶಾಸಕರು ಸಂಪುಟ ದರ್ಜೆ ಹಾಗೂ ಎಂಟು ಶಾಸಕರು ರಾಜ್ಯ ಸಚಿವ(ಸ್ವತಂತ್ರ ಖಾತೆ)ರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಐವರು ಮಹಿಳೆಯರು ಸೇರಿದಂತೆ 12 ಹೊಸ ಮುಖಗಳಿಗೆ ಅವಕಾಶ ನೀಡಲಾಗಿದೆ. ಲೋಕಸೇವಾ ಭವನದಲ್ಲಿ ನಡೆದ ಸಮಾರಂಭದಲ್ಲಿ ಬಿಜೆಡಿ ಶಾಸಕರಾದ ಜಗನ್ನಾಥ್ ಸರಕಾ, ನಿರಂಜನ್ ಪೂಜಾರಿ ಮತ್ತು ಆರ್.ಪಿ. ಸ್ವೈನ್ ಸೇರಿದಂತೆ 21 ಶಾಸಕರಿಗೆ ರಾಜ್ಯಪಾಲ ಗಣೇಶಿ ಲಾಲ್ ಅವರು ಅಧಿಕಾರ ಮತ್ತು ಗೌಪ್ಯತೆ ಪ್ರಮಾಣ ವಚನ ಬೋಧಿಸಿದರು.

ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಆದ್ಯತೆ ನೀಡಲಾಗಿದೆ. ಶನಿವಾರವಷ್ಟೇ ಎಲ್ಲ 20 ಸಚಿವರು ರಾಜೀನಾಮೆ ಸಲ್ಲಿಸುವ ಮೂಲಕ ಸಂಪುಟ ಪುನಾರಚನೆಗೆ ದಾರಿ ಮಾಡಿಕೊಟ್ಟಿದ್ದರು. ಮೊದಲ ಬಾರಿಗೆ ಪಟ್ನಾಯಕ್ ಅವರು ಎಲ್ಲ 21 ಸ್ಥಾನವನ್ನು ಭರ್ತಿ ಮಾಡಿದ್ದಾರೆ. ಸರ್ಕಾರಿಯಾ ಆಯೋಗದ ಶಿಫಾರಸು ಪ್ರಕಾರ, ಒಡಿಶಾ ಮುಖ್ಯಮಂತ್ರಿ ಸೇರಿದಂತೆ ಗರಿಷ್ಠ 22 ಸಚಿವರನ್ನು ಹೊಂದಬಹುದು.

ರಾಜೀನಾಮೆ ನೀಡಿದ 20 ಸಚಿವರ ಪೈಕಿ ಒಂಬತ್ತು ಮಂದಿಯನ್ನು ಮತ್ತೆ ಸಂಪುಟಕ್ಕೆ ಪಟ್ನಾಯಕ್ ಸೇರಿಸಿಕೊಂಡಿದ್ದಾರೆ.

ವಿಧಾನಸಭಾ ಸ್ಪೀಕರ್ ಎಸ್.ಎನ್.ಪಾಟ್ರೊ ಸಹ ರಾಜೀನಾಮೆ ಸಲ್ಲಿಸಿದ್ದು, ಆದರೆ ಕಾರಣ ತಿಳಿದು ಬಂದಿಲ್ಲ.

ಕಣಿವೆಗೆ ಉರುಳಿದ ಬಸ್: 25 ಮಂದಿ ಸಾವು

ಉತ್ತರಕಾಶಿ, ಉತ್ತರಾಖಂಡ (ಪಿಟಿಐ): ಯಮುನೋತ್ರಿಗೆ ಯಾತ್ರಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಬಸ್ಸೊಂದು ಭಾನುವಾರ ಸಂಜೆ ಇಲ್ಲಿಗೆ ಸಮೀಪದ ದಮ್ಟಾ ಎಂಬಲ್ಲಿ ಕಣಿವೆಗೆ ಉರುಳಿಬಿದ್ದಿದ್ದು, 25 ಮಂದಿ ಮೃತಪಟ್ಟಿದ್ದಾರೆ. ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಯಾತ್ರಿಕರೆಲ್ಲರೂ ಮಧ್ಯಪ್ರದೇಶದ ಪನ್ನಾ ಜಿಲ್ಲೆಯವರು ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಧಾ ರತೂರಿ ತಿಳಿಸಿದ್ದಾರೆ.

‘ರಾಷ್ಟ್ರೀಯ ಹೆದ್ದಾರಿ– 94ರಲ್ಲಿ ಈ ಅಪಘಾತ ಸಂಭವಿಸಿದ್ದು, ಬಸ್ಸಿನಲ್ಲಿ 28 ಮಂದಿ ಪ್ರಯಾಣಿಕರಿದ್ದರು. ಪೊಲೀಸ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಧಾವಿಸಿವೆ. ಹದಿನೇಳು ಮೃತದೇಹಗಳನ್ನು ಕಣಿವೆಯಿಂದ ಹೊರತೆಗೆಯಲಾಗಿದ್ದು, ಉಳಿದವರಿಗಾಗಿ ಶೋಧ ನಡೆಯುತ್ತಿದೆ. ಅಪಘಾತದಲ್ಲಿ ಗಾಯಗೊಂಡ ಮೂವರನ್ನು ದಮ್ಟಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ’ ಎಂದು ಉತ್ತರಕಾಶಿ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ದೇವೇಂದ್ರ ಪಟ್ವಾಲ್ ತಿಳಿಸಿದ್ದಾರೆ.

ಅಪಘಾತದ ಬಗ್ಗೆ ಮಾಹಿತಿ ದೊರೆತ ತಕ್ಷಣ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸಚಿವಾಲಯದ ವಿಪತ್ತು ನಿಯಂತ್ರಣ ಕೊಠಡಿಗೆ ತೆರಳಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ತ್ವರಿತಗೊಳಿಸುವಂತೆ ಉತ್ತರಕಾಶಿಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಸೂಚಿಸಿದರು.

‘ಅಪಘಾತದ ಕುರಿತು ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಧಾಮಿ ಟ್ವೀಟ್ ಮಾಡಿದ್ದಾರೆ.

ಪರಿಹಾರ: ಅಪಘಾತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹ 2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಪರಿಹಾರವನ್ನು ಪ್ರಧಾನಿ ಮೋದಿ ಘೋಷಿಸಿದ್ದಾರೆ. ಘಟನೆ ಕುರಿತು ಮೋದಿ, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಶರಣಾದ ನಕ್ಸಲ್ ಮಹಿಳಾ ಕಮಾಂಡರ್

ಬಿಜಾಪುರ, ಛತ್ತೀಸಗಡ (ಪಿಟಿಐ): ಛತ್ತೀಸಗಡದ ಬಿಜಾಪುರ ಜಿಲ್ಲೆಯಲ್ಲಿ ಪೊಲೀಸರ ಮೇಲಿನ ಹಲವು ದಾಳಿಗಳ ಪ್ರಮುಖ ಆರೋಪಿಯಾಗಿದ್ದ ನಕ್ಸಲ್ ಮಹಿಳಾ ಕಮಾಂಡರ್ ಸೋಮ್ಲಿ ಸೋದಿ ಅಲಿಯಾಸ್ ವನಿತಾ ಶರಣಾಗಿದ್ದಾರೆ. ಮಗಳ ಮೇಲಿನ ಮಮತೆಯಿಂದ ಹಾಗೂ ಆಕೆಯೊಡನೆ ಜೀವನ ನಡೆಸಬೇಕು ಎಂಬ ಆಸೆಯಿಂದ ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಬಿಜಾಪುರದ ಪೊಲೀಸ್ ವರಿಷ್ಠಾಧಿಕಾರಿ ಆಂಜನೇಯ ವರ್ಷ್ಣೈ ತಿಳಿಸಿದ್ದಾರೆ.

32 ವರ್ಷದ ವನಿತಾ ಅವರು 2003ರಿಂದ ನಿಷೇಧಿತ ಬಂಡುಕೋರ ಸಂಘಟನೆ ಜೊತೆ ಕೆಲಸ ಮಾಡುತ್ತಿದ್ದರು. 2018ರಿಂದ ನಕ್ಸಲ್ ತಂಡದ ನಗರಂ ಸ್ಥಳೀಯ ಗುಂಪಿನ ಕಮಾಂಡರ್ ಆಗಿ ಗುರುತಿಸಿಕೊಂಡಿದ್ದರು. ವನಿತಾ ಅವರ ಸುಳಿವು ನೀಡಿದವರಿಗೆ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು. ರಾಜ್ಯ ಸರ್ಕಾರವು ನಕ್ಸಲ್ ಸಂಘಟನೆ ತೊರೆದಿದ್ದಕ್ಕೆ ವನಿತಾ ಅವರಿಗೆ ಪುನರ್ವಸತಿ ಯೋಜನೆಯಡಿ ₹10,000 ಪ್ರೋತ್ಸಾಹ ಧನವನ್ನು ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಅವಘಡ: 300 ಮಂದಿಗೆ ಗಾಯ

ಕಂಟೇನರ್ ಸ್ಫೋಟ, ಬೆಂಕಿ: 49 ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದ ಚಿತ್ತಗಾಂಗ್‌ನಲ್ಲಿರುವ ರಾಸಾಯನಿಕ ಕಂಟೇನರ್ ಡಿಪೋದಲ್ಲಿ ಶನಿವಾರ ರಾತ್ರಿ ಸಂಭವಿಸಿದ ಸ್ಫೋಟ ಮತ್ತು ಬೆಂಕಿ ಅವಘಡದಲ್ಲಿ 49 ಜನರು ಮೃತಪಟ್ಟಿದ್ದು, 300ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಕದಂರಸೂಲ್‌ನಲ್ಲಿರುವ ಬಿ.ಎಂ. ಕಂಟೇನರ್ ಡಿಪೋದಲ್ಲಿ ಈ ದುರಂತ ಸಂಭವಿಸಿದೆ. ‘49 ಜನ ಸತ್ತಿದ್ದಾರೆ. ಗಾಯಾಳುಗಳನ್ನು ಸಿಎಂಸಿಎಚ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರ ಸಂಖ್ಯೆ ಹೆಚ್ಚುವ ಸಂಭವವಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾತ್ರಿ 11.45ರ ವೇಳೆಗೆ ಭಾರಿ ಸ್ಫೋಟ ಉಂಟಾಗಿದೆ. ರಾಸಾಯನಿಕ ಒತ್ತಡದಿಂದಾಗಿ ಬೆಂಕಿ ಒಂದು ಕಂಟೇನರ್‌ನಿಂದ ಇನ್ನೊಂದು ಕಂಟೇನರ್‌ಗೆ ತ್ವರಿತಗತಿಯಲ್ಲಿ ವ್ಯಾಪಿಸಿದೆ ಎಂದು ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ನೂರುಲ್ ಅಲಂ ತಿಳಿಸಿದರು.

ಸ್ಫೋಟದ ತೀವ್ರತೆ ಪರಿಣಾಮ ಆಸುಪಾಸಿನ ಕಟ್ಟಡಗಳ ಮೇಲೂ ಉಂಟಾಗಿದ್ದು, ಸುಮಾರು 4 ಕಿ.ಮೀವರೆಗೂ ಮನೆ, ಕಟ್ಟಡಗಳ ಕಿಟಕಿ ಗಾಜುಗಳು ಪುಡಿಯಾಗಿವೆ ಎಂದು ತಿಳಿಸಿದರು.

ಹೈಡ್ರೋಜನ್ ಪೆರೊಕ್ಸೈಡ್ ಸೇರಿ ಹಲವು ರಾಸಾಯನಿಕಗಳನ್ನು ಡಿಪೋದಲ್ಲಿ ಸಂಗ್ರಹಿಸಿಡಲಾಗಿತ್ತು ಎಂದು ಅಗ್ನಿಶಾಮಕಸೇವೆಯ ಮುಖ್ಯ ಬ್ರಿಗೇಡಿಯರ್ ಜನರಲ್ ಮಹಮ್ಮದ್ ಮೈನುದ್ದೀನ್ ತಿಳಿಸಿದರು.

‘ಸ್ಫೋಟಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ಒದಗಿಸಲಿದ್ದು, ಪರಿಹಾರ ನೀಡಲಾಗುವುದು. ಮೃತರ ಕುಟುಂಬದ ಹೊಣೆಯನ್ನು ಸಂಸ್ಥೆ ವಹಿಸಲಿದೆ’ ಎಂದು ಬಿಎಂ ಕಂಟೇನರ್ ಡಿಪೋ ನಿರ್ದೇಶಕ ಮುಜಿಬುರ್ ರಹಮಾನ್ ಪ್ರತಿಕ್ರಿಯಿಸಿದರು.

ಬಾಂಗ್ಲಾದೇಶದ ಚಿತ್ತಗಾಂಗ್‌ನಲ್ಲಿ ಸ್ಫೋಟ ಸಂಭವಿಸಿದ ರಾಸಾಯನಿಕ ಕಂಟೇನರ್ ಡಿಪೋದಿಂದ ಮೃತದೇಹವೊಂದನ್ನು ಹೊರತಂದರು –ಎಎಫ್‌ಪಿ ಚಿತ್ರ

ರಾಜ್ಯಸಭೆ ಚುನಾವಣೆ: ಮಹಾರಾಷ್ಟ್ರಕ್ಕೆ ಕಾಂಗ್ರೆಸ್ ವೀಕ್ಷಕರಾಗಿ ಖರ್ಗೆ ನೇಮಕ

ನವದೆಹಲಿ (ಪಿಟಿಐ): ರಾಜ್ಯಸಭೆಗೆ ಜೂನ್ 10 ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಹಾರಾಷ್ಟ್ರಕ್ಕೆ ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಈ ಸೂಚನೆ ನೀಡಿದ್ದು, ಭೂಪೇಶ್ ಬಘೇಲ್ ಮತ್ತು ರಾಜೀವ್ ಶುಕ್ಲಾ ಅವರನ್ನು ಹರಿಯಾಣಕ್ಕೆ ಹಾಗೂ ಪವನ್ ಕುಮಾರ್ ಬನ್ಸಾಲ್ ಮತ್ತು ಟಿ.ಎಸ್.ಸಿಂಗ್ ದೇವ್ ಅವರನ್ನು ರಾಜಸ್ಥಾನಕ್ಕೆ ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಸಲ್ಮಾನ್ ಖಾನ್‌ಗೆ ಬೆದರಿಕೆ ಪತ್ರ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಮತ್ತು ಅವರ ತಂದೆ ಸಲೀಂ ಖಾನ್ ಅವರಿಗೆ ಭಾನುವಾರ ಅನಾಮಧೇಯರಿಂದ ಜೀವ ಬೆದರಿಕೆ ಪತ್ರ ಬಂದಿದೆ. ಈ ಬೆನ್ನಲ್ಲೇ ಮುಂಬೈ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಎಂದಿನಂತೆ ಸಲೀಂ ಖಾನ್ ಭಾನುವಾರ ಮುಂಜಾನೆ ವಾಕ್ ಮುಗಿಸಿ ಬಾಂದ್ರಾ ಬಂದ್‌ಸ್ಟಾಂಡ್‌ನಲ್ಲಿ ಬೆಂಚಿನ ಮೇಲೆ ಕುಳಿತಿದ್ದರು. ಈ ವೇಳೆ ಬಂದ ವ್ಯಕ್ತಿಯೊಬ್ಬ ಪತ್ರವನ್ನು ಕೊಟ್ಟು ತೆರಳಿದ್ದಾನೆ. ಅದರಲ್ಲಿ ಸಲ್ಮಾನ್ ಮತ್ತು ಸಲೀಂ ಅವರನ್ನು ಕೊಲ್ಲುವ ಬೆದರಿಕೆಯೊಡ್ಡಲಾಗಿದೆ. ಬಳಿಕ ಸಲೀಂ ಖಾನ್ ಬಾಂದ್ರಾ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣ ಸಂಬಂಧ ತನಿಖೆ ನಡೆಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಭಯೋತ್ಪಾದಕನ ಬಂಧನ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ ಜಿಲ್ಲೆಯಲ್ಲಿ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಯ ತಾಲಿಬ್ ಹುಸೇನ್ ಎಂಬ ಭಯೋತ್ಪಾದಕನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಪೊಲೀಸರು, ರಾಷ್ಟ್ರೀಯ ರೈಫಲ್ಸ್ ಪಡೆ ಹಾಗೂ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಭಾರತ್ ಜೋಡೋ ಯಾತ್ರೆ: ಕಾಂಗ್ರೆಸ್ ನಾಯಕರ ಸಭೆ

ನವದೆಹಲಿ (ಪಿಟಿಐ): ಉದಯಪುರದಲ್ಲಿ ಇತ್ತೀಚೆಗೆ ನಡೆದ ನವ ಸಂಕಲ್ಪ ಶಿಬಿರದಲ್ಲಿ ಪಕ್ಷವು ಘೋಷಿಸಿದ ‘ಭಾರತ್ ಜೋಡೋ ಯಾತ್ರೆ’ ಗಾಗಿ ಯೋಜನೆ ರೂಪಿಸಲು ಕಾಂಗ್ರೆಸ್‌ನ ಹಿರಿಯ ನಾಯಕರು ಭಾನುವಾರ ಸಭೆ ನಡೆಸಿದರು.

‘ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಾತ್ರೆ ನಡೆಯಲಿದ್ದು, ಅಕ್ಟೋಬರ್ 2 ರಂದು ಪ್ರಾರಂಭವಾಗಲಿದೆ. ಯಾತ್ರೆಯ ಯಶಸ್ಸಿಗಾಗಿ ಪಕ್ಷದ ಕೇಂದ್ರ ಯೋಜನಾ ಸಮಿತಿಯ ಮೊದಲ ಸಭೆ ನಡೆಯಿತು’ ಎಂದು ಸಮಿತಿಯ ಸಂಚಾಲಕ ದಿಗ್ವಿಜಯ ಸಿಂಗ್ ಟ್ವಿಟ್ಟರ್‌ನಲ್ಲಿ ಬರೆದುಕೊಂಡಿದ್ದಾರೆ.

ದೇಶದಲ್ಲಿ ಕೋವಿಡ್ 4ನೇ ಅಲೆಯ ಸುಳಿವು ಇಲ್ಲ: ತಜ್ಞರ ಹೇಳಿಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತದಲ್ಲಿ ಏರಿಕೆಯಾಗುತ್ತಿರುವ ಕೊರೊನಾ ಪ್ರಕರಣಗಳು ನಾಲ್ಕನೇ ಅಲೆಗೆ ಕಾರಣವಾಗುವ ಸುಳಿವು ಕಂಡುಬರುತ್ತಿಲ್ಲ. ಹೀಗಾಗಿ ಕೋವಿಡ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಮುಂಬೈನ ತಜ್ಞ ಡಾ.ಈಶ್ವರ ಗಿಲಡಾ ಹೇಳಿದ್ದಾರೆ.

ಆದಾಗ್ಯೂ, ಲಸಿಕಾ ಕಾರ್ಯಕ್ರಮವನ್ನು ತೀವ್ರಗೊಳಿಸಬೇಕು. ಜೊತೆಗೆ ಸಾಮಾಜಿಕ ಅಂತರ ಸೇರಿದಂತೆ ಕೋವಿಡ್ ನಿರ್ಬಂಧ ಕ್ರಮಗಳನ್ನು ಪಾಲಿಸಬೇಕು ಎಂದು ಹೇಳಿದ್ದಾರೆ.

ಈ ಬಗ್ಗೆ ಭಾನುವಾರ ಮಾತನಾಡಿದ ಡಾ. ಈಶ್ವರ ಗಿಲಡಾ, ‘ಮಹಾರಾಷ್ಟ್ರ ಅಥವಾ ಮುಂಬೈನಲ್ಲಿ ಅಷ್ಟೇ ಅಲ್ಲದೆ, ಕೇರಳದಲ್ಲೂ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ ಎಂಬುದರಲ್ಲಿ ಅನುಮಾನವೇನಿಲ್ಲ. ದೇಶದಲ್ಲಿನ 3ನೇ ಅಲೆಗೆ ಈ ಎರಡೂ ರಾಜ್ಯಗಳು ಕಾರಣವಾಗಿದ್ದವು. ಆದರೆ, ಆಮ್ಲಜನಕ, ಬೆಡ್‌ಗಳ ಬೇಡಿಕೆ ಹೆಚ್ಚಾಗಿಲ್ಲ. ಜೊತೆಗೆ ಕೋವಿಡ್‌ಗೆ ಬಲಿಯಾಗುವವರ ಸಂಖ್ಯೆಯೂ ಹೆಚ್ಚಾಗುತ್ತಿಲ್ಲ. ಹೀಗಾಗಿ ಆತಂಕಪಡುವ ಅಗತ್ಯವಿಲ್ಲ’ ಎಂದು ಹೇಳಿದರು.

ಕಳೆದ ವಾರ ದೇಶದಲ್ಲಿ ಕೋವಿಡ್‌ಗೆ 106 ಮಂದಿ ಬಲಿಯಾಗಿದ್ದರು. ಕೋವಿಡ್ ಪ್ರಕರಣಗಳಲ್ಲಿ ಕಳೆದ ವಾರ 25,036 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದವು. ಇದು 2 ವಾರಗಳ ಹಿಂದೆ ದಾಖಲಾಗಿದ್ದ 16,672ಕ್ಕೆ ಹೋಲಿಸಿದರೆ, ಶೇ 50ರಷ್ಟು ಪ್ರಕರಣಗಳು ಏರಿಕೆ ಕಂಡುಬಂದಿತ್ತು. ಆದರೆ, ಸಾವಿನ ಸಂಖ್ಯೆಯಲ್ಲಿ ಶೇ 39ರಷ್ಟು ಇಳಿಕೆ ಕಂಡುಬಂದಿದೆ.

ಜುಲೈ 31ರೊಳಗೆ 4.7 ಕೋಟಿ ಜನರಿಗೆ ಮುನ್ನೆಚ್ಚರಿಕಾ ಡೋಸ್

ನವದೆಹಲಿ(ಪಿಟಿಐ): ಮನೆ-ಮನೆಗೂ ತೆರಳಿ ಫಲಾನುಭವಿಗಳಿಗೆ ಲಸಿಕೆ ನೀಡುವ ತನ್ನ ಮಹತ್ವಾಕಾಂಕ್ಷೆಯ ‘ಹರ್ ಘರ್ ದಸ್ತಕ್-2.0’ ಆಂದೋಲನದ ಮೂಲಕ ಜುಲೈ31ರ ಒಳಗಾಗಿ 60 ವರ್ಷಕ್ಕಿಂತ ಹೆಚ್ಚಿನ ವಯೋಮಾನದ 4.7 ಕೋಟಿ ಜನರಿಗೆ ಮುನ್ನೆಚ್ಚರಿಕಾ ಡೋಸ್ ನೀಡಲು ಕೇಂದ್ರ ಸರ್ಕಾರ ಚಿತ್ತ ಹರಿಸಿದೆ.

ನಟ ಶಾರುಖ್‌ಗೆ ಕೋವಿಡ್ ಧೃಢ

ಕೋಲ್ಕತ್ತ: ಬಾಲಿವುಡ್ ನಟ ಶಾರುಖ್ ಖಾನ್ ಅವರಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಕೆಲ ದಿನಗಳ ಹಿಂದೆ ನಟ, ನಿರ್ದೇಶಕ ಕರಣ್ ಜೋಹರ್ ಅವರ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಶಾರುಕ್ ಖಾನ್ ಸೇರಿದಂತೆ ಬಾಲಿವುಡ್‌ನ ಕೆಲ ನಟ–ನಟಿಯರು ಪಾಲ್ಗೊಂಡಿದ್ದರು. ಇದರಲ್ಲಿ ಪಾಲ್ಗೊಂಡಿದ್ದ ಕೆಲವರಿಗೆ ಕೊರೊನಾ ಸೋಂಕು ತಗುಲಿರುವುದು ವರದಿಯಾಗಿತ್ತು.

34 ದಿನಗಳ ಬಳಿಕ ಶೇ 1ಕ್ಕಿಂತ ಹೆಚ್ಚಾದ ದೈನಂದಿನ ದೃಢ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ದೃಢಪಟ್ಟ 4,270 ಹೊಸ ಪ್ರಕರಣಗಳು ವರದಿಯಾಗಿದ್ದು, ದೈನಂದಿನ ಖಚಿತ ಸೋಂಕಿತರ ಪ್ರಮಾಣ 34 ದಿನಗಳ ಬಳಿಕ ಶೇ 1ಕ್ಕಿಂತ ಹೆಚ್ಚಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಭಾನುವಾರ ಬೆಳಿಗ್ಗೆ 8ಕ್ಕೆ ಬಿಡುಗಡೆಯಾಗಿರುವ ಅಂಕಿ-ಅಂಶದ ಪ್ರಕಾರ, ಸಕ್ರಿಯ ಪ್ರಕರಣಗಳ ಸಂಖ್ಯೆ 24,052ಕ್ಕೆ ತಲುಪಿದೆ. 15 ಮಂದಿ ಮೃತಪಟ್ಟಿದ್ದು, ಮೃತರ ಒಟ್ಟು ಸಂಖ್ಯೆ 5,24,692ಕ್ಕೆ ಏರಿದೆ.

ಇದುವರೆಗೆ ಒಟ್ಟು 4,31,76,817 ಪ್ರಕರಣಗಳು ದೇಶದಲ್ಲಿ ವರದಿಯಾಗಿವೆ. ಇದರಲ್ಲಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇಕಡ 0.06 ಆಗಿದ್ದು, ಶೇಕಡ 98.73 ಸೋಂಕಿತರು ಚೇತರಿಸಿಕೊಂಡಿದ್ದಾರೆ.

ಕೋವಿಡ್: 300ರ ಗಡಿ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 301 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಮಾರ್ಚ್ ಮೊದಲ ವಾರದ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಏಪ್ರಿಲ್‌ನಲ್ಲಿ 50ರ ಆಸುಪಾಸಿನಲ್ಲಿತ್ತು. ಹತ್ತು ದಿನಗಳಿಂದ ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ.

ಭಾನುವಾರ ಎಂಟು ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ದೃಢಪಟ್ಟಿದ್ದು, ಬೆಂಗಳೂರಿನಲ್ಲಿ 291 ಮಂದಿಗೆ ಸೋಂಕು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2,414ಕ್ಕೆ ಏರಿಕೆಯಾಗಿದೆ. ಯಾದಗಿರಿ, ಮಂಡ್ಯ ಸೇರಿದಂತೆ 10 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳಿಲ್ಲ. 15 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 2,294 ಸೋಂಕಿತರು ಇದ್ದಾರೆ.

ಒಂದು ದಿನದಲ್ಲಿ 21,413 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.40ರಷ್ಟು ಇದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.53 ಲಕ್ಷ ದಾಟಿದೆ. 39.10 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

ಶೇ 10ರಷ್ಟು ಮಿಶ್ರಣದ ಗುರಿ ಐದು ತಿಂಗಳು ಮೊದಲೇ ಸಾಧನೆ: ಕೇಂದ್ರ

2025ರಲ್ಲಿ ಪೆಟ್ರೋಲ್‌ನಲ್ಲಿ ಶೇ 20 ಎಥೆನಾಲ್

ನವದೆಹಲಿ (ಪಿಟಿಐ): ತೈಲ ಆಮದು ಅವಲಂಬನೆ ತಗ್ಗಿಸಲು ಮತ್ತು ಪರಿಸರ ಸಂರಕ್ಷಣೆಗಾಗಿ 2025–26ರ ಹೊತ್ತಿಗೆ ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ಹೇಳಿದೆ. ಪೆಟ್ರೋಲ್‌ನಲ್ಲಿ ಶೇ 10ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ಐದು ತಿಂಗಳ ಮೊದಲೇ ಸಾಧಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ವಿಶ್ವ ಪರಿಸರ ದಿನ ಕಾರ್ಯಕ್ರಮದಲ್ಲಿ ಈ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಪ್ರಕಟಿಸಿದರು.

ಕಬ್ಬು ಮತ್ತು ಇತರ ಕೃಷಿ ಉತ್ಪನ್ನಗಳಿಂದ ತೆಗೆದ ಎಥೆನಾಲ್ ಅನ್ನು ಪೆಟ್ರೋಲ್‌ಗೆ ಶೇ 10ರಷ್ಟು ಮಿಶ್ರಣ ಮಾಡಲು 2022ರ ನವೆಂಬರ್‌ನ ಗಡುವು ಇರಿಸಿಕೊಳ್ಳಲಾಗಿತ್ತು. ಆದರೆ ಅದನ್ನು ಜೂನ್ ಹೊತ್ತಿಗೆ ಸಾಧಿಸಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.ನ ಪ್ರಯತ್ನದಿಂದ ಇದು ಸಾಧ್ಯವಾಯಿತು ಎಂದು ಸರ್ಕಾರದ ಪ್ರಕಟಣೆಯು ತಿಳಿಸಿದೆ.

ಎಥೆನಾಲ್ ಮಿಶ್ರಣ ಮಾಡುವುದರಿಂದ ವಾರ್ಷಿಕ ₹41,500 ಕೋಟಿ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ, ಇದರಿಂದಾಗಿ ರೈತರಿಗೆ ₹40,600 ಕೋಟಿಯನ್ನು ತ್ವರಿತವಾಗಿ ವಿತರಿಸಲು ಸಾಧ್ಯವಾಗಿದೆ. ಜತೆಗೆ, ಹಸಿರು ಮನೆ ಅನಿಲ ಹೊರಸೂಸುವಿಕೆ 27 ಲಕ್ಷ ಟನ್‌ಗಳಷ್ಟು ಕಡಿಮೆಯಾಗಿದೆ ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ಅಮೆರಿಕ, ಬ್ರೆಜಿಲ್, ಐರೋಪ್ಯ ಒಕ್ಕೂಟ ಮತ್ತು ಚೀನಾ ಬಳಿಕ ಅತಿ ಹೆಚ್ಚು ಎಥೆನಾಲ್ ಉತ್ಪಾದಿಸುವ ಐದನೇ ದೇಶ ಭಾರತ.

ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ ಮಾಡುವುದರಿಂದ ನವೀಕರಿಸಬಹುದಾದ ಇಂಧನ ಬಳಕೆಯ ಪ್ರಮಾಣವನ್ನು ಹೆಚ್ಚಿಸಿದಂತಾಗುತ್ತದೆ. ಹೆಚ್ಚುವರಿಯಾಗಿ ಇರುವ ಅಕ್ಕಿ ಮತ್ತು ಹಾಳಾದ ಧಾನ್ಯಗಳನ್ನು ಎಥೆನಾಲ್ ಉತ್ಪಾದಿಸಲು ಬಳಸಬಹುದಾಗಿದೆ.

ಶೇ 20ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್ ಕೆಲವು ಪೆಟ್ರೋಲ್ ಪಂಪ್‌ಗಳಲ್ಲಿ 2023ರ ಏಪ್ರಿಲ್‌ನಿಂದಲೇ ಲಭ್ಯ ಆಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮುಖ್ಯಾಂಶಗಳು

- ಈ ವರ್ಷ ಎಥೆನಾಲ್ ಲಭ್ಯತೆ 450 ಕೋಟಿ ಲೀಟರ್‌ಗೆ ಹೆಚ್ಚಳವಾಗಲಿದೆ
- ಎಥೆನಾಲ್ ಲಭ್ಯತೆಯನ್ನು 750 ಕೋಟಿ ಲೀಟರ್‌ಗೆ ಹೆಚ್ಚಿಸುವ ಗುರಿ ಇದೆ

ಮೋದಿ ಅವರು ದೇಶದ ಪರಿಸರ ಕಾನೂನುಗಳನ್ನು ದುರ್ಬಲಗೊಳಿಸಿದ್ದಾರೆ. ಆದರೂ ತಾವು ಪರಿಸರ ಸಂರಕ್ಷಣೆಯ ಚಾಂಪಿಯನ್ ಎಂಬುದಾಗಿ ಜಾಗತಿಕ ವೇದಿಕೆಗಳಲ್ಲಿ ಬೂಟಾಟಿಕೆ ಪ್ರದರ್ಶಿಸುತ್ತಿದ್ದಾರೆ
ಜೈರಾಂ ರಮೇಶ್, ಕಾಂಗ್ರೆಸ್ ಮುಖಂಡ

ಮಣ್ಣು ಸಂರಕ್ಷಣೆ ಮಹತ್ವ ಸಾರಿದ ಪ್ರಧಾನಿ ಮೋದಿ

‘ಮಣ್ಣು ಸಂರಕ್ಷಣೆ ಅಭಿಯಾನ’ದ ಅಂಗವಾಗಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಮಣ್ಣಿನ ಸಂರಕ್ಷಣೆಗೆ ಐದು ಅಂಶಗಳು ಮುಖ್ಯ ಎಂದರು. ಮಣ್ಣಿನಲ್ಲಿ ಬದುಕುವ ಜೀವಿಗಳನ್ನು ಉಳಿಸಲು ಅದನ್ನು ರಾಸಾಯನಿಕಗಳಿಂದ ಮುಕ್ತಗೊಳಿಸುವುದು, ಮಣ್ಣಿನಲ್ಲಿ ತೇವಾಂಶ ಉಳಿಯುವಂತೆ ನೋಡಿಕೊಳ್ಳುವುದು, ನೀರಿನ ಲಭ್ಯತೆಯನ್ನು ಹೆಚ್ಚಿಸುವುದು, ನೀರಿನ ಕೊರತೆಯಿಂದ ಮಣ್ಣಿಗೆ ಆಗುತ್ತಿರುವ ಹಾನಿಯನ್ನು ತಡೆಗಟ್ಟುವುದು, ಅರಣ್ಯಗಳ ನಾಶದಿಂದ ಉಂಟಾಗುತ್ತಿರುವ ಮಣ್ಣಿನ ಸವಕಳಿಯನ್ನು ನಿಯಂತ್ರಣ ಅತಿಮುಖ್ಯ ಕ್ರಮಗಳು ಎಂದು ವಿವರಿಸಿದರು.

ಮಣ್ಣಿನ ವಿಧಗಳು ಯಾವುವು, ಮಣ್ಣಿನಲ್ಲಿ ಯಾವ ಅಂಶಗಳ ಕೊರತೆಯಿದೆ, ಅದು ಎಷ್ಟು ಪ್ರಮಾಣದ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲದು ಎಂಬ ಮಾಹಿತಿಗಳು ದೇಶದ ರೈತರಿಗೆ ಲಭ್ಯವಿರಲಿಲ್ಲ. ಸರ್ಕಾರವು ಮಣ್ಣಿನ ಆರೋಗ್ಯ ಕಾರ್ಡ್ ಅಭಿಯಾನ ಆರಂಭಿಸಿದ ಬಳಿಕ, ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ ಎಂದು ಅವರು ಹೇಳಿದರು.

ನೈಸರ್ಗಿಕ ಕೃಷಿಯು ನಮ್ಮ ದೊಡ್ಡ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟರು. 2030ರೊಳಗೆ 2.6 ಕೋಟಿ ಹೆಕ್ಟೇರ್ ಬರಡು ಭೂಮಿಯನ್ನು ಫಲವತ್ತಾದ ಭೂಮಿಯಾಗಿ ಪರಿವರ್ತಿಸಲಾಗುವುದು ಎಂದರು.

ತಲೆಮರೆಸಿಕೊಂಡ 5ನೇ ಆರೋಪಿಗೆ ಪೊಲೀಸರ ಶೋಧ

ಸಾಮೂಹಿಕ ಅತ್ಯಾಚಾರ: ಮತ್ತೊಬ್ಬ ಬಾಲಾರೋಪಿ ವಶಕ್ಕೆ

ಹೈದರಾಬಾದ್ (ಪಿಟಿಐ): ಇಲ್ಲಿನ ಜುಬಿಲಿ ಹಿಲ್ಸ್ ಬಂಜಾರದಲ್ಲಿ 17 ವರ್ಷದ ಬಾಲಕಿ ಮೇಲೆ ಐವರು ಸೇರಿ ನಡೆಸಿದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಮತ್ತೊಬ್ಬ ಬಾಲಾರೋಪಿಯನ್ನು ನಗರ ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಶನಿವಾರವಷ್ಟೇ ಇಬ್ಬರು ಬಾಲಾರೋಪಿಗಳನ್ನು ವಶಕ್ಕೆ ಪಡೆದು, ಸಾದುದ್ದೀನ್ ಮಲ್ಲಿಕ್ (18) ಎಂಬ ಆರೋಪಿನ್ನು ಪೊಲೀಸರು ಬಂಧಿಸಿದ್ದರು. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ಬಂಧನಕ್ಕೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಪ್ರಕರಣದಲ್ಲಿ ಭಾಗಿಯಾದವರಲ್ಲಿ ಒಬ್ಬಾತ ತೆಲಂಗಾಣ ಆಡಳಿತರೂಢ ಟಿಆರ್‌ಎಸ್‌ನ ಮೈತ್ರಿ ಪಕ್ಷ ಎಐಎಂಐಎಂನ ಶಾಸಕರ ಪುತ್ರ ಎನ್ನುವ ಗಂಭೀರ ಆರೋಪಗಳು ಕೇಳಿಬರುತ್ತಿರುವ ನಡುವೆ, ತೆಲಂಗಾಣ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಅವರು ಎರಡು ದಿನಗಳ ಒಳಗೆ ಪ್ರಕರಣ ಸಂಬಂಧ ವಿವರವಾದ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಆದೇಶಿಸಿದ್ದಾರೆ.

‘ರಾಜ್ಯಪಾಲರು ಈ ಹೇಯ ಘಟನೆಯ ಬಗ್ಗೆ ತೀವ್ರ ನೊಂದಿದ್ದು, ದುಃಖಿತರಾಗಿದ್ದಾರೆ’ ಎಂದು ತಮಿಳಿಸೈ ಅವರ ಪತ್ರಿಕಾ ಕಾರ್ಯದರ್ಶಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪ್ರಕರಣದಲ್ಲಿ ಭಾಗಿಯಾದ ಐವರ ಪೈಕಿ ಒಬ್ಬ ವಯಸ್ಕ ಮತ್ತು ಇಬ್ಬರು ಬಾಲಾರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಉಳಿದ ಆರೋಪಿಗಳ ಬಂಧನಕ್ಕೆ ಪ್ರಯತ್ನ ಮುಂದುವರಿದಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಪಶ್ಚಿಮ ವಲಯದ ಡಿಸಿಪಿ ಜೋಯಲ್ ಡೇವಿಸ್ ತಿಳಿಸಿದ್ದಾರೆ.

ಮೇ 28ರಂದು ಹೈದರಾಬಾದ್ ನಗರದ ಜುಬಿಲಿ ಹಿಲ್ಸ್ ಬಂಜಾರಾ ಪ್ರದೇಶದ ಪಬ್‌ನಲ್ಲಿ ಹಗಲಿನ ಪಾರ್ಟಿ ಮುಗಿಸಿ ಮನೆಗೆ ವಾಪಸಾಗುತ್ತಿದ್ದ ಬಾಲಕಿಯನ್ನು ಡ್ರಾಪ್ ಕೊಡುವ ನೆಪದಲ್ಲಿ ಕಾರಿನಲ್ಲಿ ಕರೆದೊಯ್ದು, ಮೂವರು ಬಾಲಕರು ಸೇರಿ ಐವರು ಕಾರಿನಲ್ಲೇ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಮೂರು ದಿನಗಳ ನಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಪ್ರಕರಣ ಮುಚ್ಚಿಹಾಕಲು ತೆಲಂಗಾಣ ಪೊಲೀಸರು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಪ್ರತಿಭಟಿಸುತ್ತಿರುವ ಬಿಜೆಪಿ, ಕಾಂಗ್ರೆಸ್ ಹಾಗೂ ಮಹಿಳಾ ಸಂಘಟನೆಗಳು ಕೆ.ಚಂದ್ರಶೇಖರ್ ರಾವ್ ನೇತೃತ್ವದ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿವೆ. ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು, ನಿಷ್ಪಕ್ಷಪಾತ ತನಿಖೆಯನ್ನು ಖಾತ್ರಿಪಡಿಸಬೇಕು ಎಂದು ತೆಲಂಗಾಣ ಸರ್ಕಾರವನ್ನು ಒತ್ತಾಯಿಸಿವೆ.

ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ಬಾಲಕಿಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಿ ಹೈದರಾಬಾದ್‌ನಲ್ಲಿ ಶುಕ್ರವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಅಧ್ಯಯನಕ್ಕಾಗಿ ವಿದೇಶಕ್ಕೆ ತೆರಳುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದೇಶಿ ವಿವಿಗಳಲ್ಲಿ ಪ್ರವೇಶಾವಕಾಶ ಪ್ರಕ್ರಿಯೆ ಹೇಗಿದೆ?

ಸಂಖ್ಯೆ-ಸುದ್ದಿ ಕರ್ನಾಟಕದ ಕಾಡಿನ ಸ್ವರೂಪ ಬದಲು
ಬಡ್ಡಿದರ ಶೇ 0.35 ಹೆಚ್ಚಳ ಸಾಧ್ಯತೆ 9
ಲಹರ್ ಸಿಂಗ್ ಗೆಲುವಿಗೆ ಬಿಜೆಪಿ ತಂತ್ರಗಾರಿಕೆ 4
ಪಠ್ಯಪುಸ್ತಕ ಪರಿಷ್ಕರಣೆ ವಿವಾದ
ಕುವೆಂಪು, ಹುಯಿಲಗೋಳ ಚಿತ್ರವೂ ಮಾಯ! 4

ಬಿಬಿಎಂಪಿ: ಭ್ರಷ್ಟರ 'ಕಾಮಧೇನು'

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರಾಡಳಿತ ಸಂಸ್ಥೆಗಳಲ್ಲಿ ಲಂಚ ನೀಡದೇ ಯಾವುದೇ ಸೇವೆ ಪಡೆಯುವುದು ದುಸ್ತರ ಎಂಬ ಸ್ಥಿತಿ ಇದೆ. ಸಣ್ಣ ಪುಟ್ಟ ನಗರಾಡಳಿತ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಮಿತ ಪ್ರಮಾಣದಲ್ಲಿ ಇದ್ದರೆ, ರಾಜಧಾನಿಯ ಆಡಳಿತದ ಚುಕ್ಕಾಣಿ ಹಿಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಂತೂ (ಬಿಡಿಎ) ಭ್ರಷ್ಟಾಚಾರದ ಕೂಪಗಳಾಗಿ ಬಿಟ್ಟಿವೆ.



ಬಿಬಿಎಂಪಿಯಲ್ಲಂತೂ ಯಾವುದೇ ಸೇವೆಯಲ್ಲಿನ ಭ್ರಷ್ಟಾಚಾರ ಒಂದು ಬಗೆಯದ್ದಾದರೆ, ಕಾಮಗಾರಿಗಳಲ್ಲಿ ನಡೆಯುವ ಭ್ರಷ್ಟಾಚಾರದ್ದು ಇನ್ನೊಂದು ಕರಾಳ ರೂಪ. ಈ ಪಾಲಿಕೆಯು ಭ್ರಷ್ಟ ಅಧಿಕಾರಿಗಳ ಪಾಲಿಗೆ ಕಾಮಧೇನುವಿನಂತಿದೆ.

ಸಾಕಪ್ಪಾ ಸಾಕು ಬಿಡಿಎ ಸಹವಾಸ

ಭ್ರಷ್ಟಾಚಾರದಲ್ಲಿ ಬಿಬಿಎಂಪಿಯದು ಒಂದು ರೀತಿಯ ಕತೆಯಾದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದರಲ್ಲಿ (ಬಿಡಿಎ) ಲಂಚದ ಅವತಾರವೇ ಬೇರೆ ರೀತಿಯದು. ಖಾಸಗಿ ಬಡಾವಣೆ ನಕ್ಷೆಗಳಿಗೆ ಅನುಮೋದನೆ ಪಡೆಯುವುದು, ಖಚಿತ ಅಳತೆ ವರದಿ ಪಡೆಯುವುದು... ಹೀಗೆ ಪ್ರತಿಯೊಂದಕ್ಕೂ 'ಕಾಣಿಕೆ' ಸಂದಾಯವಾಗಲೇ ಬೇಕು. ಇನ್ನು ಬಿಡಿಎ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ನಿವೇಶನ ಪಡೆದವರೂ ಮನೆ ಕಟ್ಟಿ ಮುಗಿಸುವಾಗ ಯಾಕಪ್ಪಾ ಬಿಡಿಎ ನಿವೇಶನ ಪಡೆದೆನೋ ಎಂದು ಹೈರಾಣಾಗುವಂತಹ ಸ್ಥಿತಿ ಇದೆ.

ಯಾರದೋ ನಿವೇಶನವನ್ನು ಇನ್ಯಾರದೋ ಹೆಸರಿಗೆ ನೋಂದಣಿ ಮಾಡುವುದು, ಕಡತಗಳನ್ನು ನಾಪತ್ತೆ ಮಾಡಿ ಹಣಕ್ಕಾಗಿ ಪೀಡಿಸುವುದು, ಮೂಲಸೌಕರ್ಯ ಒದಗಿಸಲು ಸತಾಯಿಸುವುದು, ಒಂದೇ ನಿವೇಶನವನ್ನು ಒಬ್ಬರಿಗಿಂತ ಹೆಚ್ಚು ಮಂದಿಯ ಹೆಸರಿಗೆ ನೋಂದಣಿ ಮಾಡುವುದು, ಹಂಚಿಕೆಯಾದ ನಿವೇಶನವನ್ನು 'ರೀ ಡು' ಹೆಸರಿನಲ್ಲಿ ದಿಢೀರ್ ರದ್ದುಪಡಿಸುವುದು... ಬಿಡಿಎನಲ್ಲಿ ನಡೆಯುವ ಕರ್ಮಕಾಂಡಗಳು ಒಂದೆರಡಲ್ಲ. ಅಧಿಕಾರಿಗಳ ಕೈ ಬಿಸಿ ಮಾಡಿದರೆ, ಅತ್ಯಂತ ಬೇಡಿಕೆ ಇರುವ ಸ್ಥಳದಲ್ಲೇ ಬದಲಿ ನಿವೇಶನವನ್ನು ಒಲಿಸಿಕೊಳ್ಳಬಹುದು. ಅಧಿಕಾರಿಗಳನ್ನು 'ಖುಷಿ'ಪಡಿಸದೇ ಹೋದರೆ, ಮುಳುಗಡೆಯಾಗುವ ಜಾಗದ ನಿವೇಶನಕ್ಕೂ ಬದಲಿ ನಿವೇಶನ ದಕ್ಕದು. ಬಿಡಿಎ ಬಡಾವಣೆಗೆ ಜಾಗ ನೀಡಿದ ರೈತರು ಕೂಡ ತಮಗೆ ನ್ಯಾಯಯುತವಾಗಿ ಸಿಗಬೇಕಾದ ಸವಲತ್ತು ಪಡೆಯುವುದಕ್ಕೂ ವರ್ಷಾನುಗಟ್ಟಲೆ ಕಾಯಬೇಕು.

ಭ್ರಷ್ಟಾಚಾರ ಜನರಿಗೆ ಪ್ರಹಾರ

ಕಟ್ಟಡ ಮಾಲೀಕರು ಅಧಿಕಾರಿಗಳ ಕೈ ಬಿಸಿ ಮಾಡಿದರೆ ಒಂದು ರೀತಿಯ ತೆರಿಗೆ ಲೆಕ್ಕ; ಅವರ ಕೈ ಬಿಸಿ ಮಾಡದಿದ್ದರೆ ಬೇರೆಯದೇ ಲೆಕ್ಕ. 'ನಿಯಮ ಪ್ರಕಾರ ನೀವು ಇಂತಿಷ್ಟು ತೆರಿಗೆ ಕಟ್ಟಬೇಕು. ನಮ್ಮನ್ನು ಚೆನ್ನಾಗಿ ನೋಡಿಕೊಂಡರೆ ಇಷ್ಟು ತೆರಿಗೆ ಉಳಿಸಬಹುದು' ಎಂದು ನೇರವಾಗಿ ಚೌಕಾಸಿಗೆ ಇಳಿಯುವ ಅಧಿಕಾರಿಗಳು ಇಲ್ಲಿದ್ದಾರೆ.

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8

ನಗರಾಡಳಿತ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಕುರಿತು ನಿರ್ದಿಷ್ಟ ಪ್ರಕರಣದ ಮಾಹಿತಿ ನೀಡಿದರೆ ಕ್ರಮ ಜರುಗಿಸಬಹುದು. ಯಾವುದೇ ಹಂತದಲ್ಲೂ ಭ್ರಷ್ಟಾಚಾರವನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ

ಬೈರತಿ ಬಸವರಾಜ
ನಗರಾಭಿವೃದ್ಧಿ ಸಚಿವ

ಪಠ್ಯದಿಂದ 'ಸಂವಿಧಾನ ಶಿಲ್ಪಿ' ಪದಕ್ಕೆ ಕೊಕ್: ಡಿ.ಕೆ. ಶಿವಕುಮಾರ್ ಕಿಡಿ

ಬೆಂಗಳೂರು: '9ನೇ ತರಗತಿ ಸಮಾಜ ವಿಜ್ಞಾನದ 'ನಮ್ಮ ಸಂವಿಧಾನ' ಪಾಠದಲ್ಲಿ ಸಂವಿಧಾನ ರಚನೆಗೆ ಅಂಬೇಡ್ಕರ್ ಅವರ ಕೊಡುಗೆ ಆಧರಿಸಿ 'ಸಂವಿಧಾನ ಶಿಲ್ಪಿ' ಎಂದು ಕರೆಯಲಾಗಿದೆ ಎಂದಿತ್ತು. ಈ ವಾಕ್ಯವನ್ನು ಪರಿಷ್ಕರಣೆ ವೇಳೆ ತೆಗೆಯಲಾಗಿದೆ. ಅಂಬೇಡ್ಕರ್ ಕುರಿತ ಇನ್ನೂ ಹಲವು ಅಂಶಗಳನ್ನೂ ತೆಗೆಯಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

4

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರವಾದಿ ಕುರಿತು ಬಿಜೆಪಿ ವಕ್ತಾರರ ವಿವಾದಿತ ಹೇಳಿಕೆ

ನೂಪುರ್ ಅಮಾನತು, ನವೀನ್ ಉಚ್ಚಾಟನೆ

ನವದೆಹಲಿ (ಪಿಟಿಐ): ಪ್ರವಾದಿ ಮೊಹಮ್ಮದ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದ ಬಿಜೆಪಿ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮಾ ಅವರನ್ನು ಪಕ್ಷದಿಂದ ಭಾನುವಾರ ಅಮಾನತು ಮಾಡಲಾಗಿದೆ.

ಅರಬ್ ರಾಷ್ಟ್ರಗಳಿಂದ ಮತ್ತು ಟ್ವಿಟರ್‌ನಲ್ಲಿ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಎಚ್ಚೆತ್ತುಕೊಂಡ ಬಿಜೆಪಿ ಈ ಕ್ರಮ ಕೈಗೊಂಡಿದೆ.

ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರನ್ನೂ ಪಕ್ಷದಿಂದ ಉಚ್ಚಾಟಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಕೋಮು ಸೌಹಾರ್ದಕ್ಕೆ ಧಕ್ಕೆ ತರುವುದಲ್ಲದೆ, ಪಕ್ಷದ ಸಂವಿಧಾನಕ್ಕೂ ವಿರುದ್ಧವಾಗಿದೆ ಎಂದು ಬಿಜೆಪಿ ಹೇಳಿದೆ.

ನೂಪುರ್

ನವೀನ್ ಕುಮಾರ್

ಕತಾರ್, ಇರಾನ್ ಮತ್ತು ಕುವೈತ್‌ನ ವಿದೇಶಾಂಗ ಸಚಿವಾಲಯಗಳು ಭಾರತದ ರಾಯಭಾರಿಗಳನ್ನು ಕರೆಸಿ ಖಂಡನಾ ನಿರ್ಣಯದ ಅಧಿಕೃತ ಟಿಪ್ಪಣಿಯನ್ನು ಅವರಿಗೆ ಹಸ್ತಾಂತರಿಸಿವೆ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರ ಕತಾರ್ ಭೇಟಿ ವೇಳೆ ಈ ಬೆಳವಣಿಗೆ ನಡೆದಿದೆ. ಭಾರತದ ಉತ್ಪನ್ನಗಳನ್ನು ಖರೀದಿ ಮಾಡಬಾರದು ಎಂಬ ಅಭಿಯಾನವೂ ಆ ದೇಶಗಳಲ್ಲಿ ನಡೆದಿದೆ.

'ನೂಪುರ್ ಅವರು ವಿವಿಧ ವಿಷಯಗಳ ಬಗ್ಗೆ ಪಕ್ಷದ ನಿಲುವಿಗೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ಪಕ್ಷದ ಸಂವಿಧಾನದ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಪಕ್ಷದ ಶಿಸ್ತು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

4ನೇ ಪುಟ ನೋಡಿ

ರಫೆಲ್ ನಡಾಲ್‌ಗೆ ಫ್ರೆಂಚ್ ಕಿರೀಟ

ಪ್ಯಾರಿಸ್: ಸ್ಪೇನ್‌ನ ರಫೆಲ್ ನಡಾಲ್ ಭಾನುವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಜಯಿಸಿದರು. ಇದರೊಂದಿಗೆ 22ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗಳಿಸಿದರು. ಸಿಂಗಲ್ಸ್ ಫೈನಲ್‌ನಲ್ಲಿ ನಡಾಲ್ 6-3, 6-3, 6-0ಯಿಂದ ಕ್ಯಾಸ್ಪರ್ ರೂಡ್ ವಿರುದ್ಧ ಗೆದ್ದರು.

10



ಕೇಂದ್ರೀಯ ವಿದ್ಯಾಲಯ, ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆ ಪರಿಸರ, ಬೆಂಗಳೂರು–560017

(An Autonomous Body under Ministry of Education, Govt. of India)

Tel: 080-29510143 Website: https://nal.kvs.ac.in E-Mail ID: kvnal05@gmail.com

ಗುತ್ತಿಗೆ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಕೇಂದ್ರೀಯ ವಿದ್ಯಾಲಯ ಸಂಘಟನೆಯ ಎನ್‌ಎಎಲ್ ಕ್ಯಾಂಪಸ್ ಬೆಂಗಳೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ **2022–23** ಶೈಕ್ಷಣಿಕ ಅವಧಿಗೆ ಕಾರ್ಯ ನಿರ್ವಹಿಸಲು ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳಿಗೆ ಇದೇ ಮಾರ್ಚ 17 ರಂದು ಲಿಖಿತ ಪರೀಕ್ಷೆ ಹಾಗೂ ಸಂದರ್ಶನವಿದ್ದು, ಆಯ್ಕೆಯಾಗುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ https://nal.kvs.ac.in/ ಭೇಟಿ ನೀಡಬಹುದು.

ಸಹಿ/– ಪ್ರಾಂಶುಪಾಲರು, ಕೆವಿ ಎನ್‌ಎಎಲ್

THE KARNATAKA STATE CRICKET ASSOCIATION

M. Chinnaswamy Stadium, Cubbon Road, Bangalore - 560 001.

SALE OF TICKETS

(Only two tickets per head)

Fifth T-20 (Night) International Match between India and South Africa

M.Chinnaswamy Stadium, Bangalore

Sunday, 19th June, 2022 from 7:00 PM onwards

Online and Offline Sales on Sunday, 12th June, 2022 from 10:30 AM onwards

please visit: **KSCA Website:https://www.ksca.cricket**

Further details on pricing and stands are given as under:-

Sl.No.	Stands	Price (Rs.)	Gate No.
	BOX OFFICE SALES		
1	G Upper / G Lower 1 and G Lower 2	750/-	Gate No. 5- Cubbon Road
2	A Stand Upper B Stand Upper B Stand Lower	2000/-	Gate No. 2- Cubbon Road
3	D Corporate	4000/-	Gate No. 19 - Queens Road
4	N Stand	5000/-	Gate No. 18- Queens Road
5	E-Executive	6000/-	Gate No. 18- Queens Road
	ONLINE SALES		
6	Grand Terrace	6000/-	ONLINE SALES ONLY
7	P Corporate	10,000/-	
8	Pavilion Terrace	15,000/-	
9	P2 Stand	20,000/-	

The unsold tickets (if any) in the Box Office shall be put up for sale online. There shall be no Box Office sale on or after 13th June, 2022.

Note : Further information on the status of availability of tickets will be available on KSCA Website.

Sd/-
Hon. Secretary-KSCA

Azadi Ka Amrit Mahotsav

पावरग्रिड POWERGRID

ನೋಟಿಸ್

1. ಅಸೆಟ್–1: ಎ] ನೆಲ್ಲೋರ್ (ಪಿಜಿ) ಇಲ್ಲಿರುವ 125 ಎಂವಿಎಆರ್ ಮತ್ತು 80 ಎಂವಿಎಆರ್ ಲೈನ್ ರಿಆಕ್ಟರ್‌ಗಳನ್ನು – ನೆಲ್ಲೋರ್ (ಪಿಜಿ) 400ಕೆವೆಇ ಡಿ/ಸಿ ಲೈನ್‌ನಿಂದ ನೆಲ್ಲೋರ್ (ಪಿಜಿ) – ಶ್ರೀಪೆರಂಬದೂರ್ 400ಕೆವಿ ಡಿ/ಸಿ ಲೈನ್‌ಗೆ ವರ್ಗಾಯಿಸುವುದು (ಸೂಕ್ತ ಅರೇಂಜ್‌ಮೆಂಟ್ ಜೊತೆಗೆ) ಮತ್ತು ಬಿ] ದಕ್ಷಿಣ ಪ್ರದೇಶದಲ್ಲಿರುವ ನೆಲ್ಲೋರ್ (ಪಿಜಿ)–ನೆಲ್ಲೋರ್ ಪಿಎಸ್ 400ಕೆವಿ (ಕ್ವಾಡ್) ಡಿ/ಸಿ ಲೈನ್ನ ಟ್ರಾನ್ಸ್ಮಿಷನ್ ಸಿಸ್ಟಮ್ ಫಾರ್ ಕಂಟ್ರೋಲಿಂಗ್ ಹೈ ಲೋಡಿಂಗ್ ಅಡಿಯಲ್ಲಿ ನೆಲ್ಲೋರ್ ಪಿಎಸ್–ತಿರುವಲಂ 400ಕೆವಿ ಡಿ/ಸಿ (ಕ್ವಾಡ್) ಲೈನ್ ಮಾಡುವುದಕ್ಕಾಗಿ ನೆಲ್ಲೋರ್ (ಪಿಜಿ) ಯಲ್ಲಿ ನೆಲ್ಲೋರ್ ಪಿಎಸ್–ನೆಲ್ಲೋರ್ (ಪಿಜಿ) 400ಕೆವಿ ಡಿ/ಸಿ (ಕ್ವಾಡ್) ಲೈನ್ ಮತ್ತು ನೆಲ್ಲೋರ್ (ಪಿಜಿ)–ತಿರುವಲಂ 400ಕೆವಿ ಡಿ/ಸಿ ಕ್ವಾಡ್ ಲೈನ್ ಬೈಪಾಸಿಂಗ್, ಇವುಗಳಿಗಾಗಿ ಸಿಇಆರ್‌ಸಿ (ಕಂಡಕ್ಟ್ ಆಫ್ ಬಿಜನೆಸ್) ರೆಗ್ಯುಲೇಶನ್ಸ್? 1999ರ ರೆಗ್ಯೂಲೇಶನ್–86 ಮತ್ತು ಸಿಇಆರ್‌ಸಿ (ದರಪಟ್ಟಿಯ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು–2019ರ ಅಡಿಯಲ್ಲಿ ವಾಸ್ತವಿಕ ಡಿಒಸಿಒ ದಿಂದ 31.03.2024 ರವರೆಗಿನ ದರಪಟ್ಟಿ ಇತ್ಯರ್ಥಪಡಿಸಲು ಅನುಮೋದನೆ.

2. ಮೇಲಿನ ಟ್ರಾನ್ಸ್‌ಮಿಷನ್ ಸಿಸ್ಟಮ್‌ನ ಫಲಾನುಭವಿಗಳು: (ಎ) ಕೆಪಿಟಿಸಿಎಲ್ (ಬಿ) ಅಪ್ಟ್ರಾನ್ಸ್ಕೊ (ಸಿ) ಕೆಎಸ್‌ಇಬಿ (ಡಿ) ಟಿಎನ್‌ಇಬಿ (ಇ) ಗೋವಾ ವಿದ್ಯುತ್ ಇಲಾಖೆ (ಎಫ್) ಪುದುಚೆರಿ ವಿದ್ಯುತ್ ಇಲಾಖೆ (ಜಿ) ಎಪಿಇಡಿಸಿಎಲ್ (ಹೆಚ್) ಎಪಿಎಸ್‌ಪಿಡಿಸಿಎಲ್ (ಐ) ಎಪಿಸಿಪಿಡಿಸಿಎಲ್ (ಜೆ) ಎಪಿಎನ್‌ಪಿಡಿಸಿಎಲ್ (ಕೆ) ಬೆಸ್ಕಾಂ (ಎಲ್) ಜೆಸ್ಕಾಂ (ಎಂ) ಹೆಸ್ಕಾಂ (ಎನ್) ಮೆಸ್ಕಾಂ (ಒ) ಚಾಮುಂಡೇಶ್ವರಿ ಇಲೆಕ್ಟ್ರಿಸಿಟಿ ಸಪ್ಲೈ ಕಾರ್ಪೋರೇಶನ್ ಲಿ., (ಪಿ) ಟ್ರಾನ್ಸ್‌ಮಿಷನ್ ಕಾರ್ಪೊರೇಶನ್ ಆಫ್ ತೆಲಂಗಾಣ ಲಿಮಿಟೆಡ್ (ಕ್ಯೂ) ಟ್ಯಾಂಜೆಡ್ಕೊ (ಆರ್) ಟಿಎನ್‌ಟಿಸಿ

3. ದರಪಟ್ಟಿ ವಿವರ:

ಅಸೆಟ್ ಹೆಸರು	ಅಸೆಟ್–1
ಷೆಡ್ಯೂಲ್ ಡಿಒಸಿಒ (ಎಫ್‌ಆರ್)	10.01.2021
ಡಿಒಸಿಒ (ಆಕ್ಚುಯಲ್)	30.04.2021(ಆಕ್ಚುಯಲ್)
ಪೂರ್ಣಗೊಳಿಸುವ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)	444.39
2019–24 ಸಾಲಿನ ವರ್ಷದ ದರಪಟ್ಟಿ (ರೂ.ಲಕ್ಷಗಳಲ್ಲಿ)	
2019-20	0.00
2020-21	0.00
2021-22	46.94
2022-23	66.20
2023-24	64.78

4. ದರಪಟ್ಟಿ ಇತ್ಯರ್ಥಪಡಿಸುವಿಕೆಗೆ ಸಲ್ಲಿಸಲಾದ ಅರ್ಜಿ ಪ್ರತಿಯನ್ನು ಅರ್ಜಿದಾರರ www.powergrid.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

5. ಸದರಿ ಅರ್ಜಿಯಲ್ಲಿ ಉಲ್ಲೇಖಿಸಿರುವ ದರಪಟ್ಟಿ ಇತ್ಯರ್ಥಪಡಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ ಅಥವಾ ಫಲಾನುಭವಿಗಳಿಗಾಗಲಿ ಯಾವುದೇ ರೀತಿಯ ಸಲಹೆಗಳು ಅಥವಾ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಸದರಿ ಪ್ರಕಟನೆಯು ಪ್ರಕಟಗೊಂಡ ದಿನಾಂಕದಿಣದ 30 ದಿನಗಳೊಳಗೆ , ತಮ್ಮ ಸಲಹೆ ಅಥವಾ ಆಕ್ಷೇಪಣೆಗಳನ್ನು ಕಾರ್ಯದರ್ಶಿ, ಕೇಂದ್ರಿಯ ವಿದ್ಯುತ್ ನಿಯಂತ್ರಣ ಆಯೋಗ, 3 ಮತ್ತು 4ನೇ ಮಹಡಿ, ಚಂದ್ರಲೋಕ ಬಿಲ್ಡಿಂಗ್, ಜನಪಥ, ನವದೆಹಲಿ – 110 001 ಇವರಿಗೆ ಸಲ್ಲಿಸುವುದು (ಅಥವಾ ಆಯೋಗದ ಕಚೇರಿಯ ಇನ್ನೊಂದು ವಿಳಾಸಕ್ಕೆ), ಜೊತೆಗೆ ಅರ್ಜಿದಾರರ ಕಾರ್ಪೊರೇಟ್ ಕಚೇರಿಗೆ ಕೂಡ ಒಂದು ಪ್ರತಿಯನ್ನು ಸಲ್ಲಿಸುವುದು.

ಸ್ಥಳ: ಗುರಗಾಂವ್
ದಿನಾಂಕ: 30.05.2022

ಸಹಿ/–
ಮುಖ್ಯ ಮಹಾ ಪ್ರಬಂಧಕರು (ವಾಣಿಜ್ಯ)

ಪವರ್ ಗ್ರಿಡ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್

(ಭಾರತ ಸರ್ಕಾರದ ಉದ್ದಿಮೆ)

ಕಾರ್ಪೊರೇಟ್ ಕಚೇರಿ: "ಸೌದಾಮಿನಿ", ಪ್ಲಾಟ್ ನಂ.2, ಸೆಕ್ಟರ್–29, ಗುರುಗ್ರಾಮ–122001, (ಹರ್ಯಾಣ) ಫೋನ್: 0124–2571700–719

ನೋಂ. ಕಚೇರಿ: ಬಿ–9, ಕುತಬ್ ಇನ್‌ಸ್ಟಿಟ್ಯೂಷನಲ್ ಏರಿಯಾ, ಕತ್ವಾರಿಯಾ ಸರಾಯ್, ನವದೆಹಲಿ–110016. ಫೋನ್: 011–26560112, 26560121

www.powergrid.in, **CIN** : L40101DL1989GOI038121

ಒಂದು ಮಹಾರತ್ನ ಸಾರ್ವಜನಿಕ ಕ್ಷೇತ್ರ ಘಟಕ

PG/CC/Notice-07/Advt-12/2022-23 Nirman

‘ಸಿದ್ದರಾಮಯ್ಯಗೆ ಚಡ್ಡಿ ರವಾನಿಸಲು ಸೂಚನೆ’

ಪ್ರಜಾವಾಣಿ ವಾರ್ತೆ

ನಾರಾಯಣ ಸ್ವಾಮಿ

ಬೆಂಗಳೂರು: ‘ಆರ್‌ಎಸ್‌ಎಸ್ ಚಡ್ಡಿ ಸುಡುವ ಆಂದೋಲನಕ್ಕೆ ಕರೆ ನೀಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಚಡ್ಡಿ ರವಾನಿಸುವ ಅಭಿಯಾನ ನಡೆಸುವಂತೆ ಬಿಜೆಪಿ ಪರಿಶಿಷ್ಟ ಮೋರ್ಚಾದ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಸೂಚಿಸಲಾಗಿದೆ’ ಎಂದು ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಭಾನುವಾರ ಮಾತನಾಡಿದ ಅವರು, ‘ರಾಜಕೀಯವಾಗಿ ಮೂಲೆಗುಂಪಾಗುತ್ತಿರುವ ಸಿದ್ದರಾಮಯ್ಯ ಅವರು ಸ್ಥಿಮಿತ ಕಳೆದುಕೊಂಡವರಂತೆ ಮಾತನಾಡುತ್ತಿದ್ದಾರೆ. ಎಲ್ಲವನ್ನೂ ಬಿಟ್ಟು ಈಗ ಚಡ್ಡಿಯ ವಿಷಯ ಹಿಡಿದುಕೊಂಡಿದ್ದಾರೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನರು ಅವರ ಚಡ್ಡಿಯನ್ನೇ ಕಿತ್ತುಕೊಂಡು ಕಳಿಸಿರುವುದು ನೆನಪಿಲ್ಲವೆ’ ಎಂದು ಕೇಳಿದರು.

ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ಅಧ್ಯಕ್ಷರು ಚಡ್ಡಿಗಳನ್ನು ಸಂಗ್ರಹಿಸುವ ಕೆಲಸ ಮಾಡುತ್ತಾರೆ. ಅವರು ಸಂಗ್ರಹಿಸುವ ಚಡ್ಡಿಗಳನ್ನು ಬಿಜೆಪಿ ನಾಯಕರು ಸಿದ್ದರಾಮಯ್ಯ ಅವರಿಗೆ ತಲುಪಿಸುತ್ತಾರೆ ಎಂದರು.

‘ಚಡ್ಡಿ ಸುಡುವ ಮೊದಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯಬೇಕು. ನಾನು ಈಗಾಗಲೇ ಕೋವಿಡ್ ಸಂಕಷ್ಟ ಎದುರಿಸುತ್ತಿದ್ದೇವೆ. ಚಡ್ಡಿ ಸುಡುವ ಮೂಲಕ ಆಗುವ ಮಾಲಿನ್ಯದಿಂದ ಜನರಿಗೆ ತೊಂದರೆ ಆಗಬಾರದು’ ಎಂದು ಹೇಳಿದರು.

ನಗರದಲ್ಲಿ ಇಂದು

ಮಹಾವಿಷ್ಣು ವಿಶ್ವರೂಪ ಏಕಶಿಲಾ ವಿಗ್ರಹ ಸ್ಥಾಪನೆ: ಬೆಳಿಗ್ಗೆ: 4 ರಿಂದ 6 ಗಣಪತಿ ವಿಶ್ವಕ್ಸೇನ ಆರಾಧನಾ, ಬೆಳಿಗ್ಗೆ: 9 ರಿಂದ 11 ಮಹಾ ಸುದರ್ಶನ ಹೋಮ, ಮಹಾವಿಷ್ಣು ಯಂತ್ರ ಸಂಪ್ರೋಕ್ಷಣೆ, ಮಧ್ಯಾಹ್ನ 12 ಅನ್ನಸಂತರ್ಪಣೆ, ಆಯೋಜಕರು: ಕೋದಂಡರಾಮ ಸ್ವಾಮಿ ದೇವಸ್ಥಾನ ಚಾರಿಟೇಬಲ್ ಟ್ರಸ್ಟ್, ಸ್ಥಳ: ಕೋದಂಡರಾಮ ಸ್ವಾಮಿ ದೇವಸ್ಥಾನ ಈಜಿಪುರ

ಲ್ಯಾಬ್ ಬ್ಯುಲ್ಟ್ ಆನ್ ವೀಲ್ಸ್ (ಗ್ರಾಮೀಣ ಭಾಗದ ಜನರಿಗೆ ಮೊಬೈಲ್ ಕ್ಲಿನಿಕ್): ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಬಿ.ಎಸ್. ಲಿಂಗದೇವರು, ಆಯೋಜಕರು: ರೋಟರಿ ಬೆಂಗಳೂರು ಹೈಗ್ರೌಂಡ್ಸ್, ಸ್ಥಳ: ವಿಧಾನಸೌಧ, ಬೆಳಿಗ್ಗೆ: 10

ವಿಶ್ವ ಪರಿಸರ ದಿನಾಚರಣೆ: ‘ಓನ್ಲಿ ಒನ್ ಅರ್ಥ್’ ಕಾರ್ಯಾಗಾರದ ಉದ್ಘಾಟನೆ: ಡಾ.ಶಾಲಿನಿ ರಜನೀಶ್, ಅಧ್ಯಕ್ಷತೆ: ಡಾ.ವೂಡೆ.ಪಿ.ಪ್ರಕಾಶ್, ಆಯೋಜಕರು: ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರಂ, ಬೆಳಿಗ್ಗೆ: 10.30

ಡಾ.ಎಚ್.ನರಸಿಂಹಯ್ಯನವರ 102ನೇ ಹುಟ್ಟುಹಬ್ಬದ ಸಂಭ್ರಮಾಚರಣೆ: ಮುಖ್ಯ ಅತಿಥಿಗಳು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಡಾ.ಎ.ಎಚ್. ರಾಮರಾವ್, ಆಯೋಜಕರು: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ದಿ ನ್ಯಾಷನಲ್ ಹೈಸ್ಕೂಲ್, ಬಸವನಗುಡಿ, ಬೆಳಿಗ್ಗೆ: 11

ಸಂಗೀತ ಸಂಜೆ: ಉದ್ಘಾಟನೆ: ಸಿ.ಕೆ.ರಾಮೇಗೌಡ, ಅಧ್ಯಕ್ಷತೆ: ಟಿ.ಮಂಜುನಾಥ, ಉಪಸ್ಥಿತಿ: ಗೋವಿಂದಹಳ್ಳಿ ಕೃಷ್ಣೇಗೌಡ, ಮೈಸೂರು ರಮಾನಂದ್, ಆಯೋಜಕರು: ಸಂಗೀತ ಸೌರಭ ವಾದ್ಯಗೋಷ್ಠಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ (ರವೀಂದ್ರ ಕಲಾಕ್ಷೇತ್ರ ಆವರಣ), ಸಂಜೆ: 5

ಸಹಕಾರ ಇಲಾಖೆ, ಸಹಕಾರ ಸಂಘಗಳ ನಿಬಂಧಕರ ಕಚೇರಿ

ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560052.

ಸಂ.: ಆರ್.ಸಿಎಸ್/ಎಸ್‌ವಿಒ/57/2022–23 ದಿನಾಂಕ: 03.06.2022

ಪ್ರಕಟಣೆ

ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52 ಈ ಕಛೇರಿಯಲ್ಲಿನ ಹಳೆಯ ಚೇರ್, ಎಲೆಕ್ಟ್ರಿಕ್ ನಿರುಪಯುಕ್ತ ವಸ್ತುಗಳು, ಕಬ್ಬಿಣದ ನಿರುಪಯುಕ್ತ ವಸ್ತುಗಳು, ಪ್ಲಾಸ್ಟಿಕ್ ನಿರುಪಯುಕ್ತ ವಸ್ತುಗಳು, ವಾಹನದ ಬಿಡಿ ಭಾಗಗಳು, ಯಂತ್ರ ಸಾಮಗ್ರಿಗಳ ಬಿಡಿ ಭಾಗಗಳು ಮತ್ತು ಹಳೆಯ ಅಲ್ಮೇರಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು **ದಿನಾಂಕ: 14.06.2022ರಂದು ಬೆಳಿಗ್ಗೆ 11.00 ಘಂಟೆಗೆ** ನಿಗದಿಪಡಿಸಲಾಗಿದೆ. ಬಹಿರಂಗ ಹರಾಜು ಮೂಲಕ ಪ್ರತಿ ಕಿಲೋ ಗ್ರಾಂ/ಒಂದು ವಸ್ತುವಿನ ದರದ ಆಧಾರದ ಮೇಲೆ, ಸಾಮಗ್ರಿಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಇಚ್ಛೆಯುಳ್ಳ ಖರೀದಿದಾರರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯುವುದು. ದೂ: 080–22251238

ಸಹಿ/– ಸಹಕಾರ ಸಂಘಗಳ ನಿಬಂಧಕರು, ಕೇಂದ್ರ, ಕಛೇರಿ, ಬೆಂಗಳುರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಬಾಯಿ ತೆರೆದ ಚರಂಡಿ

ಗಂಗಮ್ಮ ಸರ್ಕಲ್ ಪಕ್ಕದ ಪಾದಚಾರಿ ಮಾರ್ಗದಲ್ಲಿರುವ ಚರಂಡಿ ಬಾಯಿ ತೆರೆದುಕೊಂಡಿದೆ. ಮಳೆ ಬಂದರೆ ಚರಂಡಿ ನೀರೆಲ್ಲಾ ರಸ್ತೆ ಮೇಲೆ ಹರಿಯುತ್ತದೆ. ರಾತ್ರಿ ಸಮಯದಲ್ಲಿ ಪಾದಚಾರಿಗಳು ಈ ರಸ್ತೆಯ ಮೇಲೆ ಓಡಾಡಿ ಬಹಳಷ್ಟು ಮಂದಿ ಕಾಲು ಮುರಿದುಕೊಂಡಿದ್ದಾರೆ. ದುರಸ್ತಿ ಪಡಿಸಬೇಕೆಂದು ಹಲವಾರು ಬಾರಿ ಮನಿವ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಚರಂಡಿ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

–ರಘು ಕೋಟಿಯನ್, ಕಾನ್ಶಿರಾಮ್ ನಗರದ ನಿವಾಸಿ

ಸಹಕಾರ ನಗರ: ರಸ್ತೆ ಗುಂಡಿ ಮುಚ್ಚಿ

‘ಸಹಕಾರ ನಗರದ ರಸ್ತೆಯು ಗುಂಡಿಮಯವಾಗಿದ್ದು, ಎರಡು ವರ್ಷಗಳಿಂದ ಈ ರಸ್ತೆ ದುರಸ್ತಿ ಕಂಡಿಲ್ಲ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಂತಾಗುತ್ತದೆ. ಈ ರಸ್ತೆ ದಾಟಬೇಕಾದರೆ ವಾಹನ ಸವಾರರು ಹರಸಾಹಸ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರು ಬಿದ್ದು ಅಪಘಾತಕ್ಕೀಡಾದ ಹಲವು ನಿದರ್ಶನಗಳಿವೆ. ಆದ್ದರಿಂದ ಸಂಬಂಧ ಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಆಗ್ರಹ.

–ಜಯಕುಮಾರ್.ಟಿ.ಎನ್, ಸ್ಥಳೀಯ ನಿವಾಸಿ

ರಸ್ತೆ ದುರಸ್ತಿಗೆ ಆಗ್ರಹ

ಜೆ.ಪಿ.ನಗರದ 8ನೇ ಹಂತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿ ವಾಹನಗಳ ಸಂಚಾರದಿಂದ ಮಣ್ಣು ಕಿತ್ತು ಹೋಗಿ, ಎಲ್ಲೆಡೆ ದೂಳು ಆವರಿಸಿಕೊಳ್ಳುತ್ತದೆ. ದ್ವಿಚಕ್ರ ವಾಹನ ಸವಾರರಿಗೆ ಇದರಿಂದ ಕಿರಿಕಿರಿ. ಆಳವಾದ ತಗ್ಗು ಗುಂಡಿಗಳು ಕೂಡ ಸೃಷ್ಟಿಯಾಗಿವೆ. ಮಳೆಗಾಲ ಬಂದರೆ ಬೇಸಿಗೆಗಿಂತ ಪರಿಸ್ಥಿತಿ ಭಯಾನಕವಾಗಿರುತ್ತದೆ. ತಗ್ಗು ಗುಂಡಿಗಳಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಹಲವರು ಗುಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಈ ಕಡೆಗೆ ಗಮನ ಹರಿಸುವ ಗೋಜಿಗೆ ಹೋಗಿಲ್ಲ ಎಂದು ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದರು. ಈಗಲಾದರೂ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶ್ಯಾಮರಾವ್, ಸ್ಥಳೀಯ ನಿವಾಸಿ

ಬೆದರಿಸಿ ಸುಲಿಗೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರ್ಜಾಲ ಕೇಬಲ್ ದುರಸ್ತಿ ಮಾಡುವ ಸಿಬ್ಬಂದಿಯನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಮೂವರನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸ್ಥಳೀಯ ಪಾಲನಹಳ್ಳಿ ತೋಟದ ಮುನಿರಾಜು ಅಲಿಯಾಸ್ ಸಂಡೆ (21), ದ್ವಾರಕಾನಗರದ ಮುನಿರಾಜು ಅಲಿಯಾಸ್ ಗುಂಡ (25) ಹಾಗೂ ಅಜಿತ್ ಕುಮಾರ್ (24) ಬಂಧಿತರು.

‘ಮೊಬೈಲ್ ಸೇವಾ ಕಂಪನಿಯೊಂದರ ಸಿಬ್ಬಂದಿ, ವೆಂಕಟಾಲ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೇ 28ರಂದು ರಾತ್ರಿ ಅಂತರ್ಜಾಲ ಕೇಬಲ್ ದುರಸ್ತಿ ಮಾಡುತ್ತಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ‘ನಮ್ಮ ಪ್ರದೇಶದಲ್ಲಿ ಕೆಲಸ ಮಾಡಲು ನಿಮಗೆ ಅನುಮತಿ ನೀಡಿದವರು ಯಾರು? ನಮಗೆ ₹ 5,000 ಕೊಡಬೇಕು. ಇಲ್ಲದಿದ್ದರೆ ನಿಮಗೆ ಒಂದು ಗತಿ ಕಾಣಿಸುತ್ತೇವೆ’ ಎಂದಿದ್ದರು. ಹಣವಿಲ್ಲವೆಂದಿದ್ದಕ್ಕೆ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸಿಬ್ಬಂದಿಯೊಬ್ಬರ ಕೈಗೆ ಚಾಕುವಿನಿಂದ ಇರಿದಿದ್ದ ಆರೋಪಿಗಳು, ₹ 900 ನಗದು ಹಾಗೂ ಕೇಬಲ್ ದುರಸ್ತಿ ಉಪಕರಣವನ್ನು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಲಕ್ಷ್ಮೀನರಸಿಂಹಸ್ವಾಮಿ ಜಾತ್ರಾ ಮಹೋತ್ಸವ

ಬೆಂಗಳೂರು: ಲಕ್ಷ್ಮೀನರಸಿಂಹಸ್ವಾಮಿ ಜಾತ್ರಾ ಮಹೋತ್ಸವದ ನಿಮಿತ್ತ ಜೂನ್ 7ರಂದು ಬೆಳಿಗ್ಗೆ 8 ಗಂಟೆಗೆ ಮಾದಾಪಟ್ಟಣದ ಆಂಜನೇಯ ಸ್ವಾಮಿ ದೇಗುಲದ ಬಳಿ ಹಾಗೂ ಬೆಳಿಗ್ಗೆ 11ಕ್ಕೆ ಅಂಕಯ್ಯನಪಾಳ್ಯದ ಗಂಗಮ್ಮ ದೇಗುಲದ ಬಳಿ ಉತ್ಸವ ನಡೆಸಲಾಗುವುದು. ಸಂಜೆ 5ಕ್ಕೆ ಗ್ರಾಮಗಳ ರಾಜಬೀದಿಗಳಲ್ಲಿ ಸ್ವಾಮಿಯ ಮೆರವಣಿಗೆ ನಡೆಯಲಿದೆ.

ಬುಧವಾರ ಬೆಳಿಗ್ಗೆ 8ಕ್ಕೆ ಗ್ರಾಮಗಳ ಮನೆ ಮನೆಗೂ ಸ್ವಾಮಿಗೆ ಹಣ್ಣು–ಕಾಯಿ ಮಡಲಕ್ಕಿ ತುಂಬಲಾಗುವುದು. ಗುರುವಾರ ಬೆಳಿಗ್ಗೆ 8ಕ್ಕೆ ಸಕಲ ಪೂಜಾ ಕಾರ್ಯ ಮತ್ತು ಮೆರವಣಿಗೆಯೊಂದಿಗೆ ಸ್ವಾಮಿಯನ್ನು ಸಾವನದುರ್ಗಕ್ಕೆ ಬಿಟ್ಟು ಬರಲಾಗುವುದು ಎಂದು ಜಾತ್ರಾ ಸಮಿತಿ ತಿಳಿಸಿದೆ.

India's pride: Bengaluru, and Dayananda Sagar Institutions (DSI) the city's top education campus beckons you to start your academic journey.

Dayananda Sagar Institutions
Bengaluru

Professional education of great value continues to be a culture in this dynamic city. Dayananda Sagar Institutions (DSI) is a reflection of this legacy. DSI has stood the test of times ensuring the success of every young man and woman who passed through its portals during these last 60 years.

DSI is a testimony of excellence

Here are the credentials - our students winning top positions in the SAE International and American Institute of Aeronautics and Astronautics (AIAA) competitions and invited to participate at the 17th Google Summer of Code – 202. **Students of DSI have won recognitions in National Level Hackathons conducted by AICTE and corporates.** DSI alumni can be seen occupying top positions in the global corporate world, research centers and successfully managing family businesses, across the country and outside.

The great DSI promise:

- Dynamic curriculum
- Best in class faculty
- Great industry partnerships
- Tops in innovation & research
- Exciting placement records
- Partnerships with universities of global repute
- Emphasis on sports and culture
- Fun and frolic that comes from a diverse student mix

Dayananda Sagar College of Engineering (DSCE)

- DSCE is an autonomous institution affiliated to VTU,
- Accredited by NAAC with A Grade
- Consistently getting NIRF Ranking
- Majority of UG programs Accredited by NBA
- Ranked as best Industry Connected Institute in CII-AICTE survey with Platinum Grading
- Has highest Four Star rating in IIRF grading for Innovations
- Industry supported labs and trainings
- Great placement

Programs - Engineering: BE/MTech/MBA/MCA:

- Civil Engineering
- Aeronautical Engineering
- Artificial Intelligence & Machine Learning
- Computer Science & Design
- Computer Science Engineering
- Information Science & Engineering
- Automobile Engineering
- Biotechnology
- Chemical Engineering
- Electrical & Electronics Engineering
- Electronics & Communication Engineering
- Electronics & Instrumentation Engineering
- Electronics & Telecommunication Engineering
- Medical Electronics Engineering
- Mechanical Engineering



Dayananda Sagar College of Architecture
(Affiliated to VTU)

Architecture:
B Arch
M.Arch – Interior Design

Dayananda Sagar College of Arts, Science & Commerce
(Affiliated to Bangalore University)

Day & Evening Programmes: BBA/MBA, BCom/ MCom, BCA/MCA, BSc-PCM

PGDM

Dentistry:
- **BDS/MDS** (NEET scores & KEA Registration essential)

PUC: (Day and Evening Programs)
- Commerce/Science

Mobile and WhatsApp: 9972560651/ 9663077040
Landline 080-42161762 / 080-42161761

Diploma: Engineering
Diploma: Para Medical courses

Dayananda Sagar Academy of Technology & Management (DSATM)

- Programmes: **BE/ BArch/ MBA/MCA**
- Affiliated to VTU
- All Engineering programs are NBA Accredited
- NAAC A+ Grade

www.dsatm.edu.in
Mobile: 8792909134 / 8951890085 / 8951890084
Landline: 080 28432777

Dayananda Sagar Business Academy
(Affiliated to Bangalore University)

Programmes: **BBA, BCom, BCA**

Email: dean@dsba.edu.in
www.dsba.edu.in Ph: 8050194852 / 8792909134

Opp Art of Living, Udayapura, Kanakapura Road, Bangalore-560082

Highlights of Placements 2022 Batch:

Highest CTC Offered	Average CTC Offered	Highest Stipend offered
Rs **40.00 Lakhs** per annum	Rs **7.5 Lakhs** per annum	Rs **1.25 Lakhs** per month
Regular Offers (Up to Rs 5 Lakhs per annum)	Dream Offers (Rs 5 Lakhs per annum to Rs.10 Lakhs per annum)	Super Dream offers (Above Rs 10 LPA)
1864 Students	**773 Students**	**246 Students**

Need more reasons to pick your academic journey?
Online Admissions now open for 2022-23

Visit: www.dayanandasagar.edu

Dayananda Sagar Institutions
Shavige Malleshwara Hills,
Kumara Swamy Layout, Bengaluru – 560111
Ph: 080 - 48811000, 080-42161750
Mobile: 9916075170
Email:
admissions@ dayanandasagar.edu

ಮಲ್ಲೇಶ್ವರಂನ ನೈಸರ್ಗಿಕ ಮಾವು ಮೇಳಕ್ಕೆ ಭಾನುವಾರ ಭೇಟಿ ನೀಡಿದ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಅವರು ರೈತರಿಗೆ ನೆನಪಿನ ಕಾಣಿಕೆ ನೀಡಿದರು

‘ಈ ತಿಂಗಳಲ್ಲಿ ಜಿಲ್ಲಾಮಟ್ಟದ ಕಾಂಗ್ರೆಸ್ ಚಿಂತನಾ ಶಿಬಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ಸಂಘಟನೆ, ಜಿಲ್ಲೆಯ ರಾಜಕೀಯ ಸ್ಥಿತಿಗತಿ ಅವಲೋಕನ, ಮುಂಬರುವ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವ ಉದ್ದೇಶದಿಂದ ಜೂನ್ 11ರಿಂದ 14ರ ಮಧ್ಯೆ ಯಾವುದಾದರೂ ಒಂದು ದಿನ ಜಿಲ್ಲಾಮಟ್ಟದಲ್ಲಿ ‘ನವ ಸಂಕಲ್ಪ ಚಿಂತನಾ ಶಿಬಿರ’ ಆಯೋಜಿಸುವಂತೆ ಪಕ್ಷದ ಕಾರ್ಯಾಧ್ಯಕ್ಷರು, ಕೆಪಿಸಿಸಿ ಪದಾಧಿಕಾರಿಗಳು, ಜಿಲ್ಲಾ ಘಟಕಗಳ ಮತ್ತು ಮುಂಚೂಣಿ ಘಟಕಗಳ ಅಧ್ಯಕ್ಷರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪತ್ರ ಬರೆದಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷರು, ಜಿಲ್ಲಾ ಉಸ್ತುವಾರಿ ಹೊಂದಿರುವ ಕೆಪಿಸಿಸಿ ಪದಾಧಿಕಾರಿಗಳು, ಸ್ಥಳೀಯ ನಾಯಕರು ಚರ್ಚಿಸಿ ಶಿಬಿರದ ದಿನ ನಿಗದಿಪಡಿಸಬೇಕು. ಜಿಲ್ಲೆಗೆ ಸಂಬಂಧಿಸಿ ರಾಜ್ಯ ನಾಯಕರು, ಜಿಲ್ಲೆಯ ಎಐಸಿಸಿ, ಕೆಪಿಸಿಸಿ ಪದಾಧಿಕಾರಿಗಳು, ಶಾಸಕರು, ಮಾಜಿ ಶಾಸಕರು. ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಅಭ್ಯರ್ಥಿಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮಾಜಿ, ಹಾಲಿ ಸೇರಿದಂತೆ ಜಿಲ್ಲೆಯ ಪ್ರಮುಖ ಎಲ್ಲ ನಾಯಕರು ಶಿಬಿರದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂದೂ ಅವರು ಸೂಚಿಸಿದ್ದಾರೆ.

‘ಜಿಲ್ಲಾ, ಬ್ಲಾಕ್‌ಮಟ್ಟದಲ್ಲಿ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರಲ್ಲಿರುವ ಸಣ್ಣಪುಟ್ಟ ಗೊಂದಲ, ಮನಸ್ತಾಪ, ಭಿನ್ನಭಿಪ್ರಾಯಗಳಿದ್ದರೆ ಚರ್ಚಿಸಿ ಪರಿಹರಿಸಿಕೊಳ್ಳಬೇಕು. ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮವನ್ನು ಆಚರಿಸಲು ಜಿಲ್ಲಾಮಟ್ಟದಲ್ಲಿ ಆಗಸ್ಟ್ 9ರಿಂದ 14ರ ಒಳಗೆ 75 ಕಿಲೋ ಮೀಟರ್ ಪಾದಯಾತ್ರೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಯಾತ್ರೆಯ ರಾಜ್ಯಮಟ್ಟದ ಸಮಾರೋಪ ಆಗಸ್ಟ್ 15ರಂದು ಬೆಂಗಳೂರಿನಲ್ಲಿ ಆಚರಿಸಲಾಗುವುದು’ ಎಂದೂ ಶಿವಕುಮಾರ್ ಅವರು ತಿಳಿಸಿದ್ದಾರೆ.

ಸರ್ಕಾರಿ ಐಟಿಐ ಕಾಲೇಜು ಪ್ರವೇಶ ಪ್ರಕ್ರಿಯೆ ಪ್ರಾರಂಭ

ಬೆಂಗಳೂರು: ಹೊಸೂರಿನಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ 2022–23ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭಗೊಂಡಿದೆ.

ಆಸಕ್ತ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಜೂನ್ 23 ಕೊನೆಯ ದಿನ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಇಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ಪ್ರಾಂಶುಪಾಲರ ದೂರವಾಣಿ (080-26562307) ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಲ್ಲೇಶ್ವರದ ನೈಸರ್ಗಿಕ ಮಾವು ಮೇಳ ಎರಡು ದಿನ ವಿಸ್ತರಣೆ

ಬೆಂಗಳೂರು: ಮಲ್ಲೇಶ್ವರದ ಸರ್ಕಾರಿ ಶಾಲಾ ಮೈದಾನದಲ್ಲಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಷ್ಠಾನವು ಏರ್ಪಡಿಸಿರುವ ನೈಸರ್ಗಿಕ (ಸಾವಯವ) ಮಾವು ಮೇಳವನ್ನು ಮಂಗಳವಾರದವರೆಗೆ (ಜೂನ್ 7) ವಿಸ್ತರಿಸಲಾಗಿದೆ.

ಮೇಳಕ್ಕೆ ಭಾನುವಾರ ಭೇಟಿ ನೀಡಿದ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಮೇಳದಲ್ಲಿ ಮೂರು ದಿನಗಳಲ್ಲಿ 6 ಟನ್ ಮಾವು ಮಾರಾಟವಾಗಿದ್ದು, ಅಂದಾಜು ₹6 ಲಕ್ಷ ವಹಿವಾಟು ನಡೆದಿದೆ. ಇದು ರೈತರು ಮತ್ತು ಸಾವಯವ ಕೃಷಿ ಪದ್ಧತಿಗೆ ಪ್ರತಿಷ್ಠಾನವು ಒದಗಿಸುತ್ತಿರುವ ಉತ್ತೇಜನಕ್ಕೆ ಸಾಂಕೇತಿಕ ಕ್ರಮ’ ಎಂದರು.

'ಜನರು ರಾಸಾಯನಿಕಗಳ ಬಳಕೆ ಇಲ್ಲದ ನಿಸರ್ಗ ಸಹಜ ಆಹಾರ ಪದಾರ್ಥಗಳನ್ನು ಮತ್ತು ಹಣ್ಣು ಹಂಪಲುಗಳನ್ನು ಸೇವಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಇದರಿಂದ ಅನಗತ್ಯವಾಗಿ ಆಸ್ಪತ್ರೆಗಳಿಗೆ ಅಲೆದಾಡುವ ಮತ್ತು ಅನಾರೋಗ್ಯಕ್ಕೆ ಈಡಾಗುವ ಅಪಾಯವು ತಪ್ಪುತ್ತದೆ’ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸಚಿವರು, ಮಳಿಗೆ ಹಾಕಿರುವ 20 ರೈತರಿಗೆ ನೆನಪಿನ ಕಾಣಿಕೆ ವಿತರಿಸಿದರು. ಬಿಜೆಪಿ ಮಲ್ಲೇಶ್ವರಂ ಮಂಡಲದ ಅಧ್ಯಕ್ಷೆ ಕಾವೇರಿ ಕೇದಾರನಾಥ ಜೊತೆಗಿದ್ದರು.

ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್

ಬೆಂಗಳೂರು: ಪ್ರತಿ ತಿಂಗಳ 3ನೇ ಶನಿವಾರ ವಿದ್ಯುತ್ ಅದಾಲತ್ ನಡೆಸಬೇಕೆಂದು ಇಂಧನ ಸಚಿವ ಸುನಿಲ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳ ಬಗ್ಗೆ ಅರಿತು, ತಕ್ಷಣ ಪರಿಹಾರ ನೀಡಲು ಆಂದೋಲನ ರೀತಿಯ ಕಾರ್ಯಕ್ರಮ ರೂಪಿಸಬೇಕು. ಪ್ರತಿ ತಿಂಗಳ 3ನೇ ಶನಿವಾರ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೇರಿ ಎಲ್ಲ ಅಧಿಕಾರಿಗಳು ಹಳ್ಳಿಗಳಿಗೆ ಭೇಟಿ ನೀಡಬೇಕು ಎಂದಿದ್ದಾರೆ

ವಿವಿಧ ಹಂತದ ಅಧಿಕಾರಿಗಳು ಒಂದೇ ಹಳ್ಳಿಗೆ ಭೇಟಿ ನೀಡದೆ, ಬೇರೆ ಹಳ್ಳಿಗಳಿಗೆ ಭೇಟಿ ನೀಡಿ, ಅಭಿಯಾನವನ್ನು ಕಾಲಮಿತಿಯಲ್ಲಿ ಮುಕ್ತಾಯಗೊಳಿಸಬೇಕು. ಅಭಿಯಾನದ ವಿವರಗಳನ್ನು ಸಂಬಂಧಪಟ್ಟ ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸಬೇಕು ಎಂದಿದ್ದಾರೆ.

ಯಲಹಂಕ ಸಮೀಪದ ಸಿಂಗನಾಯಕನಹಳ್ಳಿಯಲ್ಲಿ ನ್ಯಾಷನಲ್ ಪಬ್ಲಿಕ್ ಶಾಲೆಯ ನೂತನ ಕಟ್ಟಡವನ್ನು ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಉದ್ಘಾಟಿಸಿದರು. ಎನ್‌.ಪಿ.ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಪಿ.ಗೋಪಾಲಕೃಷ್ಣನ್, ಸಿಎಂಆರ್ ಜ್ಞಾನಾಧಾರ ಟ್ರಸ್ಟ್‌ನ ಅಧ್ಯಕ್ಷೆ ಡಾ.ಸಬಿತಾ ರಾಮಮೂರ್ತಿ, ಪಾಲಿಕೆ ಮಾಜಿ ಸದಸ್ಯೆ ಡಾ.ಗೀತಾ ಶಶಿಕುಮಾರ್ ಮತ್ತು ಇತರರು ಇದ್ದರು.

ಕರ್ನಾಟಕ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ
ಸ್ವಾತಂತ್ರ್ಯದ ಅಮೃತ ಮಹೋತ್ಸವ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ರವರು ನೆರವೇರಿಸುವರು

ದಿನಾಂಕ : 6ನೇ ಜೂನ್ 2022, ಸೋಮವಾರ, ಸಂಜೆ 4.30 ಗಂಟೆಗೆ. ಸ್ಥಳ : ಕೆಂಪೇಗೌಡ ಬಸ್ ನಿಲ್ದಾಣ, ಪಂಚಶೀಲನಗರ, ಬೆಂಗಳೂರು

ನಾಗರಭಾವಿ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ" ಉದ್ಘಾಟನೆ

ಕಾಮಗಾರಿಯ ಮೊತ್ತ: ರೂ.500 ಲಕ್ಷಗಳು

ಕಾವೇರಿಪುರ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ನಾಡಪ್ರಭು ಕೆಂಪೇಗೌಡ ಬಹುಪಯೋಗಿ ಕಟ್ಟಡ"ದ ಉದ್ಘಾಟನೆ

ಕಾಮಗಾರಿಯ ಮೊತ್ತ: ರೂ.1150 ಲಕ್ಷಗಳು

ಮೂಡಲ ಪಾಳ್ಯ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ನೆಲಮಟ್ಟದ ಜಲಸಂಗ್ರಹಾಗಾರ"ದ ಉದ್ಘಾಟನೆ

ಕಾಮಗಾರಿಯ ಮೊತ್ತ: ರೂ.500 ಲಕ್ಷಗಳು

ಜ್ಯೋತಿ ಬೆಳಗಿಸುವವರು
ಶ್ರೀಮತಿ ನಿರ್ಮಲಾ ಸೀತಾರಾಮನ್ – ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ – ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ವಿ. ಸೋಮಣ್ಣ – ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ

ಘನ ಉಪಸ್ಥಿತಿ
ಶ್ರೀ ಆರ್. ಅಶೋಕ – ಮಾನ್ಯ ಕಂದಾಯ ಸಚಿವರು
ಶ್ರೀ ಬಿ. ಶ್ರೀರಾಮುಲು – ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡದ ಕಲ್ಯಾಣ ಸಚಿವರು
ಶ್ರೀ ವಿ. ಸುನಿಲ್ ಕುಮಾರ್ – ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
ಶ್ರೀ ಬಿ.ಸಿ. ನಾಗೇಶ್ – ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು
ಶ್ರೀ ಮುನಿರತ್ನ – ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ತೇಜಸ್ವಿ ಸೂರ್ಯ – ಮಾನ್ಯ ಸಂಸದರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಡಾ॥ ಸಿ.ಎನ್. ಅಶ್ವತ್ಥ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ಬಿ.ಎ. ಬಸವರಾಜ – ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು
ಶ್ರೀ ಕೆ. ಗೋಪಾಲಯ್ಯ – ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) – ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್ – ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ – ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಸತೀಶ್ ರೆಡ್ಡಿ – ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ – ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್)
ಶ್ರೀ ಕೆ.ಸಿ. ರಾಮಮೂರ್ತಿ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್ – ಮಾನ್ಯ ಸಂಸದರು (ರಾಜ್ಯಸಭೆ)
ಡಾ॥ ಎಲ್. ಹನುಮಂತಯ್ಯ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಪುಟ್ಟಣ್ಣ – ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಕೆ. ಗೋವಿಂದರಾಜ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ.ಆರ್. ರಮೇಶ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಹೆಚ್.ಎಂ. ರಮೇಶ ಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಮುನಿರಾಜು ಗೌಡ .ಪಿ.ಎಂ (ತುಳಸಿ) – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ – ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

ರಾಕೇಶ್ ಸಿಂಗ್, ಭಾ.ಆ.ಸೇ – ಆಡಳಿತಗಾರರು, ಬಿಬಿಎಂಪಿ
ತುಷಾರ್ ಗಿರಿ ನಾಥ್, ಭಾ.ಆ.ಸೇ – ಮುಖ್ಯ ಆಯುಕ್ತರು, ಬಿಬಿಎಂಪಿ
ಎನ್. ಜಯರಾಂ, ಭಾ.ಆ.ಸೇ – ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.

“ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು”
ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು–560002

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

ಸಾರಿಗೆ ಇಲಾಖೆ
ಸಾರಿಗೆ ಇಲಾಖೆ TRANSPORT DEPARTMENT

ಸಾರ್ವಜನಿಕ ಪ್ರಕಟಣೆ

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನೀಡಿದ ನಿರ್ದೇಶನಗಳ ಮೇರೆಗೆ, ಸರ್ಕಾರದ ಎಲ್ಲಾ ಇಲಾಖೆಗಳು/ ನಿಗಮಗಳು / ಮಂಡಳಿಗಳು / ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ ಉಪಯೋಗಿಸುವ ಯಾವುದೇ ಖಾಸಗಿ ವಾಹನಗಳಲ್ಲಿ ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು, ಚಿಹ್ನೆ, ಲಾಂಛನಗಳನ್ನು ವಾಹನಗಳ ನೋಂದಣಿ ಫಲಕಗಳ ಮೇಲೆ ಅನಧಿಕೃತವಾಗಿ ಅಳವಡಿಸಿಕೊಳ್ಳುವುದು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 50 ಮತ್ತು 51ರಲ್ಲಿ ನಿಗದಿಪಡಿಸಿರುವ ಮಾನದಂಡಗಳಿಗೆ ಹಾಗೂ ಕೇಂದ್ರದ The Emblems of India (Prohibition of Improper Use) Act 2005 (50 of 2005) ಕಲಂ 3,4 ಮತ್ತು 5 ರ ಉಲ್ಲಂಘನೆಯಾಗುತ್ತದೆ ಮತ್ತು ಇಂತಹ ನೋಂದಣಿ ಫಲಕಗಳನ್ನು ಕೂಡಲೇ ತೆರವುಗೊಳಿಸಬೇಕಾಗಿರುತ್ತದೆ.

ಸಾರಿಗೆ ಇಲಾಖೆಯಿಂದ ಸದರಿ ವಿಷಯದ ಕುರಿತು ಹಲವಾರು ಬಾರಿ, ಪ್ರಕಟಣೆ ನೀಡಲಾಗಿದ್ದರೂ ಸಹ, ಈ ರೀತಿ ಅನಧಿಕೃತ ನೋಂದಣಿ ಫಲಕಗಳನ್ನು ಅಳವಡಿಸಿರುವ ವಾಹನಗಳು ರಸ್ತೆಯ ಮೇಲೆ ಸಂಚರಿಸುತ್ತಿರುವುದನ್ನು ಗಮನಿಸಿದ್ದು, ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣ ಸಿ.ಆರ್.ಎಲ್.ಪಿ. ನಂ.1850/2017ರಲ್ಲಿ ಮೇಲೆ ತಿಳಿಸಿರುವಂತೆ, ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು ಚಿಹ್ನೆ/ ಲಾಂಛನಗಳನ್ನು ಖಾಸಗಿ ವಾಹನಗಳ ನೋಂದಣಿ ಫಲಕಗಳ ಮೇಲೆ ಅಳವಡಿಸಿರುವುದನ್ನು ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ವಹಿಸಲು ಆದೇಶ ನೀಡಿರುತ್ತದೆ.

ಆದ್ದರಿಂದ, ಮೇಲೆ ತಿಳಿಸಿರುವಂತೆ, ಅನಧಿಕೃತ ನೋಂದಣಿ ಫಲಕಗಳನ್ನು ಕೂಡಲೇ ತೆರವುಗೊಳಿಸಲು ಎಲ್ಲಾ ಖಾಸಗಿ ವಾಹನ ಮಾಲೀಕರಿಗೆ ತಿಳಿಸಲಾಗಿದೆ. ಅಲ್ಲದೆ, ಅನಧಿಕೃತ ನೋಂದಣಿ ಫಲಕಗಳನ್ನು ಅಳವಡಿಸಿಕೊಂಡಿರುವ ವಾಹನವು ಸಾರ್ವಜನಿಕ ಸ್ಥಳದಲ್ಲಿ ಕಂಡುಬಂದಲ್ಲಿ ಸಾರ್ವಜನಿಕರು ಅದರ ನೋಂದಣಿ ಫಲಕ, ಸ್ಥಳ (location) ಸಮೇತ ಭಾವಚಿತ್ರವನ್ನು ತೆಗೆದುಕೊಂಡು 9449863459 Whatsapp ಸಂಖ್ಯೆಗೆ ರವಾನಿಸಿದಲ್ಲಿ ಅಂತಹ ವಾಹನ ಮಾಲೀಕರ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಆಯುಕ್ತರು
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು

ಬೆಂಗಳೂರು
ದಿನಾಂಕ : 04–06–2022

ಸಾರಿಗೆ ಮತ್ತು ರಸ್ತೆ ಸುರಕ್ಷತೆ
1 ನೇ ಮಹಡಿ, ಟಿಟಿಎಂಸಿ ಕಟ್ಟಡ, ‘ಎ’ ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು - 560 027
ವೆಬ್‌ಸೈಟ್: www.transport.kar.gov.in ಇ-ಮೇಲ್: transcom@nic.in ದೂ. ಸಂ.: 080 22214900

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸ್ವಾತಂತ್ರ್ಯದ ಅಮೃತ ಮಹೋತ್ಸವ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ



“ನಮ್ಮ ಕೋಟಿ ಕೋಟಿ ಬಂಧುಗಳು ಅಜ್ಞಾನದ ಕತ್ತಲೆಯಲ್ಲೇ ಇದ್ದಾರೆ. ರಾಷ್ಟ್ರದ ಸಮಸ್ತ ಆಗುಹೋಗುಗಳಲ್ಲಿ ಹೃತ್ಪೂರ್ವಕವಾಗಿ ಸಾಮಾನ್ಯ ಜನತೆ ಪಾಲ್ಗೊಳ್ಳಬೇಕು. ಅಂತಹ ಒಂದು ಸ್ಥಿತಿಯನ್ನು ನಾವು ನಿರ್ಮಿಸಬೇಕು”
-ಡಿ. ದೇವರಾಜ ಅರಸು

ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆಯ ಹರಿಕಾರ, ಮಾಜಿ ಮುಖ್ಯಮಂತ್ರಿ
ಡಿ. ದೇವರಾಜ ಅರಸು ಅವರ
40ನೇ ಪುಣ್ಯಸ್ಮರಣೆ ಪ್ರಯುಕ್ತ ಪ್ರತಿಮೆಗೆ ಮಾಲಾರ್ಪಣೆ
ದಿನಾಂಕ: 06.06.2022 ಸೋಮವಾರ, ಬೆಳಿಗ್ಗೆ 10:00 ಗಂಟೆಗೆ ಸ್ಥಳ: ವಿಧಾನಸೌಧದ ಪಶ್ಚಿಮ ದ್ವಾರ, ಬೆಂಗಳೂರು

ಡಿ. ದೇವರಾಜ ಅರಸು ಅವರ ಪ್ರತಿಮೆಗೆ
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮತ್ತು
ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ
ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರಿಂದ
ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

ಸರ್ಕಾರದ ಕಾರ್ಯದರ್ಶಿಗಳು – ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಆಯುಕ್ತರು – ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು”
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ವಿದ್ಯಾರ್ಥಿಗಳ ಸುಲಿಗೆ ಆರೋಪಿ ಬಂಧನ

ಬೆಂಗಳೂರು: ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿದ್ದ ವಿದ್ಯಾರ್ಥಿಗಳನ್ನು ಹಿಂಬಾಲಿಸಿ ಸುಲಿಗೆ ಮಾಡುತ್ತಿದ್ದ ಆರೋಪಿ ಶಿವಕುಮಾರ್ ಅಲಿಯಾಸ್ ಶಿವನನ್ನು (20) ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಮೃತಹಳ್ಳಿ ಹೊಯ್ಸಳ ಬಡಾವಣೆಯ ಶಿವಕುಮಾರ್, ಕಟ್ಟಿಗೇನಹಳ್ಳಿ ಬಳಿ ಮೇ 19ರಂದು ರಾತ್ರಿ ವಿದ್ಯಾರ್ಥಿಯೊಬ್ಬರನ್ನು ಸುಲಿಗೆ ಮಾಡಿ ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಿವಕುಮಾರ್ ಜೊತೆ ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

'ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸುತ್ತಿದ್ದ ಆರೋಪಿಗಳು, ವಿದ್ಯಾರ್ಥಿಯನ್ನು ಅಡ್ಡಗಟ್ಟಿ ಚಾಕು ತೋರಿಸಿ ಮೊಬೈಲ್ ಹಾಗೂ ನಗದು ಕಿತ್ತುಕೊಳ್ಳುತ್ತಿದ್ದರು. ನಂತರ, ವಾಹನದಲ್ಲೇ ಪರಾರಿಯಾಗುತ್ತಿದ್ದರು' ಎಂದೂ ತಿಳಿಸಿದರು.

ಆಹಾರ ಧಾನ್ಯ ಸಾಗಣೆ ಗುತ್ತಿಗೆದಾರನಿಂದಲೇ ಕಳ್ಳಸಾಗಣೆ • ನಗರದಲ್ಲಿ ಹೆಚ್ಚುತ್ತಿರುವ ಅಕ್ರಮ

ಪಡಿತರ ರಾಗಿ ನೇರ ಕಾಳಸಂತೆಗೆ!

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರೈತರಿಂದ ಖರೀದಿಸಿ ಪಡಿತರ ಚೀಟಿದಾರರಿಗೆ ವಿತರಿಸಲು ಹಂಚಿಕೆ ಮಾಡಿರುವ ರಾಗಿ ನೇರವಾಗಿ ಕಾಳಸಂತೆಗೆ ಸಾಗಣೆಯಾಗುತ್ತಿರುವುದು ಪತ್ತೆಯಾಗಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಡಿತರ ಧಾನ್ಯ ಸಗಟು ಸಾಗಣೆಯ ಗುತ್ತಿಗೆ ಪಡೆದಿರುವವರೇ ಪಡಿತರವನ್ನು ಕಳ್ಳಸಾಗಣೆ ಮಾಡುತ್ತಿರುವುದು ಬಯಲಿಗೆ ಬಂದಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಜ್ಯೋತಿಪಾಳ್ಯ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಟ್ಟುನಿಂತಿದ್ದ ಲಾರಿ ತಪಾಸಣೆ ವೇಳೆ ಪಡಿತರ ರಾಗಿ ಕಳ್ಳಸಾಗಣೆ ಸಂಗತಿ ಹೊರಬಂದಿದೆ. ಬೆಂಗಳೂರು ಉತ್ತರ, ಪಶ್ಚಿಮ ಮತ್ತು ಪೂರ್ವ ವಲಯಗಳ ವ್ಯಾಪ್ತಿಯಲ್ಲಿನ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ (ಕೆಎಫ್‌ಸಿಎಸ್‌ಸಿ) ಗೋದಾಮುಗಳಿಗೆ ಸಗಟು ಪಡಿತರ ಸಾಗಿಸುವ ಗುತ್ತಿಗೆ ಹೊಂದಿರುವ ಎಸ್.ಎ.ಕೆ. ಟ್ರಾನ್ಸ್‌ಪೋರ್ಟ್ ರಾಗಿ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಎಸ್.ಎ.ಕೆ. ಟ್ರಾನ್ಸ್‌ಪೋರ್ಟ್ ಮಾಲೀಕ ಶೇಖ್ ಅಬ್ದುಲ್ ಖಾಲಿಕ್ ಮತ್ತು ವಾಹನ ಚಾಲಕನ ವಿರುದ್ಧ ಮಾಗಡಿ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಿಸಲಾಗಿದೆ. ರಾಗಿಯ ನಿರಂತರವಾಗಿ ಕಳ್ಳಸಾಗಣೆ ಸಂಶಯದ ಮೇಲೆ ತನಿಖೆ ಮುಂದುವರಿದಿದೆ.

'ಗುತ್ತಿಗೆದಾರ ಕಪ್ಪುಪಟ್ಟಿಗೆ'

'ಶೇಖ್ ಅಬ್ದುಲ್ ಖಾಲಿಕ್‌ಗೆ ವಿವಿಧೆಡೆ ನೀಡಿರುವ ಸಾಗಣೆ ಗುತ್ತಿಗೆ ಅಮಾನತು ಮತ್ತು ಎಸ್.ಎ.ಕೆ. ಟ್ರಾನ್ಸ್‌ಪೋರ್ಟ್ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು' ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಆಯುಕ್ತೆ ಎಂ. ಕನಗವಲ್ಲಿ 'ಪ್ರಜಾವಾಣಿ'ಗೆ ತಿಳಿಸಿದರು.

ಸಂಗ್ರಹಣಾ ಕೇಂದ್ರದಿಂದ ಕಾಳಸಂತೆಗೆ: ಎಂಎಸ್‌ಪಿ ಯೋಜನೆಯಡಿ ದೇವನಹಳ್ಳಿ ತಾಲ್ಲೂಕಿನ ರೈತರಿಂದ ಖರೀದಿಸಿರುವ ರಾಗಿಯನ್ನು ಅಲ್ಲಿನ ಸಂಗ್ರಹಣಾ ಕೇಂದ್ರದಲ್ಲಿ ದಾಸ್ತಾನು ಮಾಡಿದ್ದು, ಬೆಂಗಳೂರು ನಗರದ ವ್ಯಾಪ್ತಿಗೆ ಹಂಚಿಕೆ ಮಾಡಲಾಗಿತ್ತು. ಬೆಂಗಳೂರು ಉತ್ತರ ಪಡಿತರ ವಲಯದ ವ್ಯಾಪ್ತಿಯ ಕೆ.ಜಿ.ಹಳ್ಳಿಯ ಕೆಎಫ್‌ಸಿಎಸ್‌ಸಿ ಗೋದಾಮಿಗೆ ಸಾಗಿಸಲು 260 ಕ್ವಿಂಟಲ್ ರಾಗಿಯನ್ನು ಜೂನ್ 2ರಂದು ಎಸ್.ಎ.ಕೆ. ಟ್ರಾನ್ಸ್‌ಪೋರ್ಟ್‌ನ ಕೆಎ-01 ಎಡಿ-7535 ಲಾರಿಗೆ ತುಂಬಿಸಲಾಗಿತ್ತು.

ರಾಗಿಯನ್ನು ಕೆ.ಜಿ.ಹಳ್ಳಿ ಗೋದಾಮಿಗೆ ತರುವ ಬದಲಿಗೆ ಮಾಗಡಿ ಮಾರ್ಗವಾಗಿ ಕಾಳಸಂತೆಗೆ ಕೊಂಡೊಯ್ಯಲಾಗುತ್ತಿತ್ತು. ಜ್ಯೋತಿಪಾಳ್ಯದ ಬಳಿ ಲಾರಿ ಕೆಟ್ಟು ನಿಂತಿದ್ದರಿಂದ ಮುಂದಕ್ಕೆ ಸಾಗಲು ಆಗಿರಲಿಲ್ಲ. ರಾಮನಗರ ಜಿಲ್ಲೆಯ ಆಹಾರ ಇಲಾಖೆ ಅಧಿಕಾರಿಗಳು ಸಂಶಯದ ಮೇಲೆ ತಪಾಸಣೆ ನಡೆಸಿದಾಗ ರಾಗಿ ಇರುವುದು ಕಂಡುಬಂದಿತ್ತು. ಮಾಗಡಿ ತಾಲ್ಲೂಕಿನ ಆಹಾರ ನಿರೀಕ್ಷಕಿ ಪುಷ್ಪಲತಾ ಟಿ.ಎನ್. ನೀಡಿರುವ ದೂರನ್ನು ಆಧರಿಸಿ ಪ್ರಕರಣ ದಾಖಲಿಸಲಾಗಿದೆ.

ಕಾಳಸಂತೆಕೋರರ ನಂಟು: 'ಪಡಿತರ ಉದ್ದೇಶ ಅಕ್ಕಿ, ರಾಗಿ, ಗೋಧಿಯನ್ನು ಅಧಿಕೃತ ಸಾಗಣೆ ಗುತ್ತಿಗೆದಾರರು, ಕಾಳಸಂತೆಕೋರರು ಶಾಮೀಲಾಗಿ ಕಳ್ಳಸಾಗಣೆ ಮಾಡುತ್ತಿರುವುದು ನಿರಂತರ ನಡೆಯುತ್ತಿದೆ. ವಿತರಣಾ ಕೇಂದ್ರಗಳಿಂದ ನೇರವಾಗಿ ಕಾಳಸಂತೆಗೆ ಒಯ್ಯುತ್ತಿರುವುದೂ ಹೆಚ್ಚುತ್ತಿದೆ. ಈ ಪ್ರಕರಣದಲ್ಲೂ ಸಾಗಣೆ ಗುತ್ತಿಗೆದಾರರ ಜತೆ ಕಾಳಸಂತೆಕೋರರು ಕೈಜೋಡಿಸಿರುವ ಶಂಕೆ ಇದೆ' ಎನ್ನುತ್ತಾರೆ ಆಹಾರ ಇಲಾಖೆ ಅಧಿಕಾರಿಗಳು.

ಸುದ್ದಿ 2 ನಿಮಿಷ

ಮಲ್ಲೇಶ್ವರದಲ್ಲಿ ಕಾಮಗಾರಿ ಸಂಚಾರ ನಿರ್ಬಂಧ

ಬೆಂಗಳೂರು: ಟಿ. ಚೌಡಯ್ಯ ರಸ್ತೆಗೆ ಹೊಂದಿಕೊಂಡಿರುವ ಮಲ್ಲೇಶ್ವರ 18ನೇ ಅಡ್ಡರಸ್ತೆಯಿಂದ ಸಿ.ಎನ್. ಆರ್ ರಾವ್ ಕೆಳಸೇತುವೆವರೆಗಿನ ಎಡಬದಿಯಲ್ಲಿ ಜೂನ್ 6ರಿಂದ ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಲಿದ್ದು, ಈ ಮಾರ್ಗದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

'ಬಿಬಿಎಂಪಿ ವತಿಯಿಂದ ಕಾಮಗಾರಿ ನಡೆಯಲಿದ್ದು, ಸಾರ್ವಜನಿಕರು ಸಹಕರಿಸಬೇಕು' ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

'ಬಳ್ಳಾರಿ ರಸ್ತೆಯ ಕಾವೇರಿ ಜಂಕ್ಷನ್‌ನಿಂದ ಯಶವಂತಪುರ ಕಡೆಗೆ ಹೋಗುವ ವಾಹನಗಳು, ಮಲ್ಲೇಶ್ವರ 18ನೇ ಅಡ್ಡರಸ್ತೆಯಲ್ಲಿ ಎಡತಿರುವು ಪಡೆದು ಸಂಪಿಗೆ ರಸ್ತೆ ಜಂಕ್ಷನ್, ಮಾರ್ಗೋಸಾ ರಸ್ತೆ ಜಂಕ್ಷನ್ ಹಾಗೂ ಮಲ್ಲೇಶ್ವರ 8ನೇ ಮುಖ್ಯರಸ್ತೆ ಮೂಲಕ ಹೋಗಬಹುದು. ಜೊತೆಗೆ, ರಮಣ ಮಹರ್ಷಿ ರಸ್ತೆಯಲ್ಲಿ ಸಾಗಿ ಮೇಖ್ರಿ ಸರ್ಕಲ್ ಸರ್ವೀಸ್ ರಸ್ತೆ ಹಾಗೂ ಸದಾಶಿವನಗರ ಪೊಲೀಸ್ ಠಾಣೆ ರಸ್ತೆ ಮೂಲಕವೂ ಸಂಚರಿಸಬಹುದು' ಎಂದು ಪೊಲೀಸರು ತಿಳಿಸಿದ್ದಾರೆ.

ವಾರ್ಡ್ ಸಮಿತಿ ಬಲಪಡಿಸಲು ಸಲಹೆ

ಬೆಂಗಳೂರು: ನಗರದ ಅಭಿವೃದ್ಧಿಗಾಗಿ ವಾರ್ಡ್ ಸಮಿತಿಗಳನ್ನು ಬಲಪಡಿಸಬೇಕು ಎಂದು ಬೃಹತ್ ಬೆಂಗಳೂರು ವಾರ್ಡ್ ಸಮಿತಿ ಬಳಗ ಒತ್ತಾಯಿಸಿದೆ.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ವಾರ್ಡ್ ಸಮಿತಿ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಮಿತಿಯ ಪದಾಧಿಕಾರಿಗಳು ಸಲ್ಲಿಸಿದರು.

ವಾರ್ಡ್ ಸಮಿತಿ ಸಭೆಗಳ ಮೇಲೆ ನಿಗಾವಹಿಸಲು ಮತ್ತು ನಾಗರಿಕರ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ರೂಪಿಸಲು ವಲಯ ಮಟ್ಟದಲ್ಲಿ ಪ್ರತ್ಯೇಕ ಕೋಶ ಸ್ಥಾಪಿಸಬೇಕು ಎಂದು ಸಲಹೆ ನೀಡಿದರು.

ವಾರ್ಡ್ ಸಮಿತಿ ಸಭೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ವಲಯ ಆಯುಕ್ತರನ್ನು ಹೊಣೆಗಾರರನ್ನಾಗಿ ಮಾಡಬೇಕು. ಸಭೆಗಳು ನಡೆಯುವ ಮುನ್ನ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಮತ್ತು ಕಾರ್ಯಸೂಚಿಯನ್ನು ವಿವರಿಸಬೇಕು ಎಂದು ಕೋರಿದರು.

'ಮೀಸಲಾತಿ, ಒಳಮೀಸಲಾತಿ ತಲ್ಲಣಗಳು – ಅವಲೋಕನ' ಕುರಿತ ವಿಚಾರಸಂಕಿರಣ

ಸದಾಶಿವ ಆಯೋಗದ ವರದಿ ಮಂಡಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪಕ್ಷಗಳು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಅಧಿಕಾರಕ್ಕೇರಲು ಮೆಟ್ಟಿಲು ಮಾಡಿಕೊಂಡಿವೆಯೇ ಹೊರತು ಅನುಷ್ಠಾನಗೊಳಿಸಲು ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಕಿಡಿಕಾರಿದರು.

ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ಮತ್ತು ಮಾದಿಗ ಮಾನವ ಹಕ್ಕುಗಳ ವೇದಿಕೆ ಭಾನುವಾರ ಜಂಟಿಯಾಗಿ ಆಯೋಜಿಸಿದ್ದ 'ಮೀಸಲಾತಿ ಮತ್ತು ಒಳಮೀಸಲಾತಿ ತಲ್ಲಣಗಳು–ಅವಲೋಕನ' ಕುರಿತ ವಿಚಾರಸಂಕಿರಣದಲ್ಲಿ ಅವರು ಒಳಮೀಸಲಾತಿ ಕುರಿತ ಹೋರಾಟದ ಹಾದಿಯನ್ನು ವಿಶ್ಲೇಷಿಸಿದರು.

'ಸುಮಾರು 32 ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಟ ನಡೆಯುತ್ತಿದ್ದರೂ ಫಲ ದೊರೆತಿಲ್ಲ. ಸಮಗ್ರವಾಗಿ ಸಿದ್ಧಪಡಿಸಿರುವ ಸದಾಶಿವ ಆಯೋಗದ ವರದಿಯನ್ನು ಮೊದಲು ವಿಧಾನಸಭೆಯಲ್ಲಿ ಮಂಡಿಸಿ ಚರ್ಚೆ ನಡೆಸಬೇಕು. ವರದಿಯನ್ನು ತಿರಸ್ಕರಿಸುವ ನಿರ್ಣಯವನ್ನಾದರೂ ಕೈಗೊಳ್ಳಲಿ' ಎಂದರು.

'ಒಳಮೀಸಲಾತಿಗಾಗಿ ಹೋರಾಟವನ್ನು ಜೀವಂತವಾಗಿಡುವ ಅಗತ್ಯವಿದೆ. ಮುಂಬರುವ 75ನೇ ವರ್ಷದ ಸ್ವಾತಂತ್ರ್ಯೋತ್ಸವ ದಿನದಂದೇ ದೇಶದ ಗಮನಸೆಳೆಯುವ ನಿಟ್ಟಿನಲ್ಲಿ ಹೋರಾಟ ರೂಪಿಸುವುದು ಅಗತ್ಯವಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲೇ ಒಳಮೀಸಲಾತಿ ಹೆಚ್ಚು ಅಗತ್ಯವಿರುವುದರಿಂದ ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡಿನಲ್ಲಿ ಒಂದೇ ದಿನ ಈ ಹೋರಾಟ ತೀವ್ರ ಸ್ವರೂಪದಲ್ಲಿ ನಡೆಯಬೇಕು' ಎಂದು ಸಲಹೆ ನೀಡಿದರು.

'ಆರ್‌ಎಸ್‌ಎಸ್ ಮುಖಂಡರು ಬಿಜೆಪಿ ಮನವೊಲಿಸಿ ವರದಿ ಜಾರಿಗೊಳಿಸುವ ನಂಬಿಕೆ ಇತ್ತು. ಈ ಬಗ್ಗೆ ಚರ್ಚಿಸಲು ಸಮುದಾಯದ ಕೆಲವು ನಾಯಕರು ಕೇಶವಕೃಪಾಕ್ಕೂ ಹೋಗಿದ್ದರು. ಇದು ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿದ್ದರಿಂದ ಯಾರೂ ವಿರೋಧ ವ್ಯಕ್ತಪಡಿಸಿಲ್ಲ. ಒಟ್ಟಾರೆಯಾಗಿ ವಿಶ್ಲೇಷಿಸಿದಾಗ ಮಾದಿಗ ಸಮುದಾಯ ಒಂದು ರಾಜಕೀಯ ಪಕ್ಷವನ್ನು ಗೆಲ್ಲಿಸಬಹುದು ಅಥವಾ ಸೋಲಿಸಬಹುದು ಎನ್ನುವುದು ರಾಜಕೀಯ ಪಕ್ಷಗಳಿಗೆ ಮನವರಿಕೆಯಾಗಿದೆ' ಎಂದು ವಿವರಿಸಿದರು.

'ರಾಜಕೀಯವಾಗಿ ಅಸಂಘಟಿತವಾಗಿರುವುದರಿಂದ ಮಾದಿಗ ಸಮುದಾಯವು ತನ್ನ ಹಿತಾಸಕ್ತಿಯನ್ನೇ ಬಲಿ ಕೊಡುತ್ತಿದೆ. ರಾಜ್ಯ ಸರ್ಕಾರಗಳು ನಿರಾಸಕ್ತಿ ವಹಿಸಿದ್ದರಿಂದ ವರದಿ ಅನುಷ್ಠಾನವಾಗುತ್ತಿಲ್ಲ. ಈಗ ಚುನಾವಣೆಗಳು ಸಮೀಪಿಸುತ್ತಿರುವುದರಿಂದ ರಾಜಕೀಯ ಪಕ್ಷಗಳು ಬೇಡಿಕೆ ಈಡೇರಿಸುವ ಭರವಸೆಗಳನ್ನು ನೀಡುತ್ತಿವೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಮಾತನಾಡಿ, 'ನಮ್ಮ ಶ್ರಮಕ್ಕೆ ಇನ್ನೂ ಪ್ರತಿಫಲ ದೊರೆತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವಿಚಾರ ಸಂಕಿರಣವನ್ನು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರು ಬಾಬು ಜಗಜೀವನ್ ರಾಮ್ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ಶಾಸಕ ಡಾ.ಕೆ. ಅನ್ನದಾನಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಚಿತ್ರದುರ್ಗದ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ, ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಡಾ. ಬಾಬು ಜಗಜೀವನ್‌ರಾಮ ಅಧ್ಯಯನ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಗಂಗಾಧರಯ್ಯ ಇದ್ದಾರೆ. – ಪ್ರಜಾವಾಣಿ ಚಿತ್ರ

ಲಂಬಾಣಿ, ಭೋವಿ ಸಮುದಾಯಗಳ ಮನವೊಲಿಸಬೇಕು: ಮಾದಾರ ಚನ್ನಯ್ಯ ಶ್ರೀ

'ಒಳ ಮೀಸಲಾತಿ ಬಗ್ಗೆ ಭೋವಿ ಮತ್ತು ಲಂಬಾಣಿ ಸಮುದಾಯಗಳಲ್ಲಿ ತಪ್ಪು ಅಭಿಪ್ರಾಯ ಮೂಡಿಸಲಾಗಿದೆ. ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ತಮ್ಮನ್ನು ಕೈಬಿಡಲಾಗುತ್ತದೆ ಎನ್ನುವ ಆತಂಕ ಈ ಸಮುದಾಯದವರಲ್ಲಿದೆ. ಹೀಗಾಗಿ, ಈ ಆತಂಕ ನಿವಾರಿಸಬೇಕಾಗಿದೆ' ಎಂದು ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು.

'ಎಲ್ಲ ಸಮುದಾಯಗಳ ಮುಖಂಡರ ಜತೆ ಚರ್ಚಿಸಿ ತಪ್ಪು ಅಭಿಪ್ರಾಯಗಳನ್ನು ನಿವಾರಿಸಿ, ವಿಶ್ವಾಸಗಳಿಸಬೇಕು. ಜತೆಗೆ, ಮಾದಿಗ ಸಮುದಾಯಕ್ಕೆ ನ್ಯಾಯಸಮ್ಮತವಾಗಿ ದೊರೆಯಬೇಕಾದ ಮೀಸಲಾತಿ ಮಾತ್ರ ಪಡೆಯಲಾಗುತ್ತಿದೆ ಎನ್ನುವ ಬಗ್ಗೆಯೂ ಮನವರಿಕೆ ಮಾಡುವ ಕಾರ್ಯ ಕೈಗೊಳ್ಳಬೇಕಾಗಿದೆ' ಎಂದು ಸಲಹೆ ನೀಡಿದರು.

'ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 101 ಸಮುದಾಯಗಳಲ್ಲಿ ಕೇವಲ ಒಂದು ಸಮುದಾಯ ಮಾತ್ರ ಒಳಮೀಸಲಾತಿ ಕೇಳುತ್ತಿದೆ. ಇದರಿಂದ, ಉಳಿದ 100 ಸಮುದಾಯಗಳ ವಿರೋಧ ಎದುರಿಸಬೇಕಾಗುತ್ತದೆ ಎನ್ನುವ ಅಭಿಪ್ರಾಯವೂ ರಾಜಕೀಯ ಪಕ್ಷಗಳಲ್ಲಿದೆ. ಆದ್ದರಿಂದ, ಸಮುದಾಯದ ನಾಯಕರು ಒಳಮೀಸಲಾತಿಯ ಅಗತ್ಯತೆ ಕುರಿತು ಮನವರಿಕೆ ಮಾಡಬೇಕು. ನಮ್ಮ ಹೋರಾಟದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಬೆಂಬಲವೂ ಅಗತ್ಯವಿದೆ' ಎಂದು ಹೇಳಿದರು.

> **ಸರ್ಕಾರ ಶ್ರೀಮಂತರ ಪರವಾಗಿದೆ. ಸರ್ಕಾರ ನಮ್ಮದಾಗಬೇಕು. ಸದಾಶಿವ ವರದಿ ಜಾರಿಗೆ ಉಗ್ರ ಹೋರಾಟ ಮಾಡಬೇಕು.**
> **ಮಾರಸಂದ್ರ ಮುನಿಯಪ್ಪ**
> ಬಿಎಸ್‌ಪಿ ರಾಜ್ಯ ಉಸ್ತುವಾರಿ

ಪುಲಿಕೇಶಿ ನಗರ: ಮೀನಿನ ವಿಚಾರಕ್ಕೆ ಯುವಕನ ಕೊಲೆ

ಬೆಂಗಳೂರು: ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಮೀನು ಖರೀದಿ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದಿದ್ದು, ಪ್ರಶಾಂತ್ (24) ಎಂಬುವರನ್ನು ಕೊಲೆ ಮಾಡಲಾಗಿದೆ. 'ಸ್ಥಳೀಯ ನಿವಾಸಿ ಪ್ರಶಾಂತ್ ಅವರನ್ನು ಭಾನುವಾರ ಸಂಜೆ 6.30ರ ಸುಮಾರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ. ಕೃತ್ಯ ಎಸಗಿದ್ದಾನೆ ಎನ್ನಲಾದ ಸ್ಥಳೀಯ ನಿವಾಸಿ ಅರ್ಜುನ್ (28) ಪರಾರಿಯಾಗಿದ್ದು, ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವ್ಯಕ್ತಿಯೊಬ್ಬರು ಅರ್ಜುನ್ ಮನೆ ಬಳಿ ಮೀನು ಮಾರಾಟ ಮಾಡಲು ಬಂದಿದ್ದರು. ಅದೇ ಸ್ಥಳಕ್ಕೆ ಬಂದಿದ್ದ ಪ್ರಶಾಂತ್, ಮೀನು ಖರೀದಿಸಲು ಮುಂದಾಗಿದ್ದರು. ಅದನ್ನು ನೋಡಿದ್ದ ಅರ್ಜುನ್, 'ನನ್ನ ಮನೆ ಎದುರು ಮೀನು ಖರೀದಿಸಬೇಡ. ಇಲ್ಲಿಂದ ಹೊರಟು ಹೋಗು' ಎಂದಿದ್ದ. ಅದನ್ನು ಪ್ರಶ್ನಿಸಿದ್ದ ಪ್ರಶಾಂತ್, 'ಸಾರ್ವಜನಿಕ ರಸ್ತೆಯಲ್ಲಿ ಮೀನು ಖರೀದಿಸುತ್ತಿದ್ದೇನೆ. ಅದನ್ನು ಕೇಳಲು ನೀನ್ಯಾರು' ಎಂದಿದ್ದ. 'ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆರೋಪಿ ಅರ್ಜುನ್, ಮನೆಯಲ್ಲಿದ್ದ ಚಾಕು ತೆಗೆದುಕೊಂಡು ಬಂದು ಪ್ರಶಾಂತ್ ಅವರಿಗೆ ಚುಚ್ಚಿದ್ದ. ತೀವ್ರ ರಕ್ತಸ್ರಾವದಿಂದ ಪ್ರಶಾಂತ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ನಿ, ಮಗಳ ಮೇಲೆ ದೌರ್ಜನ್ಯ: ಪಿಎಸ್‌ಐ ವಿರುದ್ಧ ಎಫ್‌ಐಆರ್

ಬೆಂಗಳೂರು: ಎರಡನೇ ಪತ್ನಿ ಹಾಗೂ ಅವರ ಮಗಳಿಗೆ ಕಿರುಕುಳ ನೀಡಿ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಪಿಎಸ್‌ಐ ಟಿ.ಆರ್. ಶ್ರೀನಿವಾಸ್ ವಿರುದ್ಧ ಜೆ.ಸಿ. ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜೆ.ಸಿ.ನಗರ ನಿವಾಸಿ, 37 ವರ್ಷದ ಮಹಿಳೆ ಅಂಚೆ ಮೂಲಕ ದೂರು ನೀಡಿದ್ದಾರೆ. ಪೋಕ್ಸೊ ಕಾಯ್ದೆ ಹಾಗೂ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಆರೋಪದಡಿ ಶ್ರೀನಿವಾಸ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಶ್ರೀನಿವಾಸ್, ಬೆಂಗಳೂರು ಜಿಲ್ಲಾ ಪೊಲೀಸ್ ಎಸ್ಪಿ ಕಚೇರಿಯಲ್ಲಿ ಸದ್ಯ ಕೆಲಸ ಮಾಡುತ್ತಿದ್ದಾರೆ. ಮೊದಲ ಪತ್ನಿಯಿಂದ ದೂರವಾಗಿದ್ದ ಅವರು, ದೂರುದಾರ ಮಹಿಳೆ ಜೊತೆ ಎರಡನೇ ಮದುವೆಯಾಗಿದ್ದರು' ಎಂದೂ ತಿಳಿಸಿವೆ.

ದೂರಿನ ವಿವರ: 'ಪತಿ ಕಿರುಕುಳ ನೀಡಿದ್ದರಿಂದ ಆತನ ವಿರುದ್ಧ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಅದೇ ಠಾಣೆಯಲ್ಲಿ ಶ್ರೀನಿವಾಸ್ ಪರಿಚಯವಾಗಿತ್ತು. ನನ್ನನ್ನು, ನನ್ನ ಇಬ್ಬರು ಹೆಣ್ಣುಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಆತ ಹೇಳಿದ್ದ' ಎಂದು ದೂರಿನಲ್ಲಿ ಮಹಿಳೆ ಹೇಳಿದ್ದಾರೆ.

'ನನ್ನನ್ನು ಗರ್ಭವತಿ ಮಾಡಿದ ಶ್ರೀನಿವಾಸ್, ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲಾರಂಭಿಸಿದ್ದ. ನೀಲಿ ಚಿತ್ರಗಳನ್ನು ನೋಡಿ ಲೈಂಗಿಕ ಕ್ರಿಯೆಗೆ ಒತ್ತಾಯಿಸಿ, ಅಮಾನವೀಯವಾಗಿ ನಡೆದುಕೊಳ್ಳುತ್ತಿದ್ದ. ನನ್ನ ತಂಗಿ ಜೊತೆಯೂ ಆತ ಸಲುಗೆ ಇಟ್ಟುಕೊಂಡಿದ್ದ. ನನ್ನ 13 ವರ್ಷದ ಮಗಳ ಮೇಲೂ ಲೈಂಗಿಕ ದೌರ್ಜನ್ಯ ಎಸಗಿ ಕಿರುಕುಳ ನೀಡಿದ್ದಾನೆ' ಎಂದೂ ದೂರಿನಲ್ಲಿ ತಿಳಿಸಿದ್ದಾರೆ.

ಷಷ್ಠಿ, ಆಶ್ಲೇಷ ನಕ್ಷತ್ರ ವಿಶೇಷ: ಕುಕ್ಕೆಯಲ್ಲಿ ಭಕ್ತಸಾಗರ

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ದೇವರ ದರ್ಶನಕ್ಕೆ ಬಂದಿರುವ ಭಕ್ತರು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಷಷ್ಠಿ, ಆಶ್ಲೇಷ ನಕ್ಷತ್ರ ಮತ್ತು ದೇವರು ಒಳಾಂಗಣ ಪ್ರವೇಶಿಸುವ ದಿನವಾದ ಭಾನುವಾರ, ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭಕ್ತ ಸಾಗರವೇ ಹರಿದು ಬಂದಿತ್ತು.

ವಾರಾಂತ್ಯದ ಕಾರಣ ಶನಿವಾರ ರಾತ್ರಿಯೇ ಕ್ಷೇತ್ರಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಹೀಗಾಗಿ, ದೇವಳದ ವಸತಿ ಗೃಹ ಹಾಗೂ ಸುತ್ತಲಿನ ಖಾಸಗಿ ವಸತಿ ಗೃಹಗಳು ಭರ್ತಿಯಾಗಿದ್ದವು. ಭಾನುವಾರ ಬಂದವರಿಗೆ ದೇವಳದ ಷಣ್ಮುಖ ಪ್ರಸಾದ ಭೋಜನ ಶಾಲೆಯ ಮೇಲ್ಮಹಡಿ ಮತ್ತು ಆದಿ ಸುಬ್ರಹ್ಮಣ್ಯ ಕಲ್ಯಾಣ ಮಂಟಪದಲ್ಲಿ ತಂಗಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಕುಕ್ಕೆಯಲ್ಲಿ ಭಾನುವಾರ ಒಂದೇ ದಿನ 2,594 ಆಶ್ಲೇಷ ಬಲಿ ಸೇವೆ ನೆರವೇರಿದೆ. 60 ಸಾವಿರಕ್ಕೂ ಅಧಿಕ ಭಕ್ತರು ದೇವರ ದರ್ಶನ ಪಡೆದಿದ್ದಾರೆ. 25 ಸಾವಿರಕ್ಕೂ ಅಧಿಕ ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು ಎಂದು ಕ್ಷೇತ್ರದ ಮೂಲಗಳು ತಿಳಿಸಿವೆ.

ಜೆಎಸ್‌ಎಸ್ ಕಾಲೇಜು ಪ್ರಥಮ ಸ್ಥಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ಕೇಂದ್ರ ಆಯೋಜಿಸಿದ್ದ 26ನೇ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜು ಪ್ರಥಮ ಸ್ಥಾನ ಪಡೆದಿದೆ. ಜೆಎಸ್‌ಎಸ್ ಕಾಲೇಜು ತಂಡ ₹15 ಸಾವಿರ ನಗದು ಮತ್ತು ಆಕರ್ಷಕ ಟ್ರೋಫಿಯನ್ನು ಪಡೆದುಕೊಂಡಿತು. ದ್ವಿತೀಯ ಸ್ಥಾನ ಪಡೆದ ಭೋಪಾಲ್‌ನ ಎನ್‌ಎಲ್‌ಐ ತಂಡವು ₹10 ಸಾವಿರ ನಗದು ಮತ್ತು ಟ್ರೋಫಿ ಪಡೆಯಿತು.

ಮೈಸೂರಿನ ಜೆಎಸ್‌ಎಸ್ ಕಾಲೇಜಿನ ಲಿಯಾ ಅನ್ನಾ ಫ್ರಾನ್ಸಿಸ್ ಉತ್ತಮ ವಕೀಲೆ ಹಾಗೂ ಭೋಪಾಲ್‌ನ ಎನ್‌ಎಲ್‌ಯು ಕಾಲೇಜಿನ ದೇವಾಂಶ್ ದುಬೆ ಉತ್ತಮ ವಕೀಲರಾಗಿ ಆಯ್ಕೆಯಾದರು.

ಉತ್ತಮ ಸಂಶೋಧನಾರ್ಥಿಯಾಗಿ ನೋಯ್ಡಾದ ಎಲ್‌ಎಲ್‌ಸಿ ಕಾಲೇಜಿನ ಹರ್ಷಿತ ಗುಪ್ತ ಮತ್ತು ಉತ್ತಮ ಮೆಮೋರಿಯಲ್ ಪ್ರಶಸ್ತಿಯನ್ನು ನಾಗಪುರದ ಎಂಎನ್‌ಎಲ್‌ಯು ಆಕರ್ಷಕ ಟ್ರೋಫಿ ಮತ್ತು ತಲಾ ₹5 ಸಾವಿರ ನಗದು ಬಹುಮಾನಕ್ಕೆ ಭಾಜನರಾದರು. ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಅಧ್ಯಯನ ಕೇಂದ್ರದ ಅಲ್ಯುಮ್ನಿ ಅಸೋಸಿಯೇಷನ್ ನಗದು ಬಹುಮಾನದ ಪ್ರಾಯೋಜಕತ್ವ ವಹಿಸಿಕೊಂಡಿತ್ತು.

26ನೇ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ಮೈಸೂರಿನ ಜೆಎಸ್‌ಎಸ್ ಕಾಲೇಜಿನ ತಂಡದ ವಿದ್ಯಾರ್ಥಿಗಳಿಗೆ ಟ್ರೋಫಿ ಪ್ರದಾನ ಮಾಡಲಾಯಿತು. ಬೆಂಗಳೂರು ವಿ.ವಿ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್, ಹೈಕೋರ್ಟ್ ನ್ಯಾಯಮೂರ್ತಿ ಡಾ. ಎಚ್.ಬಿ. ಪ್ರಭಾಕರ ಶಾಸ್ತ್ರಿ, ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಮತ್ತು ನ್ಯಾಯಮೂರ್ತಿ ಸಿದ್ದಯ್ಯ ರಾಚಯ್ಯ , ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ. ಸುರೇಶ್ ವಿ. ನಾಡಗೌಡ ಇದ್ದರು.

ಮಗಳ ಸಾವಿನ ಬಗ್ಗೆ ತಾಯಿಯಿಂದ ಪೊಲೀಸರಿಗೆ ದೂರು

8 ವರ್ಷ ಪ್ರೀತಿಸಿ ಮದುವೆ: ನವವಿವಾಹಿತೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಮಣ್ಯನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಅಂಜು (26) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿ ಅಂಜನ್ ಕಣಿಯಾರ್ (28) ವಿರುದ್ಧ ಪ್ರಕರಣ ದಾಖಲಾಗಿದೆ.

'ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಅಂಜು, ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಬ್ಯಾಂಕ್ ಉದ್ಯೋಗಿಯಾಗಿದ್ದ ಅರಕಲಗೂಡಿನ ಅಂಜನ್ ಅವರನ್ನು ನಾಲ್ಕು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ಶನಿವಾರ ಪತಿ ಹೊರಗೆ ಹೋಗಿದ್ದಾಗ ಕೊಠಡಿಯಲ್ಲಿ ಅಂಜು ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸರು ಹೇಳಿದರು.



ಅಂಜು ಹಾಗೂ ಅಂಜನ್ ದಂಪತಿ

'ಪತಿ ಅಂಜನ್ ನೀಡುತ್ತಿದ್ದ ಮಾನಸಿಕ ಹಾಗೂ ದೈಹಿಕ ಕಿರುಕುಳದಿಂದ ಬೇಸತ್ತು ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ತಾಯಿ ದೂರು ನೀಡಿದ್ದಾರೆ. ಅಂಜನ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಕಾಲೇಜು ದಿನದಿಂದಲೇ ಪ್ರೀತಿ: 'ಕಾಲೇಜು ದಿನದಿಂದಲೇ ಅಂಜು ಹಾಗೂ ಅಂಜನ್ ಪರಸ್ಪರ ಪ್ರೀತಿಸುತ್ತಿದ್ದರು. ಎಂಟು ವರ್ಷಗಳ ಇವರಿಬ್ಬರ ಪ್ರೀತಿ ಮನೆಯಲ್ಲಿ ಗೊತ್ತಾಗಿತ್ತು. ವಿರೋಧದ ನಡುವೆಯೂ ಇಬ್ಬರೂ ಮದುವೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಮದುವೆ ಬಳಿಕ ದಂಪತಿ, ಸುಬ್ರಮಣ್ಯನಗರದ ಮನೆಯೊಂದರಲ್ಲಿ ನೆಲೆಸಿದ್ದರು. ದಂಪತಿ ನಡುವೆ ಇತ್ತೀಚೆಗೆ ವೈಮನಸ್ಸು ಮೂಡಿತ್ತು ಎನ್ನಲಾಗಿದೆ. ಇದರಿಂದ ಬೇಸತ್ತು ಅಂಜು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

PLEASE JOIN for Retired officers Seminar.For Active Life and Additional 12Lakhs income free Registration: 7411358386/ 8095760094

EXCELLENT OPPORTUNITY for Retired/ VRS Bank & Govt. Officers to Earn Huge Income With Possible Travel Abroad Age 50-70 Yrs. Call 9060033382

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

Teachers/ Professors

WANTED TEACHERS with BA/MA, MSc/BSc, with BEd Eng/ Hin, NTT, MCA, MLib, Salary 14000 to 25000. Contact Sidhartha International School, Peenya, Dasarahalli. Ph: 9620100046, 9964670328

General

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUSINESS

Business Offers

Finance

URGENT LOAN Avail @ 3.5% per Annum Personal, Business, Agricultural, Project takeover all types loan. Shri Sai Finance Call & whatsApp ::7678360713.

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

RENTAL PROPERTIES

Accommodation Available

Commercial

OFFICE SPACES/ Industrial and Warehouse available and Wanted for immediate occupation/ Built-to suit. Lokapriya: 9845162933.

REAL ESTATE SELLING

House

Banashankari

SALE BSK THIRD stage THIRD phase FIRST block Bangalore-560085 OPPOSITE WATER TANK East Facing With OLD house FIFTY feetRoad suitable FOR COMMERCIAL 40x60feet CONTACT KRISHNAMURTHY 8277305783 BROKERS PLEASE EXCUSE.

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ADMISSION CORNER

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Malathahally, Nagarabhavi, Bengaluru-560056
Phone: 23213282, 29773282
ADMISSION OPEN - COURSES OFFERED
♦ Computer Science & Engg ♦ Civil Engineering
♦ Electronics & Commn Engg ♦ Apparel Design & Fashion Technology
♦ Mechanical Engineering
♦ Electrical & Electronics Engg
For details contact Mobile: 8553344666, 9448865597
RGMP-22301

PERSONAL

Change of Name

CHANGE OF NAME
I, AHMAD BASHA, presently residing at #44, S.No. 4th Street, Mackan Road, Bharathi Nagar, Bangalore North, Bangalore 560001, have changed my name to AHMAD BASHA SHAIK, vide affidavit dated 04.06.2022 before Notary L. Gopalakrishna, Bangalore. Henceforth I shall be known as AHMAD BASHA SHAIK only.

I, BHUVANASUNDARI R, residing at No. 524 Ground floor Prabhu Nilayam near Indira Canteen Annaiahreddy Layout Banasawadi, Bangalore-560043, have changed my name to BHUVANASUNDARI S, vide affidavit dated 04.06.2022 before Notary K.B. Sadhashivappa, Bangalore.

I. ZABEER KHAN KHALEELULLA, S/o. Khaleelulla Khan, residing at Old No,49, New No.5 2nd Main, 4th Cross Vinobha Nagar K.G.Halli, Arabic College Post Bangalore-560045, have changed my name to ZABEER KHAN, vide affidavit dated 03-06-2022 before Notary Sivakumara.M.N. Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಿಶ್ವ ಪರಿಸರ ದಿನ: ಗಿಡನೆಟ್ಟು ಸಂಭ್ರಮಿಸಿದ ನಾಗರಿಕರು • ಬೈಸಿಕಲ್ ಮತ್ತು ಕಾಲ್ನಡಿಗೆ ಜಾಥಾಗಳ ಮೂಲಕ ಜಾಗೃತಿ

ಹಸಿರು ಕಳಕಳಿ: ರಾಜಧಾನಿಯಲ್ಲಿ ಮೊಳಗಿದ ಕಹಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಕು ಹರಿದು ಬಿಸಿಲು ಏರುವ ಮುನ್ನವೇ ನಗರದ ಉದ್ಯಾನಗಳಲ್ಲಿ ಚಟುವಟಿಕೆಗಳು ಗರಿಗೆದರಿದ್ದವು. ಸರತಿ ಸಾಲಿನಲ್ಲಿ ನಿಂತಿದ್ದ ಜನ, ಸಸಿಗಳನ್ನು ಪಡೆದು ಹೊಸ ಹುಮ್ಮಸ್ಸಿನೊಂದಿಗೆ ಹೆಜ್ಜೆ ಹಾಕಿದರು. ಗಿಡಗಳನ್ನು ನೆಟ್ಟು ಸಂಭ್ರಮಪಟ್ಟರು.

ವಿಶ್ವ ಪರಿಸರ ದಿನವಾದ ಭಾನುವಾರ ನಗರದ ಪ್ರಮುಖ ಉದ್ಯಾನಗಳಲ್ಲಿ ಕಂಡುಬಂದ ದೃಶ್ಯಗಳಿವು. ವಿವಿಧ ಸಂಘ–ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಹಸಿರು ಕಾಳಜಿ ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಿದವು. ಕೆಲವರು ಬೈಸಿಕಲ್ ಜಾಥಾ, ಕಾಲ್ನಡಿಗೆ ಜಾಥಾಗಳ ಮೂಲಕ ಗಿಡ-ಮರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಿದರು. ನಗರದ ವಿವಿಧೆಡೆ ನಡೆದ ಕಾರ್ಯಕ್ರಮಗಳಲ್ಲಿ ಪರಿಸರ ತಜ್ಞರು ಪ್ರಕೃತಿಯ ಮಹತ್ವ ಸಾರಿ, ನಗರದ ಸದ್ಯದ ಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಬಿಬಿಎಂಪಿ ಹಮ್ಮಿಕೊಂಡಿದ್ದ ಉಚಿತ ಗಿಡ ವಿತರಣಾ ಕಾರ್ಯಕ್ರಮಕ್ಕೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಚಾಲನೆ ನೀಡಿದರು. ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ಗಿಡಗಳನ್ನು ನೆಟ್ಟರು.

ಜೆ.ಪಿ. ನಗರ 9ನೇ ಹಂತದ ರಾಯಲ್ ಪಾರ್ಕ್ ರೆಸಿಡೆನ್ಸಿ ಬಡಾವಣೆಯಲ್ಲಿ ಹಿರಿಯ ನಾಗರಿಕರು ಗಿಡ ನೆಡುವ ಮೂಲಕ ಪರಿಸರ ದಿನ ಆಚರಿಸಿದರು. ಸ್ಥಳೀಯ ಹಿತರಕ್ಷಣಾ ವೇದಿಕೆ ವತಿಯಿಂದ ಸೂರ್ಯಸಿಟಿ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. 'ಪರಿಸರಸ್ನೇಹಿ ವಸ್ತುಗಳನ್ನೇ ಬಳಸುತ್ತೇವೆ' ಎಂಬ ಪ್ರತಿಜ್ಞೆ ಕೈಗೊಳ್ಳಲಾಯಿತು.

ಕೆಂಪೇಗೌಡ ಪರಿಸರ ಸಂರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ಚಿಂತನ–ಮಂಥನ ಸಭೆಯನ್ನು ಪರಿಸರವಾದಿ ಹಾಗೂ ಚಿತ್ರನಟ ಸುರೇಶ್ ಹೆಬ್ಳೀಕರ್ ಉದ್ಘಾಟಿಸಿದರು. ಸಂಶೋಧಕ ತಲಕಾಡು ಚಿಕ್ಕರಂಗೇಗೌಡ ಮತ್ತು ಮಳೆ ನೀರು ಸಂರಕ್ಷಣೆ ತಜ್ಞ ಎಸ್. ವಿಶ್ವನಾಥ್ ವಿಚಾರ ಮಂಡಿಸಿದರು. ಕೃಷಿ ವಿಜ್ಞಾನಿಗಳಾದ ಕೆ.ಪಿ. ಚಿನ್ನಸ್ವಾಮಿ, ಕೆ.ಟಿ. ವಿಜಯಕುಮಾರ್, ವೃಕ್ಷ ತಜ್ಞ ಸಂತೆ ನಾರಾಯಣಸ್ವಾಮಿ, ಪರಿಸರ ತಜ್ಞ ರಾಜೇಶ್ ಗೋಪಾಲ್ ಅವರು ಕೆರೆಗಳು ಮತ್ತು ಪರಿಸರದ ಸ್ಥಿತಿಗತಿಯ ಬಗ್ಗೆ ವಿವರಿಸಿದರು.

ದಯಾನಂದ ಸಾಗರ್ ಪದವಿ ಪೂರ್ವ ಕಾಲೇಜು 'ಇರುವುದೊಂದೇ ಭೂಮಿ' ಪರಿಕಲ್ಪನೆಯಡಿ ರಂಗೋಲಿ ಸ್ಪರ್ಧೆ ನಡೆಸಿತು. ಕಾರ್ಯಕ್ರಮಕ್ಕೆ ಚಿತ್ರನಟ ಪ್ರೇಮ್ ಚಾಲನೆ ನೀಡಿ, ಗಿಡಗಳನ್ನು ವಿತರಿಸಿದರು.

ರಾಗಿಕಣ ಸಂತೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವೃಕ್ಷಗಳ ವಿವೇಕ ಗಾಥೆಗಳು..!' ಎಂಬ ಶೀರ್ಷಿಕೆಯಡಿ ಸಂವಾದ ನಡೆಯಿತು. ದಿ ಗ್ರೀನ್ ಪಾತ್ ಸಂಸ್ಥೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮುದ್ರಾ ನೃತ್ಯಶಾಲೆ ಕಲಾವಿದರು ಪರಿಸರ ಜಾಗೃತಿಯ ಬಗ್ಗೆ ನೃತ್ಯ ಪ್ರದರ್ಶಿಸಿದರು.

ಕರ್ನಾಟಕ ರೈತರ ಜಾಗೃತಿ ವೇದಿಕೆಯಿಂದ ಪರಿಸರ ಉತ್ಸವ ಆಚರಿಸಲಾಯಿತು. ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ವಿವಿಧ ಪ್ರಭೇದದ 2,500 ಗಿಡಗಳನ್ನು ನೆಡಲಾಯಿತು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ಗಿಡಗಳನ್ನು ನೆಟ್ಟರು.

'ಈ ವರ್ಷ ಶಿಕ್ಷಕರ ಕೊರತೆಯಿಲ್ಲ'

'ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ಸೇವೆ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಶಾಲೆ ಆರಂಭದ ದಿನಗಳಲ್ಲೇ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಹೀಗಾಗಿ, ಈ ವರ್ಷ ಶಿಕ್ಷಕರ ಕೊರತೆ ಎದುರಾಗುವುದಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನ ನಗರದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು.

'ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ-2020' (ಎನ್ಇಪಿ) ಅನುಷ್ಠಾನಗೊಳಿಸಲಾಗುತ್ತದೆ. ರಾಜ್ಯದಲ್ಲಿ ಎನ್ಇಪಿ ಅನುಷ್ಠಾನಕ್ಕಾಗಿ ಪೊಸಿಷನ್ ಪೇಪರ್‌ಗಳನ್ನು ಸಿದ್ಧಪಡಿಸಿ, ಕೇಂದ್ರ ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿದೆ' ಎಂದರು. 'ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 7 ಸಾವಿರ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಶಿಥಿಲಗೊಂಡಿರುವ ಕೊಠಡಿಗಳನ್ನು ಆದ್ಯತೆ ಮೇರೆಗೆ ರಿಪೇರಿ, ಮರು ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. 15 ಸಾವಿರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಪ್ರಕ್ರಿಯೆ ಚಾಲ್ತಿಯಲ್ಲಿದೆ. ನೇಮಕಾತಿ ಪರೀಕ್ಷೆ ಮುಗಿದು, ಈಗಾಗಲೇ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಅ. ದೇವೇಗೌಡ ಹಾಗೂ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಇದ್ದರು.

ವಿ.ಸೋಮಣ್ಣ ಪ್ರತಿಷ್ಠಾನ ಆಯೋಜಿಸಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ಎನ್.ಡಿ. ಮೋನಿಷ್ ಗೌಡ ಅವರಿಗೆ ಬಿ.ಸಿ. ನಾಗೇಶ್ ಅವರು ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು. ಸಚಿವ ವಿ. ಸೋಮಣ್ಣ ಇದ್ದಾರೆ.

ಕೆಎಸ್ಆರ್‌ಟಿಸಿ: 4,500 ಸಸಿ ನೆಡಲು ತೀರ್ಮಾನ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್ಆರ್‌ಟಿಸಿ) ಕೇಂದ್ರ ಕಚೇರಿಯ ಆಶ್ರಯದಲ್ಲಿ ಭಾನುವಾರ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳು, ಘಟಕಗಳು, ಪ್ರಾದೇಶಿಕ ಕಾರ್ಯಾಗಾರ ಹಾಗೂ ತರಬೇತಿ ಕೇಂದ್ರಗಳಲ್ಲಿ ಪರಿಸರ ದಿನಾಚರಣೆ ನಡೆಯಿತು.

'ಮುಂದಿನ 4 ತಿಂಗಳ ಅವಧಿಯಲ್ಲಿ ಸಂಕಲ್ಪತರು ಫೌಂಡೇಶನ್ ಆಶ್ರಯದಲ್ಲಿ 4,500 ಸಸಿ ನೆಡಲು ಯೋಜನೆ ರೂಪಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು. 'ನಿಗಮದ 15 ವಿಭಾಗಗಳಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಅಂತರ್ಜಾಲ ಸೇವೆ ಒದಗಿಸಲಾಗಿದೆ. ಬಸ್ ನಿಲ್ದಾಣ, ಘಟಕ, ವಿಭಾಗೀಯ ಕಚೇರಿ ಹಾಗೂ ಕಾರ್ಯಾಗಾರಗಳಲ್ಲಿ ಸ್ವಚ್ಛತೆ ಕಾಪಾಡಲು ಬಯಲು ಮೂತ್ರ ವಿಸರ್ಜನೆ ನಿಷೇಧ ಜಾರಿಗೆ ತರಲಾಗಿದೆ. ಉಲ್ಲಂಘಿಸುವ ಪ್ರತಿ ವ್ಯಕ್ತಿಗೆ ₹ 100 ದಂಡ ವಿಧಿಸಲಾಗುತ್ತಿದೆ. 2021-22ನೇ ಸಾಲಿನಲ್ಲಿ ₹ 9.13 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಉಗುಳುವುದನ್ನು ನಿಷೇಧಿಸಲಾಗಿದ್ದು, ಉಲ್ಲಂಘಿಸಿದ ಪ್ರತಿ ವ್ಯಕ್ತಿಗೆ ₹ 100 ದಂಡ ವಿಧಿಸಿ, ₹ 4.22 ಲಕ್ಷ ದಂಡದ ಮೊತ್ತ ವಸೂಲಿ ಮಾಡಲಾಗಿದೆ ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಮುಖ್ಯ ಸಂಚಾರ ವ್ಯವಸ್ಥಾಪಕ (ವಾಣಿಜ್ಯ) ಕೆ.ಆರ್.ವಿಶ್ವನಾಥ್, ಉಪ ಮುಖ್ಯಯಾಂತ್ರಿಕ ಎಂಜಿನಿಯರ್ ಎಂ.ಅನಿಲ್ ಕುಮಾರ್, ಮಂಡಳಿ ಕಾರ್ಯದರ್ಶಿ ಡಾ.ಟಿ.ಎಸ್.ಲತಾ, ಎಚ್. ಗುರುರಾಜ್, ಅರ್ಜುನ್ ಹಾಜರಿದ್ದರು.

ಪರಿಸರದ ಮಹತ್ವ ಸಾರಿದ 'ಆಲ್ಟರ್ನೇಟಿವ್ 22'

ಆಯನ ಡಾನ್ಸ್ ಅಕಾಡೆಮಿ ಕಲಾವಿದರು 'ಪಂಚತತ್ವ' ಶೀರ್ಷಿಕೆಯಡಿ ನೃತ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಪ್ರಯುಕ್ತ ವಿಮೊವೆ ಫೌಂಡೇಷನ್ ನಗರದಲ್ಲಿ ಭಾನುವಾರ 'ಆಲ್ಟರ್ನೇಟಿವ್ 22' (ಪರ್ಯಾಯ) ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಿ, ತೆರೆಮರೆಯ ಸಾಧಕರನ್ನು ಗೌರವಿಸಲಾಯಿತು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು. ಪರಿಸರ ಸಂರಕ್ಷಣೆಗೆ ಶ್ರಮಿಸುತ್ತಿರುವ ನಗರದ ತೆರೆಮರೆಯ ಸಾಧಕರಾದ ಹರ್ಷಿತ್ ರೆಡ್ಡಿ, ರಕ್ಷಿತ್ ಪವಾರ್, ಎಡ್ವಿನ್ ಜೋಸೆಫ್ ಹಾಗೂ ನಾಗರಾಜ್ ಅವರನ್ನು ಗೌರವಿಸಿ, ಅವರ ಬಗೆಗಿನ 30 ನಿಮಿಷಗಳ ಸಾಕ್ಷ್ಯಚಿತ್ರ ಪ್ರದರ್ಶನ ಮಾಡಲಾಯಿತು. ಇವರು ಪ್ರಾಣಿ–ಪಕ್ಷಿಗಳ ಸಂರಕ್ಷಣೆ, ಪ್ಲಾಸ್ಟಿಕ್ ತ್ಯಾಜ್ಯಗಳ ಮರುಬಳಕೆ ಸೇರಿ ವಿವಿಧ ಕಾರ್ಯವನ್ನು ಕೈಗೊಂಡಿದ್ದಾರೆ.

ಯೂತ್ ಆಫ್ ಇಂಡಿಯಾ ಫೌಂಡೇಷನ್ ಮುಖ್ಯಸ್ಥ ಶೈಲೇಶ್ ಸಿಂಘಾಲ್ ಮತ್ತು 'ವಾಟರ್ ಗರ್ಲ್' ಎಂದು ಜನಪ್ರಿಯ ಆಗಿರುವ ಗರ್ವಿತಾ ಗುಲಾಟಿ ಅವರು ಪ್ರಕೃತಿಯ ಮಹತ್ವದ ಬಗ್ಗೆ ವಿವರಿಸಿ, 'ಪರಿಸರ ಸಂರಕ್ಷಣೆ ಕಾರ್ಯದಲ್ಲಿ ಯುವಜನರು ಕಾರ್ಯಪ್ರವೃತರಾಗಬೇಕು' ಎಂದು ಅವರು ಕರೆ ನೀಡಿದರು.

ಯುವಜನರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಸಾಕ್ಷ್ಯಚಿತ್ರವನ್ನು ವಿಮೊವೆ ಫೌಂಡೇಷನ್ ಹೊರತಂದಿದ್ದು, ಅದನ್ನು ಬಿಡುಗಡೆ ಮಾಡಲಾಯಿತು. ಆಯನ ಡಾನ್ಸ್ ಅಕಾಡೆಮಿಯಿಂದ 'ಪಂಚತತ್ವ' ಶೀರ್ಷಿಕೆಯಡಿ ನೃತ್ಯ ಪ್ರದರ್ಶನ ನಡೆಯಿತು. ಕಲಾವಿದರು ಅಗ್ನಿ, ಜಲ, ವಾಯು, ಪೃಥ್ವಿ ಹಾಗೂ ಆಕಾಶದ ಮಹತ್ವವನ್ನು ನೃತ್ಯದ ಮೂಲಕ ಪ್ರಸ್ತುತಪಡಿಸಿದರು.

ಪರಿಸರ ನಾಶದಿಂದ ಅಪಾಯ: ಇನ್ಫೊಸಿಸ್ ಸಂಸ್ಥೆಯ ಮಾಜಿ ನಿರ್ದೇಶಕ ವಿ.ಎ. ಶಾಸ್ತ್ರಿ, 'ಕೈಗಾರೀಕರಣ, ನಗರೀಕರಣದ ಹೆಸರಿನಲ್ಲಿ ಪರಿಸರ ನಾಶಮಾಡಲಾಗುತ್ತಿದೆ. ಇದರಿಂದ ಜಾಗತಿಕ ತಾಪಮಾನ ಏರಿಕೆಯಂತಹ ಗಂಭೀರ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಆರೋಗ್ಯಯುತ ಜೀವನಕ್ಕೆ ಪರಿಸರ ಕಾಪಾಡುವುದು ಎಲ್ಲರ ಕರ್ತವ್ಯ' ಎಂದು ಹೇಳಿದರು.

ಫೌಂಡೇಷನ್‌ನ ಸಂಸ್ಥಾಪಕ ವಿನಯ್ ಶಿಂಧೆ, 'ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತಿದ್ದೇವೆ. ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಮಾಡಲಾಗುತ್ತಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ಇಡೀ ಜಗತ್ತು ಸಂಕಷ್ಟಕ್ಕೆ ಸಿಲುಕಿ, ನಲುಗಿ ಹೋಯಿತು. ನಮ್ಮ ಫೌಂಡೇಷನ್‌ನಿಂದ ಸಾವಿರಕ್ಕೂ ಅಧಿಕ ಕುಟುಂಬಗಳಿಗೆ ಪಡಿತರ ಕಿಟ್‌ಗಳನ್ನು ವಿತರಣೆ ಮಾಡಲಾಯಿತು' ಎಂದು ಅವರು ವಿವರಿಸಿದರು.

ಹವಾಮಾನ ಬದಲಾವಣೆ: ಮಾಧ್ಯಮ ಸಂವಹನ ಕಾರ್ಯಾಗಾರ

'ಸ್ಥಳೀಯ ಬೆಳವಣಿಗೆಯ ಅರಿವು ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆಗೆ ಸಂಬಂಧಿಸಿ ಸ್ಥಳೀಯ ಬೆಳವಣಿಗೆಗಳನ್ನು ಅಧ್ಯಯನ ಮಾಡಿ ಆಯಾ ವ್ಯವಸ್ಥೆಗೆ ಹಾಗೂ ಜನರಿಗೆ ಮನವರಿಕೆ ಮಾಡಬೇಕು ಎಂಬ ಅಭಿಪ್ರಾಯ ಭಾರತೀಯ ನಿರ್ವಹಣಾ ಸಂಸ್ಥೆ (ಐಐಎಂಬಿ)ಯಲ್ಲಿ ನಡೆದ ಕಾರ್ಯಾಗಾರದಲ್ಲಿ ತಜ್ಞರಿಂದ ವ್ಯಕ್ತವಾಯಿತು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಐಐಎಂಬಿ ಹಮ್ಮಿಕೊಂಡ 'ಹವಾಮಾನ ಬದಲಾವಣೆ ಮತ್ತು ಸಂವಹನ; ಸಮುದಾಯ, ಅಭಿಪ್ರಾಯ ರೂಪಿಸುವವರು ಮತ್ತು ಮಾಧ್ಯಮಗಳ ಪರಿಣಾಮಕಾರಿ ತೊಡಗಿಕೊಳ್ಳುವಿಕೆಗೆ ಜ್ಞಾನ ಮತ್ತು ಕೌಶಲಗಳನ್ನು ರೂಪಿಸುವ' ಕುರಿತ ಕಾರ್ಯಾಗಾರದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಐಐಎಂಬಿ ನಿರ್ದೇಶಕ ಡಾ.ಋಷಿಕೇಶ ಟಿ. ಕೃಷ್ಣನ್ ಮಾತನಾಡಿ, 'ಹವಾಮಾನ ಬದಲಾವಣೆ ಬಗ್ಗೆ ನಮ್ಮ ಪಠ್ಯಕ್ರಮ ಮತ್ತು ಮಾಧ್ಯಮಗಳಲ್ಲಿ ಪರಿಣಾಮಕಾರಿ ವರದಿಯ ಅಗತ್ಯವಿದೆ' ಎಂದರು. ಐಐಎಂಬಿ ಆವರಣದಲ್ಲಿ ಸುಸ್ಥಿರ ಪರಿಸರಕ್ಕಾಗಿ ಸುಮಾರು 30 ಸಾವಿರ ಗಿಡಗಳನ್ನು ಬೆಳೆಸಲಾಗಿದ್ದು, ಮಳೆನೀರು ಕೊಯ್ಲು ವ್ಯವಸ್ಥೆ ಅಳವಡಿಸಿ, ಸೋಲಾರ್ ವಿದ್ಯುತ್ ಬಳಕೆ ಮಾಡುತ್ತಿರುವುದಾಗಿ ವಿವರಿಸಿದರು.

ಐಐಎಂಬಿಯ ಡೀನ್ ಪ್ರೊ. ಚೇತನ್ ಸುಬ್ರಹ್ಮಣ್ಯನ್ ಮಾತನಾಡಿ, 'ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಸಾರ್ವಜನಿಕರಿಗೆ ಪ್ರಸ್ತುತಪಡಿಸುವಲ್ಲಿ ಮತ್ತು ಸ್ಥಳೀಯ ಸಮಸ್ಯೆಗಳನ್ನು ಎತ್ತಿ ತೋರಿಸುವಲ್ಲಿ ಮಾಧ್ಯಮದ ಪಾತ್ರ ದೊಡ್ಡದು' ಎಂದರು.

ಪ್ರೆಸ್ ಕ್ಲಬ್ ಅಧ್ಯಕ್ಷ ಸದಾಶಿವ ಶೆಣೈ ಮಾತನಾಡಿ, 'ಮಾಧ್ಯಮಗಳಲ್ಲಿ ಪರಿಸರ ವರದಿಗಳಿಗೆ ಆದ್ಯತೆ ಸಿಗುತ್ತಿಲ್ಲ. ಈ ವಿಭಾಗದಲ್ಲಿ ಪರಿಣತರ ಕೊರತೆಯಿದೆ. ಸರಳ ಮತ್ತು ಪರಿಣಾಮಕಾರಿ ಸಂವಹನದ ಮೂಲಕ ಒಂದಿಷ್ಟು ಬದಲಾವಣೆ ತರಲು ಸಾಧ್ಯ' ಎಂದರು.

ಸಂಸ್ಥೆಯ ಸುಸ್ಥಿರತೆ ಕಾರ್ಯಪಡೆಯ ಅಧ್ಯಕ್ಷೆ ಪ್ರೊ.ಹರಿತಾ ಸಾರಂಗ ಮಾತನಾಡಿದರು, 'ವರದಿ ಸ್ಥಳೀಯ ಮಾಧ್ಯಮದಲ್ಲಿ ಪ್ರಕಟವಾದರೂ ಅದನ್ನು ಮುಖ್ಯವಾಹಿನಿ ಮಾಧ್ಯಮ ಎತ್ತಿಕೊಂಡು ಪ್ರಕಟಿಸಿ ಸಂಬಂಧಪಟ್ಟವರ ಕಣ್ಣು ತೆರೆಸಲು ಸಾಧ್ಯ' ಎಂದರು.

ಮ್ಯಾನೇಜ್‌ಮೆಂಟ್ ಕಮ್ಯುನಿಕೇಷನ್ ವಿಭಾಗ ಮುಖ್ಯಸ್ಥೆ ಡಾ.ದೀಪ್ತಿ ಗಣಪತಿ ಮಾತನಾಡಿದರು. ಅನಿತಾ ಕಾರ್ಯಕ್ರಮ ನಿರೂಪಿಸಿದರು.

ಬೆಂಗಳೂರಿನ ಐಐಎಂಬಿಯಲ್ಲಿ ನಡೆದ ಹವಾಮಾನ ಬದಲಾವಣೆ ಸಂಬಂಧಿಸಿದ ಮಾಧ್ಯಮ ಕಾರ್ಯಾಗಾರದಲ್ಲಿ ಪ್ರೊ.ಹರಿತಾ ಸಾರಂಗ, ಪತ್ರಕರ್ತ ಸದಾಶಿವ ಶೆಣೈ, ಪ್ರೊ.ಹೃಷಿಕೇಶ ಟಿ. ಕೃಷ್ಣನ್, ಪ್ರೊ.ಚೇತನ್ ಸುಬ್ರಹ್ಮಣ್ಯನ್, ಡಾ.ದೀಪ್ತಿ ಗಣಪತಿ ಇದ್ದರು

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಮೆಚ್ಚುಗೆ

'ಸಂಸ್ಕೃತದಿಂದ ಕನ್ನಡ ಬೆಳೆಸಿದ ಮಲ್ಲೇಪುರಂ'

ಬೆಂಗಳೂರು: 'ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿನ ಕೃತಿಗಳನ್ನು ಕನ್ನಡಕ್ಕೆ ತರುವ ಮೂಲಕ ಮಲ್ಲೇಪುರಂ ಜಿ. ವೆಂಕಟೇಶ ಅವರು ನಮ್ಮ ತಿಳಿವಳಿಕೆ ವಿಸ್ತರಿಸಿದ್ದಾರೆ. ಅವರು ಇಲ್ಲದಿದ್ದರೆ ಕನ್ನಡ ಭಾಷೆ ಬಡವಾಗುತ್ತಿತ್ತು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿನಂದನಾ ಸಮಿತಿ ನಗರದಲ್ಲಿ ಭಾನುವಾರ ಆಯೋಜಿಸಿದ 'ಪ್ರೊ. ಮಲ್ಲೇಪುರಂ 70ರ ಅಭಿನಂದನೆ' ಕಾರ್ಯಕ್ರಮದಲ್ಲಿ ಸಂಪಾದಿತ ಕೃತಿ 'ಸಮಾಹಿತ' ಮತ್ತು 'ಸಪ್ತತಿ' ಬಿಡುಗಡೆಮಾಡಿದರು.

'ಬೆಂಗಳೂರಿನಲ್ಲಿ ಅಧ್ಯಾಪಕನಾಗಿದ್ದಾಗ ಮಲ್ಲೇಪುರಂ, ಡಿ.ಆರ್. ನಾಗರಾಜ್ ಮತ್ತು ಸಿದ್ಧಲಿಂಗಯ್ಯ ಅವರು ನನ್ನನ್ನು ಕಾಡಿಸಿದ್ದರು. ಇವರು ಕಿಡಿಗೇಡಿಗಳು ಮತ್ತು ಬುದ್ಧಿವಂತರಾಗಿದ್ದರು. ಮಲ್ಲೇಪುರಂ ಅವರು ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಸಾಧಿಸಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದರು. ಶಿಷ್ಯನಾಗಿದ್ದ ಮಲ್ಲೇಪುರಂ ನಾಟಕ, ಸಂಸ್ಕೃತ ಮತ್ತು ಶಾಸ್ತ್ರದ ವಿಚಾರದಲ್ಲಿ ಗುರುವಾಗಿದ್ದ' ಎಂದು ಹೇಳಿದರು.

ಆಧ್ಯಾತ್ಮಿಕ ಚಿಂತಕಿ ವೀಣಾ ಬನ್ನಂಜೆ, 'ನನ್ನ ಬದುಕಿನ ಅತ್ಯಂತ ಕಠೋರ ಪರಿಸ್ಥಿತಿಗಳಲ್ಲಿ ಮಲ್ಲೇಪುರಂ ಅವರು ಬೆನ್ನಿಗೆ ನಿಂತಿದ್ದರು. ಎಡ-ಬಲ, ಧರ್ಮ, ಮಠ ಸೇರಿದಂತೆ ವಿವಿಧ ಚರ್ಚೆಗಳು ಮುನ್ನೆಲೆಗೆ ಬಂದಾಗಲೂ ಅವರು ಸರಿ–ತಪ್ಪು ಎಂದು ಹೇಳಿದವರಲ್ಲ. ಒಬ್ಬ ಮಹಾನುಭಾವ ಕೃತಿಯನ್ನು ಅರ್ಪಿಸಿಕೊಳ್ಳುವುದರಿಂದ ಬೆಳೆಯುತ್ತಾನೆ ಎನ್ನುವುದನ್ನು ಮಲ್ಲೇಪುರಂ ತೋರಿಸಿಕೊಟ್ಟಿದ್ದಾರೆ' ಎಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ಮಲ್ಲೇಪುರಂ ಅವರು ಕನ್ನಡದ ಆಸ್ತಿ. ಅತ್ಯಂತ ಕ್ಲಿಷ್ಟವಾದ ವಿಚಾರವನ್ನೂ ಸರಳವಾಗಿ ಹೇಳುವ ಶಕ್ತಿ ಅವರಿಗಿದೆ. ಅಜಾತಶತ್ರು ಆಗಿರುವ ಅವರು, ಧ್ಯಾನಸ್ಥರಾಗಿ ಬೆಳೆದಿದ್ದಾರೆ' ಎಂದು ಹೇಳಿದರು.

ಒಳಗಣ್ಣನ್ನು ತೆರೆದು ನೋಡಲು ಸಂಗೀತ, ಕಲೆ, ಸಾಹಿತ್ಯ, ಶಾಸ್ತ್ರಗಳು ಬೇಕಾಗುತ್ತವೆ. ಅನೇಕ ಗುರುಗಳು, ಸಜ್ಜನರು ಒಳಗಣ್ಣನ್ನು ತೆರೆಯಲು ನೆರವಾದರು

ಮಲ್ಲೇಪುರಂ ಜಿ. ವೆಂಕಟೇಶ ಬಹುಭಾಷಾ ವಿದ್ವಾಂಸ

ಮಲ್ಲೇಪುರಂ ಅವರಿಗೆ ಅಧ್ಯಯನದಿಂದ ಸಾಧನೆ ಮಾಡಲು ಸಾಧ್ಯವಾಯಿತು. ಅಜಾತಶತ್ರು ಆಗಿರುವ ಅವರು, ಜ್ಞಾನದಲ್ಲಿ ಶ್ರೀಮಂತರಾಗಿದ್ದಾರೆ.

ಸಿದ್ಧಲಿಂಗ ಸ್ವಾಮೀಜಿ, ಸಿದ್ಧಗಂಗಾಮಠ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ದಂಪತಿಯನ್ನು ಸಿದ್ಧಲಿಂಗ ಸ್ವಾಮೀಜಿ ಅಭಿನಂದಿಸಿದರು. ವೀಣಾ ಬನ್ನಂಜೆ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ಪಿ.ವಿ. ಕೃಷ್ಣ ಭಟ್ಟ ಹಾಗೂ ಚಂದ್ರಶೇಖರ ಕಂಬಾರ ಇದ್ದಾರೆ —ಪ್ರಜಾವಾಣಿ ಚಿತ್ರ

'ಸಂಸ್ಕೃತ ವಿ.ವಿಗೆ ಹೊಸ ರೂಪ'

'ಮಲ್ಲೇಪುರಂ ಅವರು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹೊಸ ರೂಪ ನೀಡಿದರು. ಇತ್ತೀಚಿನ ವರ್ಷಗಳಲ್ಲಿ ಕುಲಪತಿ ಹುದ್ದೆಗೆ ಅರ್ಹತೆ ಇರುವವರು ಬರುವುದು ಕಡಿಮೆ. ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಹೊಂದಿರುವ ಅವರು, ಸಂಸ್ಕೃತದ ಜ್ಞಾನ ಸಂಪತ್ತು ಸಾಮಾನ್ಯರಿಗೂ ಅರ್ಥವಾಗಲು ಕನ್ನಡಕ್ಕೆ ತಂದಿದ್ದಾರೆ' ಎಂದು ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಪ್ರೊ.ಪಿ.ವಿ. ಕೃಷ್ಣ ಭಟ್ಟ ಅವರು ತಿಳಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಮಾತನಾಡಿ, 'ಕರ್ನಾಟಕದಲ್ಲಿ ವಿರೋಧದ ನಡುವೆಯೂ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಅದು ಸದೃಢವಾಗಿ ಬೆಳೆಯಲು ಮಲ್ಲೇಪುರಂ ಕಾರಣ. ಸಂಸ್ಕೃತದಲ್ಲಿನ ಸಂಸ್ಕೃತಿಯನ್ನು ಕನ್ನಡಿಗರಿಗೆ ಸರಳ ಭಾಷೆಯಲ್ಲಿ ಕಲಿಸಿದ್ದಾರೆ' ಎಂದು ಹೇಳಿದರು.

ಚಿತ್ರಾವಳಿ

ಕರ್ನಾಟಕ ರೈತರ ಜಾಗೃತಿ ವೇದಿಕೆ ಹಾಗೂ ಕ್ರೆಡಾಯ್ ಸಂಸ್ಥೆಯ ವತಿಯಿಂದ ಯಲಹಂಕ ಸಮೀಪದ ಹೊನ್ನೇನಹಳ್ಳಿಯ ಕೆರೆಯ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಎಸ್.ಆರ್. ವಿಶ್ವನಾಥ್ ಸಸಿ ನೆಟ್ಟರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಟಿ. ಮುನಿರೆಡ್ಡಿ, ಕ್ರೆಡಾಯ್ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಭಾಸ್ಕರ್ ಟಿ. ನಾಗೇಂದ್ರಪ್ಪ, ಇತರರು ಇದ್ದರು.



ಕೊಂಕಣಿ ಕ್ಯಾಥೋಲಿಕ್ ಸಂಘಟನೆಗಳ ಒಕ್ಕೂಟವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳು ಮತ್ತು ಶಾಂತಿ ಕಾರ್ಯಕರ್ತ ಫಾದರ್ ಸೆಡ್ರಿಕ್ ಪ್ರಕಾಶ್ ಎಸ್.ಜೆ. ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ್‌ಗೌಡ ಅವರು ಸೇಂಟ್ ಜೋಸೆಫ್ ಹೈಸ್ಕೂಲ್ ಸಭಾಂಗಣದಲ್ಲಿ ಭಾನುವಾರ ಪ್ರದಾನ ಮಾಡಿದರು. ಕರ್ನಾಟಕ ಆಂಟಿ ಗ್ರಾಫ್ಟ್ ಮತ್ತು ಪರಿಸರ ವೇದಿಕೆಯ ಅಧ್ಯಕ್ಷ ಅಬ್ರಹಾಂ ಟಿ.ಜೆ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ, ಧರ್ಮಗುರು ರಾಬರ್ಟ್ ಮೈಕಲ್ ಮಿರಂ, ಸಿಲ್ವಿಯಾನ್ ನೊರೊನ್ಹಾ, ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಾನ್ ಕೆನಡಿ, ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಇದ್ದರು ಪ್ರಜಾವಾಣಿ ಚಿತ್ರ

ಮಳೆ: ಗುಡುಗು–ಸಿಡಿಲಿನ ಅಬ್ಬರ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಬಿಡುವು ಕೊಡುತ್ತಲೇ ಮಳೆ ಸುರಿಯುತ್ತಿದ್ದು, ಭಾನುವಾರ ರಾತ್ರಿಯೂ ಹಲವೆಡೆ ಮಳೆ ಆಯಿತು.

ಭಾನುವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಹಲವು ಪ್ರದೇಶಗಳಲ್ಲಿ ಬಿಸಿಲು ಹೆಚ್ಚಿತ್ತು. ಮಧ್ಯಾಹ್ನದ ನಂತರ ಕೆಲವೆಡೆ ಮೋಡ ಕವಿದ ವಾತಾವರಣ ಇತ್ತು. ಸಂಜೆ ತುಂತುರು ಮಳೆ ಆರಂಭವಾಗಿ, ನಂತರ ಜೋರಾಗಿಯಿತು. ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಆರ್.ಟಿ.ನಗರ, ಗಾಂಧಿನಗರ, ಮೆಜೆಸ್ಟಿಕ್, ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕೋರಮಂಗಲ, ಮಡಿವಾಳ, ಎಚ್ಎಸ್ಆರ್ ಲೇಔಟ್ ಹಾಗೂ ಸುತ್ತಮುತ್ತ ಮಳೆ ಆಯಿತು.

ಎಂ.ಜಿ.ರಸ್ತೆ, ಅಶೋಕನಗರ, ಶಿವಾಜಿನಗರ, ಹಲಸೂರು, ಇಂದಿರಾನಗರ, ಹೆಣ್ಣೂರು, ಬಾಣಸವಾಡಿ ಪ್ರದೇಶಗಳಲ್ಲೂ ಮಳೆ ಇತ್ತು.

'ನಗರದಲ್ಲಿ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಕೆಲ ರಸ್ತೆಗಳಲ್ಲಿ ರಾತ್ರಿ ನೀರು ಧಾರಾಕಾರವಾಗಿ ಹರಿಯಿತು. ಸಿಬ್ಬಂದಿ ಸ್ಥಳಕ್ಕೆ ಹೋಗಿ ನೀರು ತೆರವು ಮಾಡಿದರು. ಉಳಿದಂತೆ, ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ಹಾಡು ಹಿಡಿದ ಜಾಡು' ಆತ್ಮಕಥೆ ಬಿಡುಗಡೆಗೊಳಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಗಾಯಕ ವೈಕೆಎಂಗೆ ಅಭಿಮಾನಿಗಳ ಆತ್ಮೀಯ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಯಕ ವೈ.ಕೆ. ಮುದ್ದುಕೃಷ್ಣ ಅವರಿಗೆ ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಅವರ ಅಭಿಮಾನಿಗಳು, ಶಿಷ್ಯರು ಹಾಗೂ ಗಾಯಕರು ಆತ್ಮೀಯವಾಗಿ ಸನ್ಮಾನಿಸಿದರು. ವೈ.ಕೆ.ಎಂ ಬಗ್ಗೆ ಅಭಿಮಾನ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಾಹಿತಿಗಳೂ ಸಾಕ್ಷಿಯಾದರು

ಸುಗಮ ಸಂಗೀತ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಮಾತನಾಡಿ, 'ವೈಕೆಎಂ ಅವರು ಉನ್ನತಾಧಿಕಾರಿಯಾಗಿದ್ದರೂ ವೃಕ್ಷ ವ್ಯಕ್ತಿತ್ವದವರು. ಸುಗಮ ಸಂಗೀತ ಕ್ಷೇತ್ರಕ್ಕೆ ಬಲವಾದ ಹಾಗೂ ಖಚಿತವಾದ ದಾರಿ ತೋರಿದವರು. ವೈಕೆಎಂ ಜನಮುಖಿ ಬದುಕು ಬಹಳ ಮುಖ್ಯ' ಎಂದು ಪ್ರತಿಪಾದಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ದೇಶದಲ್ಲಿ ಅಭಿಪ್ರಾಯ ಮಂಡನೆಗೆ ಸ್ವಾತಂತ್ರ್ಯವಿದೆ. ಹೊರ ಪ್ರಯಾಣಕ್ಕಿಂತ ಒಳಪ್ರಯಾಣ ಬಹಳ ಮುಖ್ಯ. ಸಾಮಾಜಿಕ ಜವಾಬ್ದಾರಿಯಿಂದ ಬದುಕಬೇಕು. ಮಾನವೀಯ ಗುಣವುಳ್ಳವರಾಗಿದ್ದರೆ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ' ಎಂದು ಹೇಳಿದರು.

'ಪ್ರತಿ ವ್ಯಕ್ತಿಗೂ ಒಂದು ದಾರಿಯಿರುತ್ತದೆ. ಈ ದಾರಿಯಲ್ಲಿ ಪರಿಪೂರ್ಣತೆಯಿಂದ ಬದುಕಬೇಕಿದೆ. ಮಕ್ಕಳಲ್ಲಿ ಮುಗ್ಧತೆ ಹಾಗೂ ಕುತೂಹಲ ಇರಲಿದೆ. ದೊಡ್ಡವಾರದ ಮೇಲೆಯೂ ಅದು ಉಳಿಯಲಿ. ಆತ್ಮಸಾಕ್ಷಿಗೆ ಅನುಗುಣವಾಗಿ ಜೀವಿಸೋಣ' ಎಂದು ಮುಖ್ಯಮಂತ್ರಿ ಕರೆ ನೀಡಿದರು.

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಹಂಪ ನಾಗರಾಜಯ್ಯ ಮಾತನಾಡಿ, 'ಜೀವನದ ಅಂತಃಕರಣಕ್ಕೆ ದಾರಿ ತೋರುವವರು ಸಂಗೀತಗಾರರು. ವೈಕೆಎಂ ಸಂಗೀತದ ಜೊತೆಗೆ ಹಲವು ಕ್ಷೇತ್ರದಲ್ಲಿ ವಿಜೃಂಭಿಸಿದವರು. ಹಾಡಿನ ಮೂಲಕ ಮನಸ್ಸಿಗೆ ಸ್ಫೂರ್ತಿ ತುಂಬಿದವರು' ಎಂದು ಹೇಳಿದರು.

ಆತ್ಮಕಥೆಯ ಸಂಪಾದಕ ಡಾ.ನಾ.ದಾಮೋದರ ಮಾತನಾಡಿ, 'ವೈಕೆಎಂ ಅವರು ನಿವೃತ್ತರಾದ ಮೇಲೂ ಜನಪರವಾದ ಕೆಲಸ ಮಾಡುತ್ತಿದ್ದಾರೆ. 80ನೇ ವರ್ಷಕ್ಕೆ ದೊಡ್ಡ ಕಾರ್ಯಕ್ರಮ ಮತ್ತೊಂದು ಕೃತಿ ಹೊರ ತರಲಾಗುವುದು' ಎಂದು ನುಡಿದರು.

'ಹಾಡು ಹಿಡಿದ ಜಾಡು' ಆತ್ಮಕಥೆಯನ್ನು ಮುಖ್ಯಮಂತ್ರಿ ಬಿಡುಗಡೆ ಮಾಡಿದರು. ಕೃಷಿಕ್ ಸರ್ವೋದಯ ಫೌಂಡೇಶನ್ ಅಧ್ಯಕ್ಷ ವೈ.ಕೆ. ಪುಟ್ಟಸೋಮೇಗೌಡ, ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಕಿಕ್ಕೇರಿ ಕೃಷ್ಣಮೂರ್ತಿ, ನಗರ ಶ್ರೀನಿವಾಸ್ ಉಡುಪ ಹಾಜರಿದ್ದರು. ಎನ್.ಅಪರ್ಣಾ ಹಾಗೂ ಹರೀಶ್ ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಆಯೋಜಿಸಿದ್ದ ವೈಕೆಎಂ 75 ಸಂಭ್ರಮಾಚರಣೆ ಹಾಗೂ ಆತ್ಮಕಥೆ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೈ.ಕೆ.ಮುದ್ದುಕೃಷ್ಣ ಅವರನ್ನು ಸನ್ಮಾನಿಸಿದರು. ನಾಗರಾಜ್ ಮೂರ್ತಿ, ಕೃಷಿಕ್ ಸರ್ವೋದಯ ಫೌಂಡೇಶನ್ ಅಧ್ಯಕ್ಷ ವೈ.ಕೆ. ಪುಟ್ಟಸ್ವಾಮಿಗೌಡ, ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಸಾಹಿತಿ ಹಂಪ ನಾಗರಾಜಯ್ಯ, ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಕಿಕ್ಕೇರಿ ಕೃಷ್ಣಮೂರ್ತಿ, ಶ್ರೀನಿವಾಸ್ ಜಿ. ಕಪ್ಪಣ್ಣ ಮತ್ತು ನಗರ ಶ್ರೀನಿವಾಸ ಉಡುಪ ಇದ್ದರು ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: ಹಾಡು ಹಿಡಿದ ಜಾಡು
ಸಂಪಾದಕ: ಡಾ.ನಾ. ದಾಮೋದರ್
ನಿರೂಪಕರು: ಶಮಾ ನಂದಿಬೆಟ್ಟ
ಪ್ರಕಾಶನ: ಸಪ್ನಾ ಬುಕ್ ಹೌಸ್
ಪುಟಗಳು: 312
ಬೆಲೆ: ₹ 375

ನಗರದ ಸಂಜಯನಗರ ಕೆಇಬಿ ಲೇಔಟ್ ಪಾರ್ಕ್‌ನಲ್ಲಿ ಭಾನುವಾರ ವಿಶ್ವ ಪರಿಸರ ದಿನಾಚರಣೆ ಹಾಗೂ ಮಣ್ಣು ಉಳಿಸಿ ಅಭಿಯಾನದ ಅಂಗವಾಗಿ ಶಾಸಕ ಬೈರತಿ ಸುರೇಶ್ ಸಸಿ ನೆಟ್ಟರು. ಕಾಂಗ್ರೆಸ್ ಮುಖಂಡರಾದ ರಾಘವೇಂದ್ರ ಎಂ. ಗೌಡ, ವೆಂಕಟೇಶ್, ಮತ್ತಿತರರು ಇದ್ದರು

ಶ್ರೀ ಬಂಡೇಶ್ವರ ಎಜುಕೇಶನ್ ಸೊಸೈಟಿ ವತಿಯಿಂದ ಏಕದಳ ಬಿಲ್ವ ಬಂಡೇಮಠ ಶ್ರೀ ಕ್ಷೇತ್ರ ಆವರಣದಲ್ಲಿ ನಿರ್ಮಿಸಲಾಗಿರುವ ಶಾಲೆ, ಕಾಲೇಜು ಹಾಗೂ ಕ್ರೀಡಾಂಗಣವನ್ನು ಭಾನುವಾರ ಉದ್ಘಾಟಿಸಲಾಯಿತು. ಬಂಡೆ ಮಠದ ಶ್ರೀಗಳಾದ ಶ್ರೀ ಸಚ್ಚಿದಾನಂದ ಸ್ವಾಮಿ, ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ನೊಣವಿನಕೆರೆ ಕಾಡು ಸಿದ್ಧೇಶ್ವರ ಮಠದ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಹಾಗೂ ವಿವಿಧ ಮಠಗಳ ಮಠಾಧೀಶರು ಇದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ ವಿವಾದ: ಮುಗಿಯದ ಗೊಂದಲ • ಈಗ ಚಿತ್ರ ತೆಗೆದಿದ್ದಕ್ಕೆ ತಕರಾರು

ಕುವೆಂಪು, ಹುಯಿಲಗೋಳ ಚಿತ್ರವೂ ಮಾಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 7ನೇ ತರಗತಿ ಸಮಾಜ ವಿಜ್ಞಾನ ಭಾಗ-2 ಪಠ್ಯಪುಸ್ತಕದ 'ಕರ್ನಾಟಕ ಏಕೀಕರಣ ಮತ್ತು ಗಡಿ ವಿವಾದಗಳು' ಪಾಠದಲ್ಲಿ ಅಳವಡಿಸಿದ್ದ ಕುವೆಂಪು ಅವರ ಚಿತ್ರವನ್ನು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ತೆಗೆದು ಹಾಕಿದೆ.

ಅಲ್ಲದೆ, ಕುವೆಂಪು ಚಿತ್ರದ ಜೊತೆಗಿದ್ದ ಆಲೂರು ವೆಂಕಟರಾಯರು ಮತ್ತು ಹುಯಿಲಗೋಳ ನಾರಾಯಣರಾಯರ ಚಿತ್ರಗಳಲ್ಲಿ ಹುಯಿಲಗೋಳ ಅವರ ಚಿತ್ರವನ್ನು ತೆಗೆದು ಗೋವಿಂದ ಪೈ ಚಿತ್ರವನ್ನು ಸಮಿತಿ ಅಳವಡಿಸಿದೆ.

ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಈ ಹಿಂದಿನ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಳವಡಿಸಿದ್ದ ಪಾಠದಲ್ಲಿ ಕುವೆಂಪು ಮತ್ತು ಹುಯಿಲಗೋಳ ಅವರ ಚಿತ್ರಗಳಿದ್ದವು.

6ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿ 'ನಮ್ಮ ಕರ್ನಾಟಕ' ಪಾಠದ ಮೈಸೂರು ವಿಭಾಗದಲ್ಲಿ ಎರಡು ಸಾಲುಗಳಲ್ಲಿ ಎಂಟು ಜನ ವಿವಿಧ ಕ್ಷೇತ್ರಗಳ ಗಣ್ಯರ ಚಿತ್ರಗಳನ್ನು ಬರಗೂರು ನೇತೃತ್ವದ ಸಮಿತಿ ಅಳವಡಿಸಿತ್ತು. ಆದರೆ, ಹೊಸ ಸಮಿತಿ ಈ ಪಠ್ಯದಲ್ಲಿ 8 ಜನ ಸಾಧಕರ ಪಟ್ಟಿಯಿಂದ ದೇವನೂರ ಮಹಾದೇವ ಅವರ ಚಿತ್ರ ತೆಗೆದು, ವಿಜ್ಞಾನಿ ರಾಜಾರಾಮಣ್ಣ ಅವರ ಚಿತ್ರ ಸೇರಿಸಿದೆ. ಅವರು ತುಮಕೂರಿನವರಾಗಿದ್ದು, ಅವರ ಚಿತ್ರ ಬೆಂಗಳೂರು ವಿಭಾಗದಲ್ಲಿ ಬರಬೇಕಾಗಿತ್ತು. ಒಟ್ಟಾರೆ, ದಲಿತ ಮತ್ತು ಶೂದ್ರ ಲೇಖಕರ ಪಾಠಗಳನ್ನಷ್ಟೇ ಅಲ್ಲ, ಅವರ ಚಿತ್ರಗಳನ್ನೂ ತೆಗೆಯುವ ಮೂಲಕ ಒಂದೇ ವರ್ಗದ ಪಾಠ ಮತ್ತು ಚಿತ್ರಗಳನ್ನು ಹೊಸ ಸಮಿತಿ ಅಳವಡಿಸಿದೆ ಎಂಬ ವಿರೋಧ ವಿವಿಧ ಸಮುದಾಯಗಳಿಂದ ವ್ಯಕ್ತವಾಗಿದೆ.

ಬಸವಣ್ಣನ ಕುರಿತ ಪಠ್ಯ ಸರಿಪಡಿಸಲು ಲಿಂಗಾಯತ ಮಠಾಧೀಶರ, ಬಸವತತ್ವ ನಿಷ್ಠ ಸಾಹಿತಿಗಳ, ಉಪನ್ಯಾಸಕರ, ಶಿಕ್ಷಕರ ಸಭೆ ಕರೆಯಬೇಕು

ಬಸವ ಜಯ ಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠ

ಹಾಡು ಬರೆದವರ ಹೆಸರೇ ಬದಲು!

7ನೇ ತರಗತಿಯ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 'ಸಿರಿ ಕನ್ನಡ'ದಲ್ಲಿರುವ 'ಆಡಿಸಿ ನೋಡು ಬೀಳಿಸಿ ನೋಡು' ಪದ್ಯ ಬರೆದವರ ಹೆಸರನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ತಪ್ಪಾಗಿ ಪ್ರಕಟಿಸಿದೆ. ಅದನ್ನು ಬರೆದವರು ಆರ್.ಎನ್.ಜಯಗೋಪಾಲ್ ಎಂದು ತಿಳಿಸಿ ಕವಿ ಪರಿಚಯವನ್ನೂ ನೀಡಲಾಗಿದೆ. ಆದರೆ, ಇದನ್ನು ಬರೆದವರು ಗೀತ ರಚನಾಕಾರ ಚಿ.ಉದಯಶಂಕರ್!

ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆ ಸಮಿತಿ ಈ ಹಿಂದೆ ಪರಿಷ್ಕರಿಸಿದ್ದ ಪಠ್ಯದಲ್ಲಿ ಹಂಸಲೇಖ ಅವರ 'ಈ ಭೂಮಿ ಬಣ್ಣದ ಬುಗುರಿ' ಹಾಡನ್ನು ಪೂರಕ ಪಠ್ಯವಾಗಿ ನೀಡಿತ್ತು. ಅದರ ಬದಲಾಗಿ ಆರ್.ಎನ್. ಜಯಗೋಪಾಲ್ ಪಠ್ಯವನ್ನು ನೀಡಲು ಹೋಗಿ ಹೊಸ ಸಮಿತಿ ಎಡವಟ್ಟು ಮಾಡಿಕೊಂಡಿದೆ.

ಪರಿಶೀಲನೆಗೆ ಡಿಎಸ್ಇಆರ್‌ಟಿಗೆ ವಹಿಸಿ

ಹುಬ್ಬಳ್ಳಿ: 'ಪಠ್ಯಪುಸಕ್ತ ಪರಿಷ್ಕರಣೆ ಕುರಿತ ವಿವಾದವನ್ನು ಪರಿಹರಿಸಲು ರಾಜ್ಯ ಸರ್ಕಾರವು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ (ಡಿಎಸ್ಇಆರ್‌ಟಿ) ಸಮಿತಿ ರಚಿಸಿ, ಪಠ್ಯವನ್ನು ಪರಿಶೀಲನೆಗೆ ಒಳಪಡಿಸಬೇಕು' ಎಂದು ವಿಧಾನ ಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಸಲಹೆ ನೀಡಿದರು.

ಬಸವರಾಜ ಹೊರಟ್ಟಿ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡಿಎಸ್ಇಆರ್‌ಟಿನಲ್ಲಿ ವಿಷಯವಾರು ತಜ್ಞರಿದ್ದಾರೆ. ಅವರು ಈಗ ಆಗಿವೆ ಎನ್ನಲಾಗಿರುವ ತಪ್ಪುಗಳ ಕುರಿತು ಪರಿಶೀಲನೆ ನಡೆಸಬೇಕು. ಆಗ ವಿವಾದಕ್ಕೆ ತೆರೆ ಬೀಳುತ್ತದೆ' ಎಂದರು.

ಧ್ವನಿ ಎತ್ತದ ಸಾಹಿತಿ, ಬುದ್ಧಿಜೀವಿಗಳು ಫಲಾನುಭವಿಗಳೇ: ವಿಶ್ವನಾಥ್ ಪ್ರಶ್ನೆ

ಮೈಸೂರು: 'ಪರಿಷ್ಕೃತ ಪಠ್ಯವನ್ನೇ ಮುಂದುವರಿಸುವುದಾಗಿ ಸರ್ಕಾರ ಹೇಳಿದರೂ ರಾಜಕಾರಣಿಗಳು, ಸಾಹಿತಿಗಳು, ಬುದ್ಧಿಜೀವಿಗಳು ಏಕೆ ಧ್ವನಿ ಎತ್ತುತ್ತಿಲ್ಲ, ನೀವೆಲ್ಲಾ ಸರ್ಕಾರದ ಫಲಾನುಭವಿಗಳೇ' ಎಂದು ಮೇಲ್ಮನೆ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಪ್ರಶ್ನಿಸಿದರು.



ಎಚ್.ವಿಶ್ವನಾಥ್

ಭಾನುವಾರ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು, 'ಪ್ರಥಮ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪು ಎಲ್ಲಿ? ಅವರ ಬಗ್ಗೆ ಅವಹೇಳನ ಮಾಡುವ ನಾಯಿ–ನರಿಗಳೆಲ್ಲಿ?' ಎಂದು ಪ್ರಶ್ನಿಸಿದರು.

'ಪಠ್ಯದಲ್ಲಿ ಬಸವಣ್ಣನಿಗೆ ಅವಮಾನ ಮಾಡಲಾಗಿದೆ. ಬುದ್ಧನ ಪಾಠ ತೆಗೆದಿದ್ದಾರೆ. ಶಿಕ್ಷಣ, ಸಂಸ್ಕೃತಿ ಹಾಳಾದರೆ ದೇಶವೇ ನಾಶ ಆಗಲಿದೆ. ಪಠ್ಯ ಪರಿಷ್ಕರಣೆ ವಿಷಯದಲ್ಲಿ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ ಗೌರವ ತರುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅಕ್ಷರ ಸಂಸ್ಕೃತಿ, ಕನ್ನಡ ಸಾಹಿತ್ಯ ಯಾವ ದಿಕ್ಕಿನಲ್ಲಿ ಸಾಗುತ್ತಿದೆ? 'ಧಮ್ ಇದೆಯೇನೋ... ನಪುಂಸಕ...' ಪದಗಳ ಬಳಕೆಯಾಗುತ್ತಿದೆ. ಕನ್ನಡ ಭಾಷೆಯನ್ನು ರಾಜಕಾರಣಿಗಳು ಎಲ್ಲಿಗೆ ಕೊಂಡೊಯ್ಯುತ್ತಿದ್ದಾರೆ? ಎಂದು ಪ್ರಶ್ನಿಸಿದರು.

'ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿದಾಗ ಇದರ ವಿರುದ್ಧ ನಾನು ಹೋರಾಟ ಮಾಡಿದೆ. ಆದರೆ, ಅನೇಕ ಮಠಾಧೀಶರು ಇದರ ವಿರುದ್ಧ ಧ್ವನಿ ಎತ್ತಲೇ ಇಲ್ಲ. ಸರ್ಕಾರದ ಫಲಾನುಭವಿಗಳಾಗಿದ್ದರಿಂದಲೇ ಅವರು ಧ್ವನಿ ಎತ್ತಲಿಲ್ಲ' ಎಂದು ವಾಗ್ದಾಳಿ ನಡೆಸಿದರು.

ಪಠ್ಯ ಪರಿಷ್ಕರಣೆ: 'ವೀರಶೈವ ಜತೆ ಬಸವಣ್ಣ ಸಮೀಕರಣಕ್ಕೆ ಸಹಮತ'

ಬೆಂಗಳೂರು: 'ಒಂಬತ್ತನೇ ತರಗತಿಯ ಪರಿಷ್ಕೃತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಬಸವಣ್ಣನವರನ್ನು ವೀರಶೈವ ಧರ್ಮದೊಂದಿಗೆ ಸಮೀಕರಿಸಿರುವುದಕ್ಕೆ ನಮ್ಮ ಸಹಮತ ಇದೆ' ಎಂದು ಅಖಿಲ ಭಾರತ ವೀರಶೈವ ಶಿವಾಚಾರ್ಯರ ಸಂಸ್ಥೆ ತಿಳಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಸಂಸ್ಥೆಯ ಪರವಾಗಿ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು ಪತ್ರ ಬರೆದಿದ್ದಾರೆ.

'ಪರಿಷ್ಕೃತ ಪಠ್ಯದಲ್ಲಿ ಬಸವಣ್ಣನವರು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದರು ಎಂದಿದೆ. ಇಲ್ಲಿ 'ಅಭಿವೃದ್ಧಿ' ಶಬ್ದದ ಬದಲಾಗಿ, 'ಪ್ರಚಾರ ಮಾಡಿದರು' ಎನ್ನುವ ಶಬ್ದ ಇದ್ದಿದ್ದರೆ ಸರಿಯಾಗಿರುತ್ತಿತ್ತು' ಎಂದು ಪ್ರತಿಪಾದಿಸಿದ್ದಾರೆ.

'ಶೈವ ಗುರುಗಳ ಸಾನ್ನಿಧ್ಯದಲ್ಲಿ ಲಿಂಗ ದೀಕ್ಷೆ ಪಡೆದು ಧ್ಯಾನ ಸಾಧನೆ ಮಾಡಿದರು ಎನ್ನುವುದು ಅರ್ಧ ಸತ್ಯ. ವೀರಶೈವವನ್ನು ಮೊಟಕುಗೊಳಿಸಿ ಕೇವಲ ಶೈವ ಎಂದು ಪರಿಷ್ಕರಿಸಿರುವುದು ಇತಿಹಾಸ ಅಧ್ಯಯನ ಮಾಡದಿರುವುದನ್ನು ಶ್ರುತಪಡಿಸುತ್ತದೆ. ಇಲ್ಲಿ ಶೈವ ಗುರುಗಳು ಎಂಬುದಕ್ಕಿಂತ ಸಾರಂಗ ಮಠದ ಅಂದಿನ ಮಠಾಧಿಪತಿಯಾಗಿದ್ದ ಜಾತವೇದ ಮುನಿಗಳು ಬಸವಣ್ಣನವರಿಗೆ ಲಿಂಗ ದೀಕ್ಷೆ ಮಾಡಿದರು ಎನ್ನುವುದು ಇರಬೇಕಾಗಿತ್ತು' ಎಂದು ವಿವರಿಸಿದ್ದಾರೆ.

'ಬಸವಣ್ಣ ಬೋಧಿಸಿದ ತತ್ವವನ್ನು ಶಕ್ತಿ ವಿಶಿಷ್ಟಾದ್ವೈತ ಎನ್ನಲಾಗುತ್ತದೆ ಎಂದು ಉಲ್ಲೇಖಿಸಲಾಗಿದೆ. ದ್ವೈತ, ಅದ್ವೈತ, ಶಕ್ತಿ ವಿಶಿಷ್ಟಾದ್ವೈತದಂತಹ ಕ್ಲಿಷ್ಟ ಶಬ್ದ ಮತ್ತು ತತ್ವಗಳು 9ನೇ ತರಗತಿ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಗಳೇ ಸರಿ. ಅದಕ್ಕಿಂತ ಅವರು ತಮ್ಮ ವಚನಗಳ ಮೂಲಕ ಸಾರಿದ ಸಾಮಾಜಿಕ ಸಂದೇಶಗಳಿಗೆ ಸೀಮಿತವಾಗಿಸಿದ್ದರೆ ಸಾಕಿತ್ತು. ಬಸವಣ್ಣನವರು ಶಕ್ತಿ ವಿಶಿಷ್ಟಾದ್ವೈತವನ್ನು ಬೋಧಿಸಲಿಲ್ಲ. ಅದನ್ನು ಆಚರಿಸಿದರು ಎಂದಿರಬೇಕಿತ್ತು' ಎಂದು ಹೇಳಿದ್ದಾರೆ.

'ಕೆಲ ಮಠಾಧೀಶರು, ಮುಖಂಡರು ಹಾಗೂ ತಮ್ಮ ಧರ್ಮದ ಕುರಿತು ಮಾತನಾಡುವ ಧೈರ್ಯ, ಬದ್ಧತೆ ಇಲ್ಲದ ಅನ್ಯ ಧರ್ಮಿಯರು ಬಸವಣ್ಣನವರನ್ನು ವೀರಶೈವ ಬದಲಿಗೆ ಲಿಂಗಾಯತ ಎನ್ನಬೇಕಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಸವಣ್ಣನವರು ಉಪನಯನದ ನಂತರ ಕೂಡಲಸಂಗಮಕ್ಕೆ ನಡೆದರು ಎನ್ನುವುದೂ ಸತ್ಯಕ್ಕೆ ದೂರವಾಗಿದೆ' ಎಂದಿದ್ದಾರೆ.

'ಪ್ರಖರ ಸತ್ಯವೊಂದರ ತಿಳಿವಳಿಕೆಯನ್ನು ಅತಿ ತುರ್ತಾಗಿ ರಾಜ್ಯ ಸರ್ಕಾರ ಮಾಡಬೇಕಾಗಿದೆ. ಆಗಷ್ಟೇ ರಾಜಕಾರಣದ (ಧರ್ಮ ರಾಜಕಾರಣವನ್ನು ಒಳಗೊಂಡಂತೆ) ಗರ್ಭದಿಂದ ಜನಿಸಿದ ವಿಚಾರವಾಗಿರುವ ಬಸವಣ್ಣನವರು ಲಿಂಗಾಯತ ಎಂಬ ಹೊಸ ಧರ್ಮವನ್ನು ಸ್ಥಾಪಿಸಿದರು ಎಂಬ ಅಪಪ್ರಚಾರಕ್ಕೆ ಅಂತಿಮ ತೆರೆ ಎಳೆಯಬಹುದು' ಎಂದು ವಿವರಿಸಿದ್ದಾರೆ.

ಪಠ್ಯದಿಂದ 'ಸಂವಿಧಾನ ಶಿಲ್ಪಿ' ಪದಕ್ಕೆ ಕೊಕ್– ಡಿಕೆಶಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: '9ನೇ ತರಗತಿ ಸಮಾಜ ವಿಜ್ಞಾನದ 'ನಮ್ಮ ಸಂವಿಧಾನ' ಪಾಠದಲ್ಲಿ ಸಂವಿಧಾನ ರಚನೆಗೆ ಅಂಬೇಡ್ಕರ್‌ರ ಕೊಡುಗೆ ಆಧರಿಸಿ 'ಸಂವಿಧಾನ ಶಿಲ್ಪಿ' ಎಂದು ಕರೆಯಲಾಗಿದೆ ಎಂದಿತ್ತು. ಈ ವಾಕ್ಯವನ್ನು ಪರಿಷ್ಕರಣೆ ವೇಳೆ ತೆಗೆಯಲಾಗಿದೆ. ಅಂಬೇಡ್ಕರ್ ಕುರಿತ ಇನ್ನೂ ಹಲವು ಅಂಶಗಳನ್ನೂ ತೆಗೆಯಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಠ್ಯ ಪರಿಷ್ಕರಣೆಯ ಪ್ರಮಾದಗಳಿಗೆ ಬಿಜೆಪಿ ಸರ್ಕಾರವೇ ಕಾರಣ. ಬಸವಣ್ಣ, ಕುವೆಂಪು, ಬುದ್ಧ, ನಾರಾಯಣ ಗುರು, ಮಹಾವೀರ ಜೈನ್, ಭಗತ್ ಸಿಂಗ್ ಮುಂತಾದ ಮಹಾನ್ ನಾಯಕರ ವಿಚಾರಗಳನ್ನು ಸರ್ಕಾರ ಕೈಬಿಟ್ಟಿದೆ, ಇಲ್ಲವೇ ತಿರುಚಿದೆ. ಇದರಿಂದ ಸರ್ಕಾರದ ಮನಸ್ಥಿತಿ, ಮುಖವಾಡ ಬಯಲಾಗಿದೆ' ಎಂದರು.

'6ನೇ ತರಗತಿ ಪಠ್ಯಪುಸ್ತಕದಲ್ಲಿದ್ದ ಚನ್ನಣ್ಣ ವಾಲೀಕಾರ ಅವರು ಬರೆದಿದ್ದ 'ನೀ ಹೋದ ಮರುದಿನ' ಎಂಬ ಅಂಬೇಡ್ಕರ್ ಬಗೆಗಿನ ಕವಿತೆ ತೆಗೆಯಲಾಗಿದೆ. 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಅಂಬೇಡ್ಕರ್ ಅವರ ತಂದೆ, ತಾಯಿ ಹೆಸರು, ಹುಟ್ಟಿದ ಸ್ಥಳ, ದಿನಾಂಕವಿತ್ತು. ಅದನ್ನೂ ತೆಗೆಯಲಾಗಿದೆ. ಅದೇ ಭಾಗದಲ್ಲಿ ಅಂಬೇಡ್ಕರ್‌ರವರ ಹೋರಾಟಗಳಾಗಿದ್ದ ಮಹಾಡ್ ಸತ್ಯಾಗ್ರಹ ಹಾಗೂ ಕಾಲಾರಾಂ ದೇಗುಲ ಪ್ರವೇಶ ಹೋರಾಟಗಳ ಪ್ರಸ್ತಾಪವನ್ನೂ ತೆಗೆದು ಹಾಕಲಾಗಿದೆ' ಎಂದರು.

'ಗೌರವವಾಗಿ ಕಾಣುತ್ತಿದ್ದ ಮಹನೀಯರನ್ನು ಪಠ್ಯದಲ್ಲಿ ಸಾಮಾನ್ಯರಂತೆ ಬಿಂಬಿಸಲಾಗಿದೆ. ರಾಮಾಯಣ ನೀಡಿದ ವಾಲ್ಮೀಕಿ ಸಮುದಾಯವನ್ನು ಕೀಳಾಗಿ ಕಾಣಲಾಗಿದೆ. ತಮ್ಮ ಸಮಾಜದ ಗೌರವ, ಸ್ವಾಭಿಮಾನ ಕಾಪಾಡಿಕೊಳ್ಳಲು ಮುಂದಿನ ದಿನಗಳಲ್ಲಿ ಎಲ್ಲ ಧರ್ಮಗಳ ಸಂಘಟನೆಗಳು, ಸ್ವಾಮೀಜಿಗಳು, ಮುಖಂಡರು ಧ್ವನಿ ಎತ್ತಬೇಕು' ಎಂದರು.

'ಪರಿಷ್ಕೃತ ಪಠ್ಯ ಕಸದಬುಟ್ಟಿಗೆ ಎಸೆಯಿರಿ'

ಬೆಂಗಳೂರು: 'ವಿಕೃತ ಮನಸ್ಸಿನ ಕಿಡಿಗೇಡಿ ಅಧ್ಯಕ್ಷ ತಯಾರಿಸಿರುವ ಪರಿಷ್ಕೃತ ಪಠ್ಯದಿಂದ ಬಹುಸಂಖ್ಯಾತ ಹಿಂದೂಗಳ ಮನಸ್ಸಿಗೆ ಮಾತ್ರವಲ್ಲ, ಆರೂವರೆ ಕೋಟಿ ಕನ್ನಡಿಗರ ಮನಸ್ಸಿಗೆ ಘಾಸಿಯಾಗಿದೆ. ಕನ್ನಡಿಗರ ಸಹನೆ ಪರೀಕ್ಷಿಸಬೇಡಿ. ಮೊದಲು ಪರಿಷ್ಕೃತ ಪಠ್ಯ ಕಸದ ಬುಟ್ಟಿಗೆ ಎಸೆಯಿರಿ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಹಿಂದೂ ಭಾವನೆಗೆ ಧಕ್ಕೆಯಾಗಿದ್ದಕ್ಕೆ ಪಠ್ಯಪರಿಷ್ಕರಿಸಲಾಗಿದೆ ಎಂದು ಶಿಕ್ಷಣ ಸಚಿವ ನಾಗೇಶ್ ಅಸಲಿ ಕಾರಣ ಬಹಿರಂಗಪಡಿಸಿದ್ದಾರೆ. ಈ ಹಿಂದೂಗಳು ಯಾರು ಎನ್ನುವುದನ್ನು ಸಚಿವರು ಬಹಿರಂಗಪಡಿಸಿ, ಯಾವುದರಿಂದ ಯಾರ ಭಾವನೆಗೆ ಧಕ್ಕೆಯಾಗಿದೆ ಎನ್ನುವುದನ್ನೂ ಸ್ಪಷ್ಟಪಡಿಸಬೇಕು' ಎಂದು ಆಗ್ರಹ ಪಡಿಸಿದ್ದಾರೆ.

'ಬಸವಣ್ಣ, ಅಂಬೇಡ್ಕರ್, ಸಾವಿತ್ರಿಬಾಯಿ ಪುಲೆ, ನಾರಾಯಣಗುರು, ಕುವೆಂಪು ಸೇರಿದಂತೆ ಮಹನೀಯರ ವ್ಯಕ್ತಿತ್ವವನ್ನು ಪರಿಷ್ಕೃತ ಪಠ್ಯದಲ್ಲಿ ಕಡೆಗಣಿಸಲಾಗಿದೆ. ಇವರನ್ನು ಪರಿಷ್ಕೃತ ಸಮಿತಿಯ ಕಿಡಿಗೇಡಿ ಅಧ್ಯಕ್ಷ ತುಚ್ಛೀಕರಿಸಿದ್ದಾನೆ' ಎಂದು ಪ್ರತಿಭಟಿಸುತ್ತಿರುವವರು ಅನ್ಯ ಧರ್ಮೀಯರಲ್ಲ, ಹಿಂದೂಗಳೇ ಅಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ಪಠ್ಯ ಪರಿಷ್ಕರಣಾ ಸಮಿತಿಯಲ್ಲಿ ದಲಿತ ಮತ್ತು ಹಿಂದುಳಿದ ಜಾತಿಗಳ ವಿದ್ವಾಂಸರಿಗೆ ಪ್ರಾತಿನಿಧ್ಯವೇ ನೀಡಿಲ್ಲವಲ್ಲ? ಬಸವಣ್ಣ ಮತ್ತು ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸಿದ ಕಾರಣಕ್ಕೆ ಅವರನ್ನು ನಿರ್ಲಕ್ಷಿಸಲಾಯಿತೇ? ನಾರಾಯಣ ಗುರು, ಪೆರಿಯಾರ್, ಕುವೆಂಪು ಅವರು ಹಿಂದೂ ಧರ್ಮದ ದೋಷಗಳನ್ನು ಎತ್ತಿ ತೋರಿಸಿದ್ದಕ್ಕಾಗಿ ನಿರ್ಲಕ್ಷ್ಯ ಮಾಡಲಾಯಿತೇ' ಎಂದೂ ಪ್ರಶ್ನಿಸಿದ್ದಾರೆ.

'ಸಚಿವರ ಮಾತಿನಿಂದ ಸಾಹಿತಿಗಳ ಅಂತಃಕರಣಕ್ಕೆ ನೋವು'

ಬೆಂಗಳೂರು: 'ಪಕ್ಷವೊಂದರ ಕೃಪಾಪೋಷಣೆಯಿಂದ ಸಾಹಿತಿಗಳು, ಪ್ರತಿಷ್ಠಾನಗಳಿಗೆ ರಾಜೀನಾಮೆ ಸಲ್ಲಿಸುತ್ತಿದ್ದಾರೆಂದು ಸಚಿವರು ನೀಡುವ ಹೇಳಿಕೆಯು ಸಾಹಿತಿಗಳ ಅಂತಃಕರಣಕ್ಕೆ ನೋವು ಉಂಟು ಮಾಡಿದೆ' ಎಂದು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಹಂಪ ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ಭಾನುವಾರ ನಡೆದ ಗಾಯಕ ವೈ.ಕೆ.ಮುದ್ದುಕೃಷ್ಣ -75 ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಸರ್ಕಾರವೇ ನಮ್ಮನ್ನು ನಾಮಕರಣ ಮಾಡಿತ್ತು. ಸಚಿವರ ಹೇಳಿಕೆಯಿಂದ ಸಾಹಿತ್ಯ ಲೋಕಕ್ಕೆ ನೋವು, ಹಿಂಸೆಯಾಗಿದೆ. ಅಂಥ ಸಚಿವರಿಗೆ ಮುಖ್ಯಮಂತ್ರಿ ಬುದ್ಧಿ ಹೇಳಲಿ' ಎಂದು ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲೇ ಹೇಳಿದರು.

'ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಮನೆಯ ಮೇಲೆ ದಾಳಿ ನಡೆದಿರುವುದೂ ಖಂಡನೀಯ. ಭಿನ್ನಾಭಿಪ್ರಾಯ ಬಂದರೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಮನೆ ಹಾಗೂ ವ್ಯಕ್ತಿಗಳ ಮೇಲೆ ದಾಳಿ ನಡೆಸಬಾರದು' ಎಂದು ಅಭಿಪ್ರಾಯಪಟ್ಟರು.

ದ್ವೇಷ ಬಿತ್ತುವುದು ಎನ್ಇಪಿಯೇ: ಎಚ್‌ಡಿಕೆ ಪ್ರಶ್ನೆ

ಬಾಗಲಕೋಟೆ: ಧರ್ಮದ ಹೆಸರಿನಲ್ಲಿ ಏನೂ ಅರಿಯದ ಮಕ್ಕಳಲ್ಲಿ ದ್ವೇಷ ಬಿತ್ತುವುದು ಹೊಸ ಶಿಕ್ಷಣ ನೀತಿಯೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಭಾನುವಾರ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಠ್ಯ ಪರಿಷ್ಕರಣ ಸಮಿತಿ ಮೂಲಕ ಗೊಂದಲ ಸೃಷ್ಟಿ ಮಾಡುವುದೇ ಹೊಸ ಶಿಕ್ಷಣ ನೀತಿ ಭಾಗವಾಗಿದೆ' ಎಂದು ಟೀಕಿಸಿದರು.

'ಬಸವಣ್ಣ, ಕುವೆಂಪು ಸೇರಿದಂತೆ ನಾಡಿನ ಹಲವು ಮಹಾನುಭವರಿಗೆ ಅವಮಾನ ಮಾಡಲಾಗುತ್ತಿದೆ. ಶಿಕ್ಷಣ ಕ್ಷೇತ್ರವನ್ನು ಕಲುಷಿತಗೊಳಿಸಲಾಗುತ್ತಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರು ಆತಂಕ ಪಡುವ ಸ್ಥಿತಿ ನಿರ್ಮಾಣವಾಗಿದೆ' ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು ಸಂವಾದ
ರಾಜ್ಯಸಭೆ: ಧನಿಕರಿಗೆ ಮಣೆ ಏಕೆ?
ಭಾಗವಹಿಸುವವರು:

ಈರಣ್ಣ ಕಡಾಡಿ
ರಾಜ್ಯಸಭೆಯ ಬಿಜೆಪಿ ಸದಸ್ಯ

ವಿ.ಆರ್. ಸುದರ್ಶನ್
ಕಾಂಗ್ರೆಸ್ ನಾಯಕ



ನಜ್ಮಾ ನಝೀರ್ ಚಿಕ್ಕನೇರಳೆ
ಜೆಡಿಎಸ್ ಯುವ ನಾಯಕಿ

ಬೆಳಿಗ್ಗೆ 11 ರಿಂದ 12

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3xgrB71

ನೂಪುರ್ ಅಮಾನತು, ನವೀನ್ ಉಚ್ಚಾಟನೆ

ಒಂದನೇ ಪುಟದಿಂದ

ಇದಕ್ಕೂ ಮುನ್ನ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹೇಳಿಕೆ ಬಿಡುಗಡೆ ಮಾಡಿ, 'ಪಕ್ಷವು ಎಲ್ಲಾ ಧರ್ಮಗಳನ್ನು ಗೌರವಿಸುತ್ತದೆ. ಯಾವುದೇ ಧರ್ಮ, ವ್ಯಕ್ತಿ ಅವಮಾನಿಸುವುದನ್ನು ಬಲವಾಗಿ ಖಂಡಿಸುತ್ತದೆ. ಬಿಜೆಪಿ ಅಂತಹ ವ್ಯಕ್ತಿಗಳನ್ನು ಅಥವಾ ಚಿಂತನೆಗಳನ್ನು ಪ್ರಚುರಪಡಿಸುವುದಿಲ್ಲ' ಎಂದು ತಿಳಿಸಿದ್ದರು.

ಈ ಬೆಳವಣಿಗೆಯ ನಡುವೆ ಶರ್ಮಾ ಅವರು ಸುದ್ದಿವಾಹಿನಿಯ ಕಾರ್ಯಕ್ರಮದಲ್ಲಿ ಪ್ರವಾದಿ ಕುರಿತು ನೀಡಿದ್ದ ಹೇಳಿಕೆಯನ್ನು ಬೇಷರತ್ತಾಗಿ ವಾಪಸ್ ಪಡೆದಿದ್ದು, ಮಹಾದೇವನ (ಶಿವ) ಬಗ್ಗೆ ಅಗೌರವ ತರುವಂತಹ ಹೇಳಿಕೆ ನೀಡುತ್ತಿರುವವರ ಬಗ್ಗೆ ಖಂಡಿಸುವ ಸಂದರ್ಭದಲ್ಲಿ ಈ ಮಾತು ಆಡಿದ್ದಾಗಿ ತಿಳಿಸಿದ್ದಾರೆ.

ಬಿಜೆಪಿ ಹೇಳಿಕೆ ಹೊರ ಬಿದ್ದ ಬೆನ್ನಲ್ಲೆ ಶ್ರೀನಗರದಲ್ಲಿ ಮಾತನಾಡಿರುವ ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ, ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿದು, ದಿಢೀರ್ ಎಚ್ಚೆತ್ತುಕೊಂಡು ಈ ಹೇಳಿಕೆ ನೀಡಿದೆ ಎಂದು ಟೀಕಿಸಿದ್ದಾರೆ.

ಪುನೀತ್ ರಾಜಕುಮಾರ್ ಕಂಚಿನ ಪುತ್ಥಳಿ ಅನಾವರಣ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಅಪಾರ ಸಂಖ್ಯೆಯ ಅಭಿಮಾನಿಗಳ ಕರತಾಡನ, ಹೂಮಳೆಯ ನಡುವೆ ನಗರದಲ್ಲಿ ಭಾನುವಾರ ರಾತ್ರಿ ನಟ, ದಿವಂಗತ ಪುನೀತ್ ರಾಜಕುಮಾರ್ ಅವರ 7.4 ಅಡಿ ಎತ್ತರದ ಕಂಚಿನ ಪುತ್ಥಳಿಯನ್ನು ಅನಾವರಣಗೊಳಿಸಲಾಯಿತು.

ಪುನೀತ್ ಅವರ ಅಣ್ಣ, ನಟ ರಾಘವೇಂದ್ರ ರಾಜಕುಮಾರ್ ಪುತ್ಥಳಿ ಅನಾವರಣಗೊಳಿಸಿದರು. ರಾಘವೇಂದ್ರ ರಾಜಕುಮಾರ ಪತ್ನಿ ಮಂಗಳಾ, ನಟ ಅಜೇಯ್ ರಾವ್, ಸಚಿವ ಆನಂದ್ ಸಿಂಗ್, ನಿರ್ಮಾಪಕ ಸಂತೋಷ್ ಆನಂದ್ ರಾವ್ ಇದ್ದರು. ಪುನೀತ್ ಅವರ ಅಭಿಮಾನಿ ಗಳು, ಅವರ ಭಾವಚಿತ್ರವಿದ್ದ ಟೀ–ಶರ್ಟ್, ಧ್ವಜ, ಭಾವಚಿತ್ರ ಹಿಡಿದು ಪಾಲ್ಗೊಂಡಿದ್ದರು. 'ಅಪ್ಪು'.. 'ಅಪ್ಪು'.. 'ಮತ್ತೆ ಹುಟ್ಟಿ ಬನ್ನಿ' ಎಂದು ಜಯಘೋಷ ಹಾಕಿದರು. ಹೊಸಪೇಟೆ ಕುರಿತು ಪುನೀತ್ ಮಾತನಾಡಿದ ಆಡಿಯೋ, ವಿಡಿಯೋ ಇದೇ ವೇಳೆ ಪ್ರಸಾರ ಮಾಡಲಾಯಿತು. ಆಗ ಅಭಿಮಾನಿಗಳ ಜಯಘೋಷ ಮತ್ತಷ್ಟು ಮುಗಿಲು ಮುಟ್ಟಿತ್ತು.

ರಾಘವೇಂದ್ರ ರಾಜಕುಮಾರ್ ಮಾತನಾಡಿ, 'ನಮ್ಮ ತಂದೆ ಹೋದಾಗ ಅನಾಥರು ಅನಿಸಿರಲಿಲ್ಲ. ತಾಯಿ ಹೋದಾಗ ತಬ್ಬಲಿ ಅನಿಸಿರಲಿಲ್ಲ. ಆದರೆ, ಪುನೀತ್ ರಾಜಕುಮಾರ್‌ನನ್ನು ಕಳೆದುಕೊಂಡ ನಂತರ ಅನಾಥ, ತಬ್ಬಲಿ ಅನಿಸುತ್ತಿದೆ' ಎಂದರು.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ನೇತೃತ್ವದಲ್ಲಿ ಸರಣಿ ಸಭೆ

ಲಹರ್ ಸಿಂಗ್ ಗೆಲುವಿಗೆ ಬಿಜೆಪಿ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯಲ್ಲಿ ಪಕ್ಷದ ಮೂರನೇ ಅಭ್ಯರ್ಥಿಯಾಗಿರುವ ಲಹರ್ ಸಿಂಗ್ ಸಿರೋಯ ಅವರನ್ನು ಗೆಲ್ಲಿಸಲೇಬೇಕೆಂಬ ಗುರಿಯೊಂದಿಗೆ ಬಿಜೆಪಿ ನಾಯಕರು ತಂತ್ರಗಾರಿಕೆ ಆರಂಭಿಸಿದ್ದಾರೆ. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತು ರಾಜ್ಯಸಭೆ ಚುನಾವಣಾ ಉಸ್ತುವಾರಿ ಕಿಶನ್ ರೆಡ್ಡಿ, ಭಾನುವಾರ ಸರಣಿ ಸಭೆಗಳನ್ನು ನಡೆಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಚಿತ್ರನಟ ಜಗ್ಗೇಶ್ ಅವರನ್ನು ಮೊದಲ ಪ್ರಾಶಸ್ತ್ಯದ ಮತಗಳಿಂದ ಗೆಲ್ಲಿಸಿಕೊಂಡು, ಉಳಿದ ಮತಗಳಿಂದ ಲಹರ್ ಸಿಂಗ್ ಅವರನ್ನು ಗೆಲುವಿನ ದಡ ಮುಟ್ಟಿಸುವ ಕುರಿತು ಬಿಜೆಪಿ ನಾಯಕರು ತಂತ್ರ ಹೆಣೆಯುತ್ತಿದ್ದಾರೆ. ಅಭ್ಯರ್ಥಿಗಳಿಗೆ ಮತ ಚಲಾಯಿಸಬೇಕಾದ ಶಾಸಕರ ಪಟ್ಟಿ ಸಿದ್ಧಪಡಿಸುವುದು, ಅನ್ಯ ಪಕ್ಷಗಳ ಶಾಸಕರ ಮತ ಸೆಳೆಯುವುದು ಸೇರಿದಂತೆ ಹಲವು ವಿಚಾರಗಳ ಕುರಿತು ಸಭೆಗಳಲ್ಲಿ ಚರ್ಚಿಸಲಾಗಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕಂದಾಯ ಸಚಿವ ಆರ್.ಅಶೋಕ, ಲಹರ್ ಸಿಂಗ್ ಜತೆ ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಅರುಣ್ ಸಿಂಗ್ ಮತ್ತು ಕಿಶನ್ ರೆಡ್ಡಿ ಹಲವು ಸುತ್ತಿನ ಚರ್ಚೆ ನಡೆಸಿದರು. ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಭೇಟಿ ನೀಡಿದ ಅರುಣ್ ಸಿಂಗ್ ಮತ್ತು ನಳಿನ್ ಕುಮಾರ್ ಕಟೀಲ್, ರಾಜ್ಯಸಭಾ ಚುನಾವಣೆಯ ಕುರಿತು ಸಮಾಲೋಚನೆ ನಡೆಸಿದರು. ಕೆಲಹೊತ್ತಿನ ಬಳಿಕ ಲಹರ್ ಸಿಂಗ್ ಅವರನ್ನೂ ಅಲ್ಲಿಗೆ ಕರೆಸಿಕೊಂಡು ಚರ್ಚಿಸಿದರು.

ಅಶೋಕ– ರೆಡ್ಡಿ ಪ್ರತ್ಯೇಕ ಚರ್ಚೆ: ಅಶೋಕ ಮತ್ತು ಕಿಶನ್ ರೆಡ್ಡಿ ಪ್ರತ್ಯೇಕವಾಗಿಯೂ ಚರ್ಚೆ ನಡೆಸಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರ ಮತಗಳನ್ನು ಸೆಳೆಯುವ ಸಾಧ್ಯತೆ ಕುರಿತೂ ಸಮಾಲೋಚನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿರ್ಮಲಾ ಸೀತಾರಾಮನ್, ಜಗ್ಗೇಶ್ ಹಾಗೂ ಲಹರ್ ಸಿಂಗ್ ನಡುವೆ ಬಿಜೆಪಿ ಶಾಸಕರ ಮತಗಳ ಹಂಚಿಕೆಗೆ ಪಟ್ಟಿ ಸಿದ್ಧಪಡಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಮೊದಲ ಎರಡು ಅಭ್ಯರ್ಥಿಗಳಿಗೆ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಚಲಾಯಿಸುವವರು ಕಡ್ಡಾಯವಾಗಿ ಎರಡನೇ ಪ್ರಾಶಸ್ತ್ಯದ ಮತವನ್ನು ಲಹರ್ ಸಿಂಗ್ ಅವರಿಗೆ ನೀಡುವಂತೆ ನಿರ್ದೇಶನ ನೀಡಲು ನಿರ್ಧರಿಸಲಾಗಿದೆ ಎಂದು ಗೊತ್ತಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, 'ನಮ್ಮ ಬಳಿ ಗೆಲುವಿಗೆ ಅಗತ್ಯವಿರುವಷ್ಟು ಮತಗಳಿರುವ ಕಾರಣದಿಂದಲೇ ಮೂವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ನಮ್ಮ ಎಲ್ಲ ನಾಯಕರೂ ಚುನಾವಣಾ ತಂತ್ರಗಾರಿಕೆಯಲ್ಲಿ ನಿರತರಾಗಿದ್ದಾರೆ. ಬಿಜೆಪಿಯ ಮೂವರು ಅಭ್ಯರ್ಥಿಗಳೂ ರಾಜ್ಯಸಭೆಗೆ ಆಯ್ಕೆಯಾಗುವುದು ಖಚಿತ' ಎಂದರು.

ಆತ್ಮಸಾಕ್ಷಿ ಮತ ಕೇಳಿದ್ದೇವೆ– ಡಿಕೆಶಿ

ಬೆಂಗಳೂರು: 'ರಾಜ್ಯಸಭೆ ಚುನಾವಣೆ ವಿಚಾರದಲ್ಲಿ ಬೇರೆಯವರು ಏನು ಪ್ರಯತ್ನ ಮಾಡುತ್ತಿದ್ದಾರೋ ಗೊತ್ತಿಲ್ಲ. ನಾವು ಆತ್ಮಸಾಕ್ಷಿ ಮತ ಹಾಗೂ ಜಾತ್ಯತೀತ ಭಾವನೆ ಹೊಂದಿರುವವರು ನಮಗೆ ಮತ ನೀಡಬೇಕು ಎಂದು ಕೇಳಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು 'ನಾನು, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಬಿ.ಕೆ. ಹರಿಪ್ರಸಾದ್ ಹಾಗೂ ರಾಷ್ಟ್ರ ನಾಯಕರು ಸೇರಿ ಪಕ್ಷದಿಂದ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಲು ತೀರ್ಮಾನಿಸಿದೆವು. ಕೆಲವು ಮಾಧ್ಯಮಗಳು ಖರ್ಗೆ ಅವರು ಜೆಡಿಎಸ್ ಜತೆ ಸಂಧಾನ ಮಾಡುತ್ತಿದ್ದಾರೆ ಎಂದು ವರದಿ ಮಾಡಿದ್ದು, ಇದು ಸತ್ಯಕ್ಕೆ ದೂರ' ಎಂದರು.

'ಮೂವರ ಆಯ್ಕೆ ಖಚಿತ'

'ರಾಜ್ಯಸಭೆ ಚುನಾವಣೆಗೆ ಬಿಜೆಪಿಯಿಂದ ಕಣಕ್ಕಿಳಿದಿರುವ ಮೂವರು ಅಭ್ಯರ್ಥಿಗಳೂ ಗೆಲುವು ಸಾಧಿಸುತ್ತಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರದ ಸಾಧನೆಗಳನ್ನು ಬೆಂಬಲಿಸಿ ಶಾಸಕರು ಬಿಜೆಪಿ ಅಭ್ಯರ್ಥಿಗಳಿಗೆ ಮತ ಚಲಾಯಿಸುತ್ತಾರೆ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಎಎಪಿ ಅಧ್ಯಕ್ಷರಾಗಿ ಪೃಥ್ವಿ ರೆಡ್ಡಿ

ಬೆಂಗಳೂರು: ಆಮ್ ಆದ್ಮಿ ಪಾರ್ಟಿಯ (ಎಎಪಿ) ರಾಜ್ಯ ಘಟಕದ ಅಧ್ಯಕ್ಷರಾಗಿ ಪೃಥ್ವಿ ರೆಡ್ಡಿ ಪುನರಾಯ್ಕೆ ಆಗಿದ್ದಾರೆ.

ಪೃಥ್ವಿ ರೆಡ್ಡಿ

ಎಎಪಿ ರಾಷ್ಟ್ರೀಯ ಸಂಚಾಲಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನಿರ್ದೇಶನದಂತೆ ಪಕ್ಷದ ಕರ್ನಾಟಕ ಚುನಾವಣಾ ಉಸ್ತುವಾರಿ ದಿಲೀಪ್ ಪಾಂಡೆ ತಂಡದ ಪುನಾರಚನೆ ಮಾಡಿದ್ದಾರೆ.

ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹಾಗೂ ವಿಜಯ್ ಶರ್ಮಾ ಅವರನ್ನು ಉಪಾಧ್ಯಕ್ಷರಾಗಿ ನೇಮಿಸಲಾಗಿದೆ. ಪ್ರಧಾನ ಕಾರ್ಯದರ್ಶಿಯಾಗಿ ಸಂಚಿತ್ ಸಹಾನಿ, ಖಜಾಂಚಿಯಾಗಿ ಹರಿಹರನ್, ಮಾಧ್ಯಮ ವಿಭಾಗದ ಉಸ್ತುವಾರಿಯಾಗಿ ಜಗದೀಶ್ ವಿ. ಸದಂ, ರಾಜ್ಯ ಘಟಕದ ವಕ್ತಾರರಾಗಿ ಕೆ.ಮಥಾಯ್ ಅವರನ್ನು ನೇಮಿಸಲಾಗಿದೆ. ಕಾರ್ಯದರ್ಶಿಗಳಾಗಿ ಎಚ್.ಡಿ.ಬಸವರಾಜು, ಡಾ.ವೆಂಕಟೇಶ್, ಬಿ.ಟಿ.ನಾಗಣ್ಣ, ಲಕ್ಷ್ಮೀಕಾಂತ್ ರಾವ್, ಶಾಂತಲಾ ದಾಮ್ಲೆ, ಜಂಟಿ ಕಾರ್ಯದರ್ಶಿಗಳಾಗಿ ದರ್ಶನ್ ಜೈನ್ ಹಾಗೂ ವಿವೇಕಾನಂದ ಸಾಲಿನ್ಸ್ ಅವರನ್ನು ನೇಮಿಸಲಾಗಿದೆ. ಬೆಂಗಳೂರು ನಗರ ಘಟಕದ ಅಧ್ಯಕ್ಷರನ್ನಾಗಿ ಮೋಹನ್ ದಾಸರಿ ಅವರನ್ನುಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ
(2009 ರಲ್ಲಿ ಸಂಸತ್ತಿನ ಕಾಯ್ದೆಯಿಂದ ಸ್ಥಾಪಿಸಲಾಗಿದೆ)
ಕಡಗಂಚಿ, ಆಳಂದ ರಸ್ತೆ, ಕಲಬುರಗಿ 585 311 - ದೂರವಾಣಿ: 08477 - 226732
Website: www.cuk.ac.in Email: registrar@cuk.ac.in
ಪ್ರವೇಶ ಅಧಿಸೂಚನೆ
ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಅಂಬೇಡ್ಕರ್ ಸೆಂಟರ್ ಆಫ್ ಎಕ್ಸ್‌ಲೆನ್ಸ್ (DACE) ಅಡಿಯಲ್ಲಿ ಉಚಿತ (upsc - Civil Service) ಕೋಚಿಂಗ್ (ಪೂರ್ವಭಾವಿ ಮತ್ತು ಮುಖ್ಯ) ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ https://www.cuk.ac.in/#/dace ಭೇಟಿ ನೀಡಬಹುದು. ಆನ್‌ಲೈನ್ ಅಪ್ಲಿಕೇಶನ್ ಪ್ರಕ್ರಿಯೆ 10-06-2022ರಂದು ಪ್ರಾರಂಭವಾಗುತ್ತದೆ ಮತ್ತು ಅರ್ಜಿಯನ್ನು ಸಲ್ಲಿಸಲು 15-07-2022 ಕೊನೆಯ ದಿನಾಂಕವಾಗಿರುತ್ತದೆ.
ಸಹಿ/-
ಕುಲಸಚಿವರು

ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ
(2009 ರಲ್ಲಿ ಸಂಸತ್ತಿನ ಕಾಯ್ದೆಯಿಂದ ಸ್ಥಾಪಿಸಲಾಗಿದೆ)
ಕಡಗಂಚಿ, ಆಳಂದ ರಸ್ತೆ, ಕಲಬುರಗಿ 585 311 - ದೂರವಾಣಿ: 08477 - 226732
Website: www.cuk.ac.in Email: registrar@cuk.ac.in
ನೇಮಕಾತಿ ಅಧಿಸೂಚನೆ
ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಡಾ. ಅಂಬೇಡ್ಕರ್ ಸೆಂಟರ್ ಆಫ್ ಎಕ್ಸ್‌ಲೆನ್ಸ್ (DACE) ಯೋಜನೆ ಯಡಿಯಲ್ಲಿ, ಇತಿಹಾಸ, ಭೂಗೋಳ ಮತ್ತು ಸಾರ್ವಜನಿಕ ಆಡಳಿತ ವಿಷಯದಲ್ಲಿ ಯು.ಪಿ.ಎಸ್.ಸಿ. (UPSC- Civil Service) ಕೋಚಿಂಗ್‌ಗಾಗಿ (ಪೂರ್ವಭಾವಿ ಮತ್ತು ಮುಖ್ಯ) ಅರೆಕಾಲಿಕ ಅಧ್ಯಾಪಕರ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ https://www.cuk.ac.in/#/dace ಗೆ ಭೇಟಿ ನೀಡಬಹುದು. ಅನ್‌ಲೈನ್ ಅಪ್ಲಿಕೇಶನ್ ಪ್ರಕ್ರಿಯೆ 10-06-2022 ರಿಂದ ಪ್ರಾರಂಭವಾಗುತ್ತದೆ ಮತ್ತು ಭರ್ತಿ ಮಾಡಿದಅರ್ಜಿ ಸಲ್ಲಿಸಲು 15-07-2022 ಕೊನೆಯ ದಿನಾಂಕವಾಗಿರುತ್ತದೆ.
ಸಹಿ/- ಕುಲಸಚಿವರು

ಸಿಡಿಲು ಬಡಿದು ಇಬ್ಬರು ಸಾವು

ಯಲಬುರ್ಗಾ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕಮ್ಯಾಗೇರಿ ಗ್ರಾಮದ ಹೊರವಲಯದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ಮಹಿಳಾ ಕಾರ್ಮಿಕರಿಬ್ಬರು ಭಾನುವಾರ ಸಿಡಿಲು ಬಡಿದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

6 ಜನರಿದ್ದ ಈ ಗುಂಪಿನಲ್ಲಿ ದೇವಮ್ಮ ಯಮನಪ್ಪ ಮುದೇನೂರು (60) ಹಾಗೂ ರೇಷ್ಮಾ ಕೊಟ್ರೇಶ್ ಛಲವಾದಿ (28) ಮೃತಪಟ್ಟವರು. ಇತರ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಳಗಾವಿ ವರದಿ: ಜಿಲ್ಲೆಯ ಸವದತ್ತಿ, ಬೈಲಹೊಂಗಲ, ಯರಗಟ್ಟಿ, ಹುಕ್ಕೇರಿ, ಖಾನಾಪುರ ತಾಲ್ಲೂಕಿನ ಬಹುಪಾಲು ಹಳ್ಳಿಗಳಲ್ಲಿ ಭಾನುವಾರ ಮಧ್ಯಾಹ್ನ ಒಂದು ತಾಸಿಗೂ ಅಧಿಕ ಕಾಲ ಧಾರಾಕಾರ ಮಳೆ ಸುರಿಯಿತು.

ಚಿತ್ರದುರ್ಗ ವರದಿ: ಜಿಲ್ಲೆಯ ಹಲವೆಡೆ ಭಾನುವಾರ ಸಂಜೆ ಗುಡುಗು, ಬಿರುಗಾಳಿ ಸಹಿತ ಮಳೆ ಸುರಿಯಿತು.

ಸಂಕ್ಷಿಪ್ತ ಸುದ್ದಿ

ಧ್ವನಿವರ್ಧಕ ಪರವಾನಗಿ: ಗರಿಷ್ಠ ಶುಲ್ಕ ₹ 450

ಬೆಂಗಳೂರು: ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಧ್ವನಿವರ್ಧಕ ಬಳಕೆಗೆ ಪರವಾನಗಿ ನೀಡಲು ಗರಿಷ್ಠ ₹ 450 ಶುಲ್ಕ ನಿಗದಿಪಡಿಸಿ ಗೃಹ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಧ್ವನಿವರ್ಧಕಗಳ ಬಳಕೆ ನಿಯಂತ್ರಣ ಕುರಿತು ಮೇ 10ರಂದು ಸುತ್ತೋಲೆ ಹೊರಡಿಸಲಾಗಿತ್ತು. ಆಗ ಧ್ವನಿವರ್ಧಕ ಬಳಕೆಗೆ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಪರವಾನಗಿ ನೀಡಲು ಎಷ್ಟು ಶುಲ್ಕ ವಿಧಿಸಬೇಕು ಎಂಬುದರ ಕುರಿತು ಸ್ಪಷ್ಟತೆ ಇರಲಿಲ್ಲ.

ಕಾಂಗ್ರೆಸ್ ಅಭ್ಯರ್ಥಿಗೆ ಮರಿತಿಬ್ಬೇಗೌಡ ಬೆಂಬಲ

ಮಂಡ್ಯ: ವಿಧಾನಪರಿಷತ್ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡ ಅವರಿಗೆ ಬೆಂಬಲ ನೀಡುವುದಾಗಿ ಜೆಡಿಎಸ್ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಭಾನುವಾರ ಪ್ರಕಟಿಸಿದರು. ಆಪ್ತ ಕೀಲಾರ ಜಯರಾಮು ಅವರಿಗೆ ಜೆಡಿಎಸ್ ವರಿಷ್ಠರು ಟಿಕೆಟ್ ನಿರಾಕರಿಸಿದ ಕಾರಣ ಅವರು ಕೆಲ ತಿಂಗಳಿಂದ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದರು.

ವೀರಶೈವ- ಲಿಂಗಾಯತ ಮಠಾಧೀಶರಿಂದ ಮುಖ್ಯಮಂತ್ರಿ ಭೇಟಿ

ಪೀರ್ ಬಾಷಾ ದರ್ಗಾ ವಶಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವ ಕಲ್ಯಾಣದಲ್ಲಿರುವ ಪೀರ್ ಬಾಷಾ ದರ್ಗಾ ಮೂಲ ಅನುಭವ ಮಂಟಪವಾಗಿದ್ದು, ಅದನ್ನು ತಕ್ಷಣ ವಶಕ್ಕೆ ಪಡೆದು ರಕ್ಷಣೆ ಮಾಡಬೇಕು' ಎಂದು ವೀರಶೈವ- ಲಿಂಗಾಯತ ಮಠಾಧೀಶರ ನಿಯೋಗ ಮುಖ್ಯಮಂತ್ರಿ ಅವರಿಗೆ ಆಗ್ರಹಪಡಿಸಿದೆ.

ಬಸವಕಲ್ಯಾಣದ ಪೀರ್ ಬಾಷಾ ದರ್ಗಾವನ್ನು ಸರ್ಕಾರದ ಸ್ವಾಧೀನಕ್ಕೆ ಪಡೆಯುವಂತೆ ಒತ್ತಾಯಿಸಿ ಮುಖ್ಯಮಂತ್ರಿಗೆ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನೇತೃತ್ವದಲ್ಲಿ ವಿವಿಧ ಮಠಾಧೀಶರು ಮನವಿ ಸಲ್ಲಿಸಿದರು. ಶಾಸಕ ಶರಣು ಸಲಗಾರ ಇದ್ದರು

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ 20ಕ್ಕೂ ಹೆಚ್ಚು ಮಠಾಧೀಶರ ನಿಯೋಗ, 'ಆ ದರ್ಗಾದಲ್ಲಿ ಅನುಭವ ಮಂಟಪದ ಕುರುಹು ಪತ್ತೆಯಾಗಿದೆ. ಅದನ್ನು ಸರ್ಕಾರ ಸ್ವಾಧೀನಕ್ಕೆ ಪಡೆಯಬೇಕು. ಪುರಾತತ್ವ ಇಲಾಖೆಯ ಮೂಲಕ ಅಧ್ಯಯನ ನಡೆಸಬೇಕು' ಎಂದು ಒತ್ತಾಯಿಸಿ ಮನವಿ ಸಲ್ಲಿಸಿತು.

'ದರ್ಗಾದಲ್ಲಿರುವ ಕುರುಹುಗಳನ್ನು ರಕ್ಷಣೆ ಮಾಡಬೇಕು. ಅದನ್ನು ಜಗತ್ತಿನ ಪ್ರಥಮ ಸಂಸದೀಯ ಕ್ಷೇತ್ರ ಎಂದು ಘೋಷಿಸಬೇಕು. ಅನುಭವ ಮಂಟಪ ಕಾರಿಡಾರ್ ಹೆಸರಿನಲ್ಲಿ ಸ್ಥಳವನ್ನು ಅಭಿವೃದ್ಧಿಪಡಿಸಬೇಕು. ಆ ಸ್ಥಳವನ್ನು ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳದಿದ್ದರೆ ಮಠಾಧೀಶರ ನೇತೃತ್ವದಲ್ಲಿ ಹೋರಾಟ ಆರಂಭಿಸಲಾಗುವುದು' ಎಂದು ನಿಯೋಗ ಎಚ್ಚರಿಕೆ ನೀಡಿತು.

ಸಿ.ಎಂ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೀದರ್ ಜಿಲ್ಲೆಯ ತಡೋಳಾ ಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, 'ಪೀರ್ ಬಾಷಾ ದರ್ಗಾದ ಸ್ಥಳದಲ್ಲಿ ಮೂಲ ಅನುಭವ ಮಂಟಪ ಇತ್ತು ಎಂಬುದಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇವೆ. ಈ ಬಗ್ಗೆ ಬೊಮ್ಮಾಯಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ಪುರಾತತ್ವ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ' ಎಂದರು.

'ಜೂನ್ 12ಕ್ಕೆ ಪಾದಯಾತ್ರೆ ನಡೆಸಲು ಉದ್ದೇಶಿಸಲಾಗಿತ್ತು. ಸೋಮವಾರ ನಡೆಯುವ ಚಿಂತನ-ಮಂಥನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ತಿಳಿಸಿದರು.

ಬಸವಕಲ್ಯಾಣದ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಬಳ್ಳಾರಿ ಕಲ್ಯಾಣ ಮಠದ ಶ್ರೀಕಲ್ಯಾಣ ಸ್ವಾಮೀಜಿ, ಬಸವಕಲ್ಯಾಣ ಶಾಸಕ ಶರಣು ಸಲಗಾರ, ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ ಕಂಕಣವಾಡಿ ನಿಯೋಗದಲ್ಲಿದ್ದರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ವಿದೇಶಿ ವಿವಿಗಳಲ್ಲಿ ಉನ್ನತ ವ್ಯಾಸಂಗ

ಪ್ರವೇಶ ಪ್ರಕ್ರಿಯೆ ಹೇಗೆ?

ಪದವಿ, ಸ್ನಾತಕೋತ್ತರ ಪದವಿ ಅಧ್ಯಯನಕ್ಕಾಗಿ ವಿದೇಶಕ್ಕೆ ತೆರಳುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದೇಶಿ ವಿವಿಗಳಲ್ಲಿ ಪ್ರವೇಶ ಪ್ರಕ್ರಿಯೆ ಹೇಗಿದೆ? ಕೋರ್ಸ್‌ಗಳ ಆಯ್ಕೆ, ಅಂದಾಜು ಖರ್ಚು-ವೆಚ್ಚ ಕುರಿತ ಮಾಹಿತಿ ಇಲ್ಲಿದೆ.

ಸೋಮಶೇಖರ್ ನಾಯಕ್

ಉತ್ತಮ ಮೂಲ ಸೌಕರ್ಯ, ತಾಂತ್ರಿಕ ಜ್ಞಾನ ಹಾಗೂ ಪ್ರಯೋಗಾಧಾರಿತ ಶಿಕ್ಷಣ ವ್ಯವಸ್ಥೆ ಹೊಂದಿರುವ ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳುವ ಭಾರತೀಯರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಅದರಲ್ಲೂ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕಾಗಿ ತೆರಳುತ್ತಿರುವವರ ಸಂಖ್ಯೆ ಸ್ವಲ್ಪ ಹೆಚ್ಚೇ ಇದೆ. ಉನ್ನತಮಟ್ಟದ ಕಲಿಕೆ ಹಾಗೂ ಹೆಚ್ಚು ವೇತನದ ಉದ್ಯೋಗದ ಖಾತರಿ –ಈ ಅಂಶಗಳು ವಿದೇಶಿ ವಿವಿಗಳ ಆಕರ್ಷಣೆಗೆ ಪ್ರಮುಖ ಕಾರಣ.

ಯಾವ್ಯಾವ ಕೋರ್ಸ್‌ಗಳಿವೆ?

ವಿದೇಶಿ ವಿವಿಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ(ಪಿ.ಜಿ) ಹಾಗೂ ಪಿಎಚ್‌.ಡಿ ಅಧ್ಯಯನಕ್ಕೆ ಅವಕಾಶವಿದೆ. ನಮ್ಮಲ್ಲಿರುವಂತೆಯೇ ಆ ವಿವಿಗಳಲ್ಲೂ ಮೂರು, ನಾಲ್ಕು ಹಾಗೂ ಐದು ವರ್ಷಗಳ ಪದವಿ ಕೋರ್ಸ್ ಗಳಿವೆ. ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಮೂಲ ಮತ್ತು ಅನ್ವಯಿಕ (ಪ್ಯೂರ್ ಆ್ಯಂಡ್ ಅಪ್ಲೈಡ್ ಸೈನ್ಸ್) ವಿಜ್ಞಾನ, ಮಾನವಿಕ (ಹ್ಯೂಮಾನಿಟೀಸ್), ಕಾನೂನು, ಫೈನ್ ಆರ್ಟ್, ಫಾರ್ಮಸಿ ಸೇರಿದಂತೆ ಸಾಮಾನ್ಯ ಪದವಿ ಕೋರ್ಸ್‌ಗಳೂ ಇವೆ.

ಪದವಿ ಕಲಿಕೆಗೆ ಅರ್ಹತೆ

ವಿದೇಶದ ವಿವಿಗಳಲ್ಲಿ ಪದವಿಗೆ ಸೇರ ಬಯಸುವವರು ಪ್ರವೇಶ ಪರೀಕ್ಷೆ ಬರೆಯಬೇಕು. ಯಾವುದೇ ಪದವಿ ಪ್ರವೇಶಕ್ಕೆ ಎಸ್ ಎ ಟಿ (Scholastic Assessment Test) ಅರ್ಹತಾ ಪರೀಕ್ಷೆಯಲ್ಲಿ ನಿಗದಿತ ಅಂಕ ಪಡೆಯಬೇಕು. ಕಾನೂನು ಪದವಿ ಪ್ರವೇಶಕ್ಕೆ ಎಲ್‌ಎಸ್‌ಎಟಿ(ಲಾ ಸ್ಕೂಲ್ ಅಡ್ಮಿಷನ್ ಟೆಸ್ಟ್) ಅರ್ಹತಾ ಪರೀಕ್ಷೆಯಲ್ಲೂ ನಿಗದಿತ ಅಂಕ ಪಡೆಯಬೇಕು. ಪ್ರತಿಷ್ಠಿತ ವಿವಿಗಳು ಈ ಪ್ರವೇಶ ಪರೀಕ್ಷೆಯ ಅಂಕವನ್ನು ಆಯ್ಕೆಗೆ ಪರಿಗಣಿಸುತ್ತವೆ(ಕೆಲವೊಂದು ವಿವಿಗಳು SAT ಹಾಗೂ LSAT ಅಂಕವನ್ನು ಪರಿಗಣಿಸದೆ ಪದವಿ ಪೂರ್ವ(10 + 2) ಪರೀಕ್ಷೆಯ ಅಂಕದ ಆಧಾರದ ಮೇಲೆ ಪ್ರವೇಶ ಕಲ್ಪಿಸುತ್ತಿವೆ).

ಭಾರತದಲ್ಲಿ ಐಜಿಸಿಎಸ್‌ಇ(ಇಂಟರ್‌ನ್ಯಾಷನಲ್ ಜನರಲ್ ಸರ್ಟಿಫಿಕೆಟ್ ಆಫ್ ಸೆಕೆಂಡರಿ ಎಜುಕೇಷನ್) ಮತ್ತು ಐಬಿ (ಇಂಟರ್‌ನ್ಯಾಷನಲ್ ಬಕಾಲೌರೇಟ್) ಮಂಡಳಿಯ ಶಾಲೆಗಳಲ್ಲಿ ಓದಿದವರಿಗೆ ಯಾವುದೇ ಅರ್ಹತಾ ಪರೀಕ್ಷೆಗಳಲ್ಲದೇ ಕೆಲವು ವಿದೇಶಿ ವಿವಿಗಳಲ್ಲಿ ಪ್ರವೇಶಾವಕಾಶ ನೀಡಲಾಗುತ್ತಿದೆ.

ಸ್ನಾತಕೋತ್ತರ ಪದವಿಗೆ ಅರ್ಹತೆ

ವಿದೇಶಿ ವಿವಿಯಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಪ್ರವೇಶ ಬಯಸುವವರು, ಈ ಕೆಳಗಿನ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ ಸ್ಪರ್ಧಾತ್ಮಕ ಅಂಕ(ಕಾಂಪಿಟೆಂಟ್ ಸ್ಕೋರ್) ಪಡೆಯಬೇಕು;

1. ಜಿಆರ್‌ಇ(ಗ್ರಾಜುಯೇಟ್ ರೆಕಾರ್ಡ್ ಎಕ್ಸಾಮ್-GRE)

ಎಂಜಿನಿಯರಿಂಗ್, ಮೂಲ ಮತ್ತು ಅನ್ವಯಿಕ ವಿಜ್ಞಾನ (Pure and applied science) ಅಧ್ಯಯನ ಮಾಡಲು ಬಯಸುವವರು ಜಿ.ಆರ್.ಇ ಅರ್ಹತಾ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಪರೀಕ್ಷೆಯನ್ನು ಎಜುಕೇಷನಲ್ ಟೆಸ್ಟಿಂಗ್ ಸರ್ವೀಸ್(ETS) ಸಂಸ್ಥೆ ನಡೆಸುತ್ತದೆ. 340 ಅಂಕಗಳ ಈ ಪರೀಕ್ಷೆಯಲ್ಲಿ 290 ಕ್ಕಿಂತ ಹೆಚ್ಚು ಅಂಕಗಳಿಸಿದವರಿಗೆ ವಿಶ್ವದ ಅತ್ಯುತ್ತಮ ಕ್ಯೂಎಸ್, ಯುಎಸ್ ನ್ಯೂಸ್, ಟಿಎಚ್‌ಇ ರ‍್ಯಾಂಕಿಂಗ್‌ನ ವಿವಿಗಳಲ್ಲಿ ಪ್ರವೇಶಾವಕಾಶ ದೊರೆಯುತ್ತದೆ. ಇತ್ತೀಚೆಗೆ ಅಮೆರಿಕ, ಕೆನಡಾ ಸೇರಿದಂತೆ ಕೆಲವು ದೇಶಗಳ ವಿವಿಗಳು ಜಿಆರ್‌ಇ ಅಂಕವನ್ನು ಆಯ್ಕೆ ಮಾನದಂಡವಾಗಿ ಪರಿಗಣಿಸುತ್ತಿಲ್ಲ.

2. ಜಿಎಂಎಟಿ(ಗ್ರ್ಯಾಜ್ಯುಯೇಟ್ ಮ್ಯಾನೇಜ್‌ಮೆಂಟ್ ಅಡ್ಮಿಷನ್ ಟೆಸ್ಟ್-GMAT)

ಜಿಮ್ಯಾಟ್ ಪ್ರವೇಶ ಪರೀಕ್ಷೆಯನ್ನು ಗ್ರಾಜ್ಯುಯೇಟ್ ಮ್ಯಾನೇಜ್‌ಮೆಂಟ್ ಅಡ್ಮಿಷನ್ ಕೌನ್ಸಿಲ್(GMAC) ನಡೆಸುತ್ತದೆ. ಈ ಪರೀಕ್ಷೆಯ ಅಂಕಗಳನ್ನು ವಿಶ್ವದ 2300 ಕ್ಕೂ ಹೆಚ್ಚು ಬ್ಯುಸಿನೆಸ್ ಸ್ಕೂಲ್‌ಗಳು ಆಯ್ಕೆಯ ಮಾನದಂಡವಾಗಿ ಪರಿಗಣಿಸುತ್ತವೆ.

ಪ್ರತಿಷ್ಠಿತ ವಿದೇಶಿ ವಿವಿಗಳಲ್ಲಿ ಎಂಬಿಎ ಹಾಗೂ ಇತರೆ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿಗೆ ಪ್ರವಶಾವಕಾಶ ಬಯಸುವವರು 800 ಅಂಕದ ಜಿಮ್ಯಾಟ್ ಪರೀಕ್ಷೆಯಲ್ಲಿ ಕನಿಷ್ಠ 400 ಕ್ಕಿಂತ ಹೆಚ್ಚಿನ ಅಂಕಗಳಿಸಿರಬೇಕು. ಉತ್ತಮ ಅಂಕ ಪಡೆದರೆ ಉತ್ತಮ ಗ್ಲೋಬಲ್ ರ‍್ಯಾಂಕಿಂಗ್ ವಿವಿಗಳಲ್ಲಿ ಪ್ರವೇಶಾವಕಾಶ ಲಭ್ಯ. ಆದರೆ ಇತ್ತೀಚೆಗೆ ಕೆಲ ದೇಶಗಳ ವಿವಿಗಳು GMAT ಅಂಕವನ್ನು ಪರಿಗಣಿಸದೆ ಪದವಿಯಲ್ಲಿ ಗಳಿಸಿದ ಅಂಕ ಹಾಗೂ ಸಂದರ್ಶನದ ಅಂಕವನ್ನು ಆಯ್ಕೆ ಮಾನದಂಡವನ್ನಾಗಿ ಪರಿಗಣಿಸುತ್ತಿವೆ.

3. ಭಾಷಾ ಪರೀಕ್ಷೆಗಳು

- ಐಇಎಲ್‌ಟಿಎಸ್(International English Language Testing System–IELTS): ಆಂಗ್ಲ ಭಾಷಾ ಪ್ರೌಢಿಮೆ ಪರೀಕ್ಷೆಗಾಗಿ ಐಇಎಲ್‌ಟಿಎಸ್ ಅರ್ಹತಾ ಪರೀಕ್ಷೆ ನಡೆಸಲಾಗುತ್ತದೆ. ಅಮೆರಿಕ, ಬ್ರಿಟನ್, ಕೆನಡಾ, ಐರ್ಲೆಂಡ್ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳು ಈ ಪ್ರವೇಶ ಪರೀಕ್ಷೆಯ ಆಯ್ಕೆಯನ್ನು ಪರಿಗಣಿಸುತ್ತವೆ. ಈ ಭಾಷಾ ಪರೀಕ್ಷೆಯಲ್ಲಿ 6.5 ಕ್ರೆಡಿಟ್ ಸ್ಕೋರ್‌ಗಿಂತ ಹೆಚ್ಚು ಅಂಕಗಳಿಸಿದವರನ್ನು ಕಾಂಪಿಟೆಂಟ್ ಯೂಸರ್ (Competent User) ಎಂದು ಪರಿಗಣಿಸಿ ಅರ್ಹತೆ ನೀಡಲಾಗುತ್ತದೆ.
- ಟಿಒಇಎಫ್‌ಎಲ್ (Test of English as a Foreign Language –TOEFL): ಜಗತ್ತಿನ ಅತಿ ಪ್ರಸಿದ್ಧ ಭಾಷಾ ಅರ್ಹತಾ ಪರೀಕ್ಷೆಯಲ್ಲಿ ಟೊಫೆಲ್(TOEFL) ಕೂಡ ಒಂದು. ಇಂಗ್ಲಿಷ್ ಭಾಷಾ ಸಾಮರ್ಥ್ಯ ಪರೀಕ್ಷಿಸುವ 120 ಅಂಕಗಳ ಈ ಪರೀಕ್ಷೆ ಯಲ್ಲಿ 80 ಕ್ಕಿಂತ ಹೆಚ್ಚು ಅಂಕಗಳಿಸಿದವರನ್ನು ಕಾಂಪಿಟೆಂಟ್ ಯೂಸರ್ (competent User) ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿ ಪಿಬಿಟಿ(PBT–) ಭಾಷಾ ಅರ್ಹತಾ ಪರೀಕ್ಷೆಯಲ್ಲಿ 645 ಅಂಕಕ್ಕೆ 550ಕ್ಕಿಂತ ಹೆಚ್ಚು ಅಂಕಗಳಿಸಿದರೆ ಅರ್ಹ ಭಾಷಾ ಪ್ರಾವೀಣ್ಯ ಹೊಂದಿರುವವರೆಂದು ಪರಿಗಣಿಸಲಾಗುತ್ತದೆ.

ಎಫ್‌ಎಂಜಿಇ ಕಡ್ಡಾಯ

ರಷ್ಯಾ, ಕಜಕಿಸ್ತಾನ,ಉಕ್ರೇನ್, ಪಾಕಿಸ್ತಾನ, ಚೀನಾ, ಬಾಂಗ್ಲಾದೇಶ, ಫಿಲಿಪ್ಪೀನ್ಸ್ ಸೇರಿದಂತೆ ಯಾವುದೇ ರಾಷ್ಟ್ರಗಳಲ್ಲಿ ವೈದ್ಯಕೀಯ ಪದವಿ (ಎಂಬಿಬಿಎಸ್) ಪೂರ್ಣಗೊಳಿಸಿದ ಭಾರತೀಯ ವಿದ್ಯಾರ್ಥಿಗಳು, ತಾವು ಕಲಿತ ಪದವಿಗೆ ಇಲ್ಲಿ ಮಾನ್ಯತೆ ದೊರೆಯಲು ಫಾರಿನ್ ಮೆಡಿಕಲ್ ಗ್ರಾಜುಯೇಟ್ ಎಕ್ಸಾಮಿನೇಷನ್ (FMGE) ನಲ್ಲಿ ಕನಿಷ್ಠ ಅರ್ಹತಾ ಅಂಕಗಳೊಂದಿಗೆ ತೇರ್ಗಡೆಯಾಗಬೇಕು. ಪ್ರಸ್ತುತ ಎಫ್‌ಎಂಜಿಇ ಪ್ರವೇಶ ಪರೀಕ್ಷೆ ಉತ್ತೀರ್ಣವಾಗುತ್ತಿರುವ ವಿದ್ಯಾರ್ಥಿಗಳ ಪ್ರಮಾಣ ಶೇ 16 ರಿಂದ ಶೇ 18ರ ಆಸುಪಾಸಿನಲ್ಲಿದೆ.

ಕೋರ್ಸ್, ದೇಶಗಳ ಆಯ್ಕೆ

ಭಾರತದ ಹೆಚ್ಚಿನ ಅಭ್ಯರ್ಥಿಗಳು ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಮೂಲ ಮತ್ತು ಅನ್ವಯಿಕ ವಿಜ್ಞಾನ ವಿಷಯಗಳಲ್ಲಿ ಪಿ.ಜಿಗಾಗಿ ವಿದೇಶಗಳಿಗೆ ತೆರಳುತ್ತಾರೆ. ಅಲ್ಪ ಪ್ರಮಾಣದಲ್ಲಿ ಅಕೌಂಟಿಂಗ್ ಅಂಡ್ ಫೈನಾನ್ಸ್, ಕಾನೂನು, ಇಂಟರ್‌ನ್ಯಾಷನಲ್ ಕಾಮರ್ಸ್, ಮೆಡಿಸನ್, ಫೈನ್ ಆರ್ಟ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ಜರ್ಮನಿ, ಕೆನಡಾ ದೇಶಗಳು ವಿದೇಶಿ ಅಧ್ಯಯನದ ಹಾಟ್ ಸ್ಪಾಟ್‌ಗಳಾಗಿವೆ. ಭಾರತದ ಹೆಚ್ಚಿನ ವಿದ್ಯಾರ್ಥಿಗಳು ಅಮೆರಿಕ, ಇಂಗ್ಲೆಂಡ್, ಕೆನಡಾ, ಜರ್ಮನಿ, ಆಸ್ಟ್ರೇಲಿಯಾ, ಸ್ವೀಡನ್ ದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಲ್ಪ ಪ್ರಮಾಣದಲ್ಲಿ ಮಾತ್ರ ಫ್ರಾನ್ಸ್, ಇಟಲಿ, ಐರ್ಲೆಂಡ್, ಸ್ವೀಡನ್, ನ್ಯೂಜಿಲೆಂಡ್ ದೇಶಗಳಿಗೆ ಹೋಗುತ್ತಾರೆ. ಇಂಗ್ಲೆಂಡ್‌ನಲ್ಲಿ ಎರಡು ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅಮೆರಿಕ, ಆಸ್ಟ್ರೇಲಿಯಾ, ಕೆನಡಾದಲ್ಲಿ ನಾಲ್ಕು ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಅರ್ಜಿ ಸಲ್ಲಿಕೆಯ ಅವಧಿ

ವಿದೇಶಿ ವಿವಿಗಳು ವರ್ಷದಲ್ಲಿ ಎರಡು ಬಾರಿ ಪ್ರವೇಶ ಅವಕಾಶ ಕಲ್ಪಿಸುತ್ತವೆ. ಮೊದಲನೆಯದು ಜನವರಿ-ಫೆಬ್ರವರಿಯಲ್ಲಿ. ಅದನ್ನು ಸ್ಪ್ರಿಂಗ್ ಸೀಸನ್ (Spring Season) ಎನ್ನುತ್ತಾರೆ. ಎರಡನೆಯದು ಆಗಸ್ಟ್-ಸೆಪ್ಟೆಂಬರ್‌ನಲ್ಲಿ. ಇದಕ್ಕೆ ಫಾಲ್ ಸೀಸನ್(Fall Season) ಎನ್ನುತ್ತಾರೆ. ಯಾವುದೇ ಸೀಸನ್‌ನಲ್ಲಿ ಪ್ರವೇಶಕ್ಕಾಗಿ ಕನಿಷ್ಠ 12 ತಿಂಗಳು ಮುಂಚಿತವಾಗಿ ಅರ್ಜಿ ಆಹ್ವಾನಿಸಲಾಗುತ್ತದೆ. 2023ರ ಸ್ಪ್ರಿಂಗ್ ಸೀಸನ್ (ಜನವರಿ-ಫೆಬ್ರವರಿ) ಆಯ್ಕೆ ಬಯಸುವವರು 2022ರ ಜನವರಿ-ಫೆಬ್ರವರಿಯಿಂದಲೇ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಜೂನ್ ಅಥವಾ ಜುಲೈ ತಿಂಗಳಲ್ಲಿ ಪ್ರವೇಶಾವಕಾಶ ಪತ್ರ (Offer Letter) ನೀಡಲಾಗುತ್ತದೆ ಮೂರು ತಿಂಗಳು ವೀಸಾ ಪ್ರಕ್ರಿಯೆಗೆ ಅವಕಾಶವಿರುತ್ತದೆ. ಇದು ಬಹುತೇಕ ವಿದೇಶಿ ವಿವಿಗಳು ಅನುಸರಿಸುವ ಸಾಮಾನ್ಯ ವೇಳಾಪಟ್ಟಿ. ಕೆಲವು ವಿವಿಗಳಲ್ಲಿ ವ್ಯತ್ಯಾಸವಿರಲೂಬಹುದು.

ಖರ್ಚು ವೆಚ್ಚ ಅಂದಾಜು

ವಿದೇಶಿ ಉನ್ನತ ವ್ಯಾಸಂಗ ದುಬಾರಿ. ವಿದೇಶಿ ಕರೆನ್ಸಿ ದರ ಹೆಚ್ಚಾದಂತೆ ವರ್ಷದಿಂದ ವರ್ಷಕ್ಕೆ ವಿದೇಶದಲ್ಲಿ ಉನ್ನತ ವ್ಯಾಸಂಗದ ವೆಚ್ಚವೂ ಹೆಚ್ಚುತ್ತಿದೆ. ಸದ್ಯ ವಿದೇಶದಲ್ಲಿ ಅಧ್ಯಯನ ಮಾಡಲು ವಿವಿ ಶುಲ್ಕ, ಜೀವನ ನಿರ್ವಹಣೆ, ಸಾರಿಗೆ, ವೀಸಾ, ಜೀವ ವಿಮಾ ಇತರೆ ವೆಚ್ಚ ಸೇರಿ ಅಮೆರಿಕದಲ್ಲಿ 2 ವರ್ಷದ ಸ್ನಾತಕೋತ್ತರ ಪದವಿಗೆ ₹50 ಲಕ್ಷದಿಂದ ₹60 ಲಕ್ಷ ವೆಚ್ಚವಾಗುತ್ತದೆ. ಆಸ್ಟ್ರೇಲಿಯಾದಲ್ಲಿಯೂ ₹45 ಲಕ್ಷದಿಂದ ₹55 ಲಕ್ಷ, ಬ್ರಿಟನ್‌ನಲ್ಲಿ 2 ಸೆಮಿಸ್ಟರ್ ಪದವಿಗೆ ₹30 ರಿಂದ ₹ 40 ಲಕ್ಷ ಹಾಗೂ ಕೆನಡಾ, ಐರ್ಲೆಂಡ್, ಜರ್ಮನಿ, ಸ್ವೀಡನ್‌ಗಳಲ್ಲಿ ₹ 25 ಲಕ್ಷದಿಂದ ₹30 ಲಕ್ಷ ವೆಚ್ಚವಾಗುತ್ತದೆ(ಇದು ಅಂದಾಜು ವೆಚ್ಚವಾಗಿದೆ).

ಆರ್ಥಿಕ ದೃಷ್ಟಿಯಿಂದ ಜರ್ಮನಿ, ಐರ್‌ಲ್ಯಾಂಡ್, ಸ್ವೀಡನ್ ದೇಶಗಳು ಉತ್ತಮ. ಉತ್ತಮ ಉದ್ಯೋಗಿಕ ಭವಿಷ್ಯದ ದೃಷ್ಟಿಯಿಂದ ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ ದೇಶಗಳ ವೆಚ್ಚಕ್ಕೆ ಹೊಂದಿಕೊಳ್ಳುವವರ ಸಂಖ್ಯೆ ಹೆಚ್ಚಳವಾಗಿದೆ. ❖

ನೀವೇ ಮಾಡಿ ನೋಡಿ



ದೂರದರ್ಶಕ ತಯಾರಿಕೆ ಹೇಗೆ?

ಎಚ್‌.ಎಸ್‌.ಟಿ. ಸ್ವಾಮಿ

ದೂರದರ್ಶಕ ಅಥವಾ ಟೆಲಿಸ್ಕೋಪ್ ಎಂದು ಕೂಡಲೇ ನೆನಪಿಗೆ ಬರುವುದು ವಿಜ್ಞಾನಿ ಗೆಲಿಲಿಯೊ ಹೆಸರು. ಏಕೆಂದರೆ, ನಿಮ್ನ ಮತ್ತು ಪೀನಮಸೂರಗಳನ್ನು ಉಪಯೋಗಿಸಿ ದೂರದರ್ಶಕವನ್ನು ತಯಾರಿಸಿದ ಮೊದಲ ವಿಜ್ಞಾನಿ ಅವರು.
ದೂರದಲ್ಲಿರುವ ವಸ್ತುಗಳನ್ನು ತೀರ ಸಮೀಪದಿಂದ ನೋಡುವಂತಹ ಈ ದೂರದರ್ಶಕವನ್ನು ಕಂಡು ಹಿಡಿದ ಗೆಲಿಲಿಯೊಗೆ ಅಭಿನಂದನೆ ಸಲ್ಲಿಸಬೇಕು.

ಅಂದ ಹಾಗೆ, ಈ ದೂರದರ್ಶಕಗಳಲ್ಲಿ ಬೇರೆ ಬೇರೆ ವಿಧಗಳಿವೆ. ಮಸೂರಗಳನ್ನು ಉಪಯೋಗಿಸಿ ತಯಾರಿಸಿದ ದೂರದರ್ಶಕಗಳಿಗೆ ವಕ್ರೀಭವನ ದೂರದರ್ಶಕ ಎನ್ನುತ್ತಾರೆ. ನಿಮ್ನ ದರ್ಪಣ ಅಂದರೆ ಕನ್ನಡಿ ಬಳಸಿ ತಯಾರಿಸುವುದಕ್ಕೆ ಪ್ರತಿಫಲನ ದೂರದರ್ಶಕಗಳು ಎಂದೂ ಕರೆಯುತ್ತಾರೆ.

ದೂರದರ್ಶಕದ ಸಾಮರ್ಥ್ಯ ಅಥವಾ ಗಾತ್ರವನ್ನು ಸಾಮಾನ್ಯವಾಗಿ ಆಬ್ಜೆಕ್ಟಿವ್ ಲೆನ್ಸ್(objective lens) ಅಂದರೆ ವಸ್ತು ಮಸೂರದ ವ್ಯಾಸದಿಂದ ಸೂಚಿಸುತ್ತಾರೆ. ದೂರದರ್ಶಕದ ಸಾಮರ್ಥ್ಯವು, ಮಸೂರದ ಗಾತ್ರ ಹೆಚ್ಚಾದಂತೆ ಹೆಚ್ಚುತ್ತಾ ಹೋಗುತ್ತದೆ.

ಅಕ್ಷಿ ಮಸೂರ(eye piece)

ಸಾಮಾನ್ಯವಾಗಿ M = F/fe ಸೂತ್ರವನ್ನು ದೂರದರ್ಶಕ ಒಳಗೊಂಡಿರುತ್ತದೆ. ಅಂದರೆ M ಪ್ರತಿಬಿಂಬ, F ಸಂಗಮದೂರ (ಫೋಕಲ್ ಲೆನ್ತ್), fe ನೇತ್ರ ಮಸೂರದ(eye piece)ಸಂಗಮ ದೂರ ಎಂದು ತಿಳಿಯಬೇಕು.

ಈಗ ನಾವು ಮಸೂರಗಳನ್ನು ಬಳಸಿ ಸರಳವಾಗಿ ತಯಾರಿಸಬಹುದಾದ ವಕ್ರೀಭವನ ದೂರದರ್ಶಕ ರಚನಾ ವಿಧಾನ ತಿಳಿಯೋಣ.

ಎಂಡ್‌ಕ್ಯಾಪ್‌ನಲ್ಲಿ ಜೋಡಿಸಿರುವ ವಸ್ತು ಮಸೂರ (objective lense)

ಚಿತ್ರಗಳು: ಲೇಖಕರವು

ಬೇಕಾಗುವ ಪರಿಕರಗಳು

1. ಪೀನಮಸೂರ 50 ಸೆಂ. ಮೀ ಸಂಗಮದೂರ(F L)
2. 10x ಅಕ್ಷಿ ಮಸೂರ (eye piece)
3. 2 ಇಂಚು ವ್ಯಾಸದ ಪಿ.ವಿ.ಸಿ.ಕೊಳವೆ (50 ಸೆಂ. ಮೀ ಸಂಗಮದೂರ)
4. ಎರಡು ಪೈಪ್ ತುದಿ ಮುಚ್ಚುವ ಮುಚ್ಚಳ (endcap)
5. 15 ಸೆಂ. ಮೀ ಉದ್ದದ 3/4 ಇಂಚು ಪಿ.ವಿ.ಸಿ ಕೊಳವೆ.

ತಯಾರಿಸುವ ವಿಧಾನ

- 50 ಸೆಂ. ಮೀ ಉದ್ದದ ಪಿ.ವಿ.ಸಿ ಕೊಳವೆಯನ್ನು ಸರಿಯಾಗಿ ಕತ್ತರಿಸಿಕೊಳ್ಳಿ.
- ಸುಮಾರು 50 ಸೆಂ. ಮೀ ಸಂಗಮದೂರದ ವಸ್ತು ಮಸೂರವನ್ನು(objective lens) ತೆಗೆದುಕೊಂಡು ಸಂಗಮದೂರ ಕಂಡು ಹಿಡಿದು, ಒಂದು end cap ನಲ್ಲಿ ಮಸೂರಕ್ಕಿಂತ ಸ್ವಲ್ಪ ಅಗಲದ ರಂಧ್ರ ಮಾಡಿ ವಸ್ತು ಮಸೂರವನ್ನುಸಿಕ್ಕಿಸಿ.
- ವಸ್ತು ಮಸೂರ ಸಿಕ್ಕಿಸಿದ ಎಂಡ್‌ಕ್ಯಾಪ್ ಅನ್ನು ಕೊಳವೆಯ ಒಂದು ಕಡೆ ಫಿಕ್ಸ್ ಮಾಡಿ.
- ಈಗ ವಸ್ತು ಮಸೂರವನ್ನು 15 ಸೆಂ.ಮೀ ಉದ್ದದ 3/4 ಇಂಚಿನ ಕೊಳವೆಯ ಒಂದು ಭಾಗಕ್ಕೆ ಸಿಕ್ಕಿಸಿ. ಅದನ್ನು ರಂಧ್ರ ಮಾಡಿರುವ ಇನ್ನೊಂದು ಎಂಡ್ ಕ್ಯಾಪ್‌ಗೆ ಸೇರಿಸಿ, ಹಾಗೆಯೇ ದೊಡ್ಡ ಕೊಳವೆಗೆ ಸಿಕ್ಕಿಸಿ. ಈಗ ವಕ್ರೀಭವನ ದೂರದರ್ಶಕ ತಯಾರಿಯಾಯಿತು.
- ದೂರದರ್ಶಕದ ಅಕ್ಷಿ ಮಸೂರ (Eye piece) ಇರುವ ಭಾಗದಿಂದ ದೂರದ ವಸ್ತುಗಳನ್ನು ನೋಡಿ. ವಸ್ತುಗಳು ಸ್ಪಷ್ಟವಾಗಿ ಕಾಣುವ ತನಕ ಅಕ್ಷಿ ಮಸೂರವನ್ನು ಹಿಂದಕ್ಕೆ ಮುಂದಕ್ಕೆ ಸರಿದಾಡಿಸಿ. ದೂರದ ವಸ್ತುಗಳು ತುಂಬಾ ಹತ್ತಿರಕ್ಕೆ ಬಂದಂತೆ ಕಾಣುತ್ತವೆ.
- ರಾತ್ರಿ ವೇಳೆ ಈ ರೀತಿಯ ಗೆಲಿಲಿಯೊ ದೂರದರ್ಶಕದ ಮೂಲಕ ಚಂದ್ರನ ಮೇಲ್ಮೈ, ಕಂದಕಗಳು, ಗುಡ್ಡ ಬೆಟ್ಟಗಳನ್ನು ಸ್ಪಷ್ಟವಾಗಿ ನೋಡಬಹುದು. ಇದನ್ನು ಪಕ್ಷಿ ವೀಕ್ಷಣೆಗೆ ಬಳಸಬಹುದು.
- ಆಕ್ರೊಮ್ಯಾಟಿಕ್ ಲೆನ್ಸ್(Achromatic lens) ಬಳಸಿದರೆ ಇನ್ನೂ ಉತ್ತಮ ದೂರದರ್ಶಕ ತಯಾರಿಸಬಹುದು. ಇದು ದೊರೆಯುವುದು ದುರ್ಲಭ.

ದೂರದರ್ಶಕ ತಯಾರಿ ಕುರಿತ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9448565534 ❖



ದೂರದರ್ಶಕದ ರೇಖಾಚಿತ್ರ

ಚಿತ್ರ: ಭಾವು ಪತ್ತಾರ್

‘ಎನ್‌ಡಿಎ’ಗೆ ಅರ್ಜಿ ಆಹ್ವಾನ

ಭಾರತದ ಹಲವು ಯುವಕರು ಸೇನೆಯಯಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವ ಕನಸು ಕಾಣುತ್ತಾರೆ. ಅಂಥವರ ಕನಸನ್ನು ನನಸು ಮಾಡುತ್ತದೆ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ರಾಷ್ಟ್ರೀಯ ರಕ್ಷಣಾ ಸಂಸ್ಥೆ). ಅಷ್ಟೇ ಅಲ್ಲ, ಇದು ಪ್ರತಿಭಾವಂತ ಯುವಕರನ್ನು ರಾಷ್ಟ್ರದ ಸ್ವತ್ತುಗಳನ್ನಾಗಿ ನಿರ್ಮಿಸುವ ಪ್ರತಿಷ್ಠದ ಶೈಕ್ಷಣಿಕ ಸಂಸ್ಥೆ.

ಎನ್‌ಡಿಎ ಪೂರ್ಣಗೊಳಿಸಿದ ಅಭ್ಯರ್ಥಿಗಳು ರಾಷ್ಟ್ರದ ಮೂರು ರಕ್ಷಣಾ ಪಡೆಗಳಲ್ಲಿ ಲೆಫ್ಟಿನೆಂಟ್, ಸಬ್-ಲೆಫ್ಟಿನೆಂಟ್, ಫ್ಲೈಯಿಂಗ್ ಆಫೀಸರ್ ಸೇರಿದಂತೆ ಪ್ರಮುಖ ಪದವಿಗಳಿಗೆ ಪ್ರವೇಶ ಪಡೆಯುವ ಅವಕಾಶವಿರುತ್ತದೆ.

ಪ್ರತಿ ವರ್ಷದಂತೆ ಈ ವರ್ಷವೂ ಎನ್‌ಡಿಎ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಮೇ18ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದೆ. ಜೂನ್ 7 ಅರ್ಜಿ ಸಲ್ಲಿಸಲು ಕೊನೆಯ ದಿನ. ಸೆಪ್ಟೆಂಬರ್ 4ರಂದು ಪರೀಕ್ಷೆ ನಡೆಯಲಿದೆ.

ಶೈಕ್ಷಣಿಕ ಅರ್ಹತೆಗಳು: ಪ್ರಸಕ್ತ ಸಾಲಿನಲ್ಲಿ 12ನೇ ತರಗತಿಯಲ್ಲಿ ಓದುತ್ತಿರುವ ಮತ್ತು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪದವಿಪೂರ್ವ ಶಿಕ್ಷಣದಲ್ಲಿ ಭೌತ, ರಸಾಯನ ಮತ್ತು ಗಣಿತ ವಿಜ್ಞಾನವನ್ನು ಅಧ್ಯಯನ ಮಾಡಿರಬೇಕು.

ವಯೋಮಿತಿ: ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು, ಜನವರಿ 02, 2004ರಿಂದ ಜನವರಿ 01, 2007ರ ನಡುವೆ ಜನಿಸಿರಬಾರದು. ಅಭ್ಯರ್ಥಿಗಳು ಅವಿವಾಹಿತರಾಗಿರಬೇಕು, ತರಬೇತಿ ಪೂರ್ಣಗೊಳಿಸುವವರೆಗೂ ಅವಿವಾಹಿತರಾಗಿರಬೇಕು.

ಆಯ್ಕೆ ಹಂತಗಳು: ಎರಡು ಹಂತದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಮೊದಲ ಹಂತ ಲಿಖಿತ ಪರೀಕ್ಷೆ, ಎರಡನೇ ಹಂತದಲ್ಲಿ ಸಂದರ್ಶನ ವಿರುತ್ತದೆ.

ಎನ್‌ಡಿಎ ಪ್ರವೇಶಕ್ಕಾಗಿ ಪ್ರತಿ ವರ್ಷ ಎರಡು ಬಾರಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಮೊದಲನೆಯ ಮತ್ತು ಎರಡನೆಯ ಪರೀಕ್ಷೆಗಳ ಆಯ್ಕೆ ಪ್ರಕ್ರಿಯೆಯು ಪ್ರತ್ಯೇಕವಾಗಿರುತ್ತದೆ. ಈ ವರ್ಷದ ಮೊದಲನೆಯ ಅವಧಿಯ ಪ್ರವೇಶ ಪರೀಕ್ಷೆ ಏಪ್ರಿಲ್ ತಿಂಗಳಲ್ಲಿ ನಡೆದಿದೆ. ಇದೀಗ ಎರಡನೇ ಅವಧಿಯ ಪ್ರವೇಶ ಪರೀಕ್ಷೆಯ ಮೂಲಕ 400 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ: https://upsconline.nic.in/tpform1.php#agree

---

ಬಿ.ಎಸ್ಸಿ(ಕೃಷಿ) ಆಯ್ಕೆ ಅನುಕೂಲಕರವೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ಪಿಯುಸಿ (ವಿಜ್ಞಾನ) ಮಾಡಿದ್ದೇನೆ. ಮುಂದೆ ಬಿ.ಎಸ್ಸಿ (ಕೃಷಿ) ಮಾಡಬೇಕು ಎಂದುಕೊಂಡಿದ್ದೇನೆ. ಈ ಕುರಿತು ಮಾಹಿತಿ ನೀಡಿ.

ಪ್ರೀತಿ, ಹೊಸಪೇಟೆ

ಬಿಎಸ್‌ಸಿ (ಕೃಷಿ), ಕೃಷಿ ಉತ್ಪನ್ನಗಳ ವ್ಯವಸಾಯ, ಮಾರಾಟ ಮತ್ತು ನಿರ್ವಹಣೆಗೆ ಬೇಕಾಗುವ ಜ್ಞಾನ ಮತ್ತು ಕೌಶಲಗಳನ್ನು ಕಲಿಸುವ ನಾಲ್ಕು ವರ್ಷದ ಕೋರ್ಸ್. ನಮ್ಮ ದೇಶದಲ್ಲಿ ವಿವಿಧ ಕಾರಣಗಳಿಂದ ಪ್ರತಿ ವರ್ಷ ಶೇ 20 ಕ್ಕೂ ಹೆಚ್ಚು ಬೆಳೆ ನಷ್ಟವಾಗುತ್ತಿದೆ. ಹಾಗಾಗಿ, ಕೃಷಿ ಸಂಬಂಧಿತ ಆಧುನಿಕ ತಂತ್ರಜ್ಞಾನದಿಂದ ಅಧಿಕ ಇಳುವರಿ, ಸಮಯದ ಉಳಿತಾಯ, ಉತ್ಪಾದನಾ ವೆಚ್ಚದ ಕಡಿತ, ಉತ್ಪನ್ನಗಳ ಸಂರಕ್ಷಣೆ, ಸಂಸ್ಕರಣೆ, ಸಾಗಣೆ ಮತ್ತು ಮಾರಾಟ ನಿರ್ವಹಣೆ ಕುರಿತ ಅತ್ಯಂತ ಉಪಯುಕ್ತ ಮಾಹಿತಿಯನ್ನು ಈ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಈ ಕೋರ್ಸ್ ಮಾಡಿರುವ ಪದವೀಧರರಿಗೆ ಹೆಚ್ಚಿನ ಬೇಡಿಕೆಯಿದೆ.

ಈ ಕೋರ್ಸ್ ನಂತರ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಕೃಷಿ ಉದ್ದಿಮೆಗಳು, ಆಹಾರ ಸಂಬಂಧಿತ ಉದ್ದಿಮೆಗಳು, ಸಾವಯವ ಉತ್ಪನ್ನಗಳಿಗೆ ಸಂಬಂಧಿಸಿದ ಉದ್ದಿಮೆಗಳು, ರಸಗೊಬ್ಬರ ಮತ್ತು ಕೀಟನಾಶಕ ಸಂಸ್ಥೆಗಳು, ಕೃಷಿ ಯಂತ್ರೋಪಕರಣಗಳು, ಬ್ಯಾಂಕಿಂಗ್, ಸಂಶೋಧನಾ ಸಂಸ್ಥೆಗಳು, ಪ್ರಯೋಗಾಲಯಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿವೆ. ನಿಮಗೆ ಅಭಿರುಚಿಯಿದ್ದರೆ ಸ್ವಂತವಾಗಿ ಕೃಷಿ ಮಾಡಬಹುದು.

ಪ್ರಮುಖವಾಗಿ, ಈ ಕೋರ್ಸ್ ನಂತರದ ನಿಮ್ಮ ವೃತ್ತಿ ಮತ್ತು ವೈಯಕ್ತಿಕ ಬದುಕಿನ ಕನಸುಗಳ ಬಗ್ಗೆ ಸ್ಪಷ್ಟತೆಯಿರಬೇಕು. ಹಾಗಾಗಿ, ವೃತ್ತಿಯೋಜನೆ ಮಾಡುವ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

2. ನಾನು ಬಿಎಸ್‌ಸಿ ಮಾಡಿದ್ದು, ಮುಂದೆ ಎಂಎಸ್‌ಸಿ (ಭೂಗೋಳ) ಮಾಡಬೇಕೆಂದುಕೊಂಡಿದ್ದೀನಿ. ಈ ಕೋರ್ಸ್ ನಂತರದ ಅವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಎಂಎಸ್ಸಿ(ಭೂಗೋಳ) ಕೋರ್ಸ್ ನಂತರ ಕಾರ್ಟೊಗ್ರಾಫರ್, ಪರಿಸರ ನಿರ್ವಾಹಕ, ಹವಾಮಾನ ಶಾಸ್ತ್ರಜ್ಞ, ನಿಸರ್ಗ ಸಂರಕ್ಷಣಾ ಅಧಿಕಾರಿ, ಮಾಲಿನ್ಯ ವಿಶ್ಲೇಷಕ, ಜನಸಂಖ್ಯಾ ಶಾಸ್ತ್ರಜ್ಞ, ಭೂಮಾಪಕ, ಭೂಗೋಳ ಅಧ್ಯಾಪಕ ಮುಂತಾದ ಹುದ್ದೆಗಳನ್ನು ಸಂಬಂಧಿತ ಕ್ಷೇತ್ರಗಳಲ್ಲಿ ಪಡೆದುಕೊಳ್ಳಬಹುದು. ಯುಪಿಎಸ್ಸಿ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉನ್ನತ ಹುದ್ದೆಗಳನ್ನೂ ಪಡೆದುಕೊಳ್ಳಬಹುದು.

3. ನಾನು 2016ರಲ್ಲಿ ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿ 2018ರಲ್ಲಿ ಪಿಯುಸಿ ಕಾಮರ್ಸ್ ಮಾಡಿದ್ದೇನೆ. 2021ರಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಶೇ 80ರಷ್ಟು ಅಂಕಗಳೊಂದಿಗೆ ಬಿಕಾಂ ಪದವಿ ಪಡೆದಿದ್ದೇನೆ. ಇದೀಗ, ಯುಪಿಎಸ್ಸಿ ಪರೀಕ್ಷೆಗೆ ಓದಲು ಶುರುಮಾಡಿದ್ದೇನೆ. ಆದರೆ, ಯಾವ ಭಾಷೆಯಲ್ಲಿ ಬರೆಯ ಬೇಕು ಎಂದು ಗೊಂದಲ ಇದೆ. ಸಲಹೆ ನೀಡಿ.

ಸತೀಶ್, ಕೋಲಾರ

ಯುಪಿಎಸ್ಸಿ ಪರೀಕ್ಷೆಯನ್ನು ಯಾವ ಭಾಷೆಯಲ್ಲಿ ಬರೆಯಬೇಕೆನ್ನುವ ಪ್ರಶ್ನೆ ಮುಖ್ಯವಾದರೂ ಕಠಿಣವಾದ ಈ ಪರೀಕ್ಷೆಗೆ ಐಚ್ಛಿಕ ವಿಷಯಗಳ ಆಯ್ಕೆ ಮತ್ತು ಈ ವಿಷಯಗಳ ಕುರಿತ ವಿಸ್ತೃತ ಅಧ್ಯಯನ, ಪರೀಕ್ಷೆಗೆ ಸೂಕ್ತ ಕಾಯತಂತ್ರ ಮತ್ತು ತಯಾರಿಗೆ ಹೆಚ್ಚಿನ ಗಮನ ನೀಡಬೇಕು. ಯಾವ ಭಾಷೆಯಲ್ಲಿ ಹೆಚ್ಚಿನ ತಜ್ಞತೆಯಿದ್ದು, ವ್ಯಾಕರಣ ಶುದ್ಧ ಬರವಣಿಗೆ ಸಾಧ್ಯವೋ ಆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಹಾಗಾಗಿ, ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯನ್ನು ಇಂಗ್ಲಿಷ್‌ನಲ್ಲಿ ಬರೆದು ಮುಖ್ಯ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಬಹುದೇ ಎಂದು ಯೋಚಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕರ್ಕೆ ದಿಖಾವ್ಗೊಂಗಿ ಅಥ್ಲೀಟ್ ಸ್ಕಾಲರ್‌ಶಿಪ್ 2022-23

ವಿವರ: ಅನ್‌ಸ್ಟಾಪೆಬಲ್ ಕರ್ಕೆ ದಿಖಾವ್ಗೊಂಗಿ ಅಥ್ಲೀಟ್ ಸ್ಕಾಲರ್‌ಶಿಪ್, ಗೋ ಸ್ಪೋರ್ಟ್ಸ್ ಫೌಂಡೇಶನ್ (ಮಹಿಳಾ ಅಥ್ಲೀಟ್‌ಗಳಿಗಾಗಿ ಇರುವ ಎನ್‌ಜಿಒ) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ ಅರ್ಜಿಗಳನ್ನು ಆಹ್ವಾನಿಸಿದೆ. ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ಕನಸು ಹೊಂದಿರುವವರು ಅರ್ಜಿಗಳನ್ನು ಸಲ್ಲಿಸಬಹುದು.

ಅರ್ಹತೆ: ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ವಿಂಟರ್ ಒಲಿಂಪಿಕ್ಸ್, ಸಾಹಸ, ಮೋಟಾರ್‌ಸ್ಪೋರ್ಟ್‌ಗಳಲ್ಲಿ ಸ್ಪರ್ಧಿಸುವ 13 ಅಥವಾ ಅದಕ್ಕಿಂತ ಹೆಚ್ಚಿಗೆ ವಯಸ್ಸಿನ ಭಾರತೀಯ ಮಹಿಳಾ ಅಭ್ಯರ್ಥಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದಾಗಿದೆ.

ಆರ್ಥಿಕ ನೆರವು: ನಿರ್ದಿಷ್ಟ ಹಣ ಸಹಾಯ ಇಲ್ಲ. ಬದಲಾಗಬಹುದು

ಅರ್ಜಿ ಸಲ್ಲಿಸಲು ಕೊನೆಯ ದಿನ: ಜೂನ್ 24, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ವಿವರ: www.b4s.in/praja/UKS9

ಕೃಪೆ: buddy4study.com

ಸುಭಾಷಿತ

ಸ್ವಾತಂತ್ರ್ಯವು ಮನುಷ್ಯನ ದುಡಿಮೆಯನ್ನು ಬೇಡುತ್ತದೆ. ದುಡಿಯದ ಮನುಷ್ಯನಿಗೆ ಸ್ವಾತಂತ್ರ್ಯ ಇರುವುದಿಲ್ಲ.

–ಹಾ.ಮಾ.ನಾಯಕ

ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಸ್ವಾಗತಾರ್ಹ ಹೆಜ್ಜೆ, ಎಚ್ಚರಿಕೆಯೂ ಬೇಕು

ಬೆಂಗಳೂರು ನಗರದಲ್ಲಿ ರಸ್ತೆಬದಿಗಳಲ್ಲಿ, ರಾಜಕಾಲುವೆಗಳ ಬಳಿ, ಪಾದಚಾರಿ ಮಾರ್ಗಗಳಲ್ಲಿ ಎಲ್ಲೆಂದರಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ. ಪ್ರಯಾಣಿಕರ ತಂಗುದಾಣಗಳ ಬಳಿಯೂ ಇವುಗಳನ್ನು ಸ್ಥಾಪಿಸಲಾಗಿದೆ. ಅನೇಕ ಕಡೆ ಜನರ ಜೀವಕ್ಕೆ ಸಂಚಕಾರ ತರಬಲ್ಲ ಸ್ಥಿತಿಯಲ್ಲಿ ನೆಲಮಟ್ಟದಲ್ಲೇ ವಿದ್ಯುತ್ ಪರಿವರ್ತಕಗಳಿವೆ. ಕಂಬಗಳಲ್ಲಿ ಅಳವಡಿಸುವ ಹಳೆ ಮಾದರಿಯ ವಿದ್ಯುತ್ ಪರಿವರ್ತಕಗಳನ್ನು ಈಗಲೂ ಕೆಲವೆಡೆ ಕಾಣಬಹುದು. ಅವುಗಳಲ್ಲಿ ನೇತಾಡುವ ವಿದ್ಯುತ್ ತಂತಿಗಳು ಅಪಾಯಕ್ಕೆ ಆಹ್ವಾನ ನೀಡುವಂತಿರುತ್ತವೆ. ವಾಹನ ಸವಾರರು, ಪಾದಚಾರಿಗಳು ಇಂತಹ ವಿದ್ಯುತ್ ತಂತಿ ಸ್ಪರ್ಶಿಸುವ ಸಾಧ್ಯತೆಯೂ ಇದೆ. ವಿದ್ಯುತ್ ಪರಿವರ್ತಕಗಳಿಂದ ಪದೇ ಪದೇ ಸಂಭವಿಸುವ ಅವಘಡಗಳಿಂದ ಜನ ರೋಸಿಹೋಗಿದ್ದಾರೆ. ಜನರಿಗೆ ಅಪಾಯ ಉಂಟುಮಾಡುವ ರೀತಿ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ವಿದ್ಯುತ್ ಪರಿವರ್ತಕಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ 2021ರ ಏಪ್ರಿಲ್‌ನಲ್ಲಿ ಬೆಸ್ಕಾಂಗೆ ಹೈಕೋರ್ಟ್ ಸೂಚನೆಯನ್ನು ನೀಡಿತ್ತು. ಆದರೂ ಈ ಕಾರ್ಯ ಆಮೆಗತಿಯಲ್ಲಿ ಸಾಗಿದೆ.

ನಗರದ ಹೊರವಲಯದ ಮನಗನಹಳ್ಳಿ ಎಂಬಲ್ಲಿ ಎರಡು ತಿಂಗಳ ಹಿಂದೆ ವಿದ್ಯುತ್ ಪರಿವರ್ತಕ ಸ್ಫೋಟಗೊಂಡು ತಂದೆ ಹಾಗೂ ಮಗಳು ಸಾವಿಗೀಡಾಗಿದ್ದರು. ಈ ಅವಘಡದ ಬಳಿಕವಂತೂ ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಪರಿವರ್ತಕಗಳನ್ನು ತೆರವುಗೊಳಿಸದ ಬೆಸ್ಕಾಂ ವಿರುದ್ಧ ಸಾರ್ವಜನಿಕರು ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸಿದ್ದರು. ಜಾಗದ ಕೊರತೆ ಇರುವುದರಿಂದ ಕೆಲವೆಡೆ ಪಾದಚಾರಿ ಮಾರ್ಗಗಳ ಮೇಲೆ ವಿದ್ಯುತ್ ಪರಿವರ್ತಕಗಳನ್ನು ಅನಿವಾರ್ಯವಾಗಿ ಅಳವಡಿಸಬೇಕಾಗುತ್ತದೆ ಎಂದು ಸಬೂಬು ಹೇಳುತ್ತಿದ್ದ ಬೆಸ್ಕಾಂ ಕೊನೆಗೂ ಎಚ್ಚೆತ್ತುಕೊಂಡಿದೆ. ಅಪಾಯಕಾರಿ ಟ್ರಾನ್ಸ್‌ಫಾರ್ಮರ್‌ಗಳ ಸಮಸ್ಯೆಗೆ ಮುಕ್ತಿ ನೀಡುವ ಹೊಸ ಮಾರ್ಗೋಪಾಯವನ್ನು ಕಂಡುಕೊಂಡಿರುವ ಬೆಸ್ಕಾಂ, ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸುವ ವಿನೂತನ ಯೋಜನೆಯನ್ನು ನಗರದಲ್ಲಿ ಜಾರಿಗೊಳಿಸಲು ಸಿದ್ಧತೆ ನಡೆಸಿದೆ. ವಿದ್ಯುತ್ ಪರಿವರ್ತಕಗಳಿಂದಾಗಿ ಎದುರಾಗಿದ್ದ ಆತಂಕಗಳನ್ನು ದೂರ ಮಾಡುವ ಹೊಸ ಭರವಸೆಯನ್ನು ಈ ಯೋಜನೆಯು ಮೂಡಿಸಿದೆ.

ವಿದ್ಯುತ್ ಪರಿವರ್ತಕಗಳಿಂದ ಎದುರಾಗಿದ್ದ ಆತಂಕಗಳನ್ನು ದೂರ ಮಾಡುವ ಹೊಸ ಭರವಸೆಯನ್ನು ಈ ಯೋಜನೆ ಮೂಡಿಸಿದೆ

ನಗರದ ಮಲ್ಲೇಶ್ವರದಲ್ಲಿ ಪಾದಚಾರಿ ಮಾರ್ಗದ ಅಡಿಯಲ್ಲಿ 500 ಕೆವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಪ್ರಾಯೋಗಿಕವಾಗಿ ಅಳವಡಿಸಲಾಗುತ್ತಿದೆ. ಪಾದಚಾರಿ ಮಾರ್ಗದಲ್ಲಿ ನಾಲ್ಕು ಮೀಟರ್ ಆಳದಲ್ಲಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುತ್ತಿದ್ದು, ₹ 2 ಕೋಟಿ ವೆಚ್ಚವಾಗುತ್ತದೆ ಎಂದು ಅಂದಾಜಿಸಲಾಗಿದೆ. ಇದಕ್ಕೆ ಹೆಚ್ಚಿನ ಜಾಗದ ಅಗತ್ಯವಿಲ್ಲ. ಕಡಿಮೆ ಜಾಗದಲ್ಲಿ ಸುರಕ್ಷಿತವಾಗಿ ಅಳವಡಿಸಬಹುದು, ವಿದ್ಯುತ್ ಅವಘಡ ತಡೆಯಲು ಇದು ಸಹಕಾರಿ, ನಿರಂತರ ವಿದ್ಯುತ್ ಪೂರೈಕೆಯಲ್ಲಿ ಇರುವ ತೊಡಕುಗಳನ್ನೂ ನಿವಾರಿಸಬಹುದು ಎಂದು ಬೆಸ್ಕಾಂ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಅವಘಡಗಳ ಕುರಿತೂ ಗಮನಹರಿಸಬೇಕು. ನೆಲದಡಿಯ ನೀರಿನ ತೊಟ್ಟಿಯ ಮಾದರಿಯಲ್ಲಿ ನೆಲದ ಪದರವನ್ನು ಕಾಂಕ್ರೀಟ್ ಗೋಡೆಗಳನ್ನು ನಿರ್ಮಿಸಿ, ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆಯಲ್ಲಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುತ್ತದೆ. ತಾಪಮಾನ ನಿಯಂತ್ರಣ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಗಾಳಿಯಾಡುವುದಕ್ಕೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕಾಂಕ್ರೀಟ್ ಹಲಗೆಗಳಿಂದ ಈ ಸ್ಥಳವನ್ನು ಮುಚ್ಚುವುದರಿಂದ ಜನರಿಗೆ ಯಾವುದೇ ತೊಂದರೆ ಎದುರಾಗದು ಎಂದು ಬೆಸ್ಕಾಂ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಾಂಪ್ರದಾಯಿಕ ವಿಧಾನದಲ್ಲಿ ಅಳವಡಿಸುವ ವಿದ್ಯುತ್ ಪರಿವರ್ತಕಗಳಿಗಿಂತ ನೆಲದಡಿ ಅಳವಡಿಸುವಂತಹ ಪರಿವರ್ತಕಗಳು ಹೆಚ್ಚು ಸುರಕ್ಷಿತ ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಆದರೂ, ಈ ವಿಚಾರದಲ್ಲಿ ಗರಿಷ್ಠ ಪ್ರಮಾಣದ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವ ಅಗತ್ಯವಿದೆ. ನಗರದಲ್ಲಿ ಭಾರಿ ಮಳೆಯಾದಾಗ ಕೆಲವು ತಗ್ಗು ಪ್ರದೇಶಗಳಲ್ಲಿ ಪ್ರವಾಹ ಸೃಷ್ಟಿಯಾಗುತ್ತದೆ. ನೆಲದಡಿ ವಿದ್ಯುತ್ ಪರಿವರ್ತಕ ಅಳವಡಿಸುವಂತಹ ಸ್ಥಳಗಳನ್ನು ಆಯ್ಕೆ ಮಾಡುವಾಗ ಈ ದಿಸೆಯಲ್ಲೂ ಅಧಿಕಾರಿಗಳು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು.

ವಿದ್ಯುತ್ ಪರಿವರ್ತಕವನ್ನು ನೆಲದಡಿ ಅಳವಡಿಸುವ ಯೋಜನೆ ಯಶಸ್ವಿಯಾದರೆ, ನಗರದ ಇತರ ಕಡೆಗಳಲ್ಲೂ ಇದೇ ಮಾದರಿಯನ್ನು ಅನುಸರಿಸಬೇಕು. ಬೆಂಗಳೂರು ಅಷ್ಟೇ ಅಲ್ಲ, ರಾಜ್ಯದ ಇತರ ಕಡೆಗಳಲ್ಲೂ ಹಂತಹಂತವಾಗಿ ಇದೇ ರೀತಿ ಸುರಕ್ಷಿತವಾದ ವಿಧಾನದಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳಡಿಸಲು ಇಂಧನ ಇಲಾಖೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸುವ ವಿಚಾರದಲ್ಲಿ ಬೆಸ್ಕಾಂ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಈ ಹಿಂದೆ ಪರಸ್ಪರ ದೂಷಿಸಿಕೊಳ್ಳುತ್ತಿದ್ದವು. ನೆಲದಡಿ ಟ್ರಾನ್ಸ್‌ಫಾರ್ಮರ್ ಅಳವಡಿಸುವಾಗ, ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಬೆಸ್ಕಾಂ ನಿರ್ವಹಿಸಿದರೆ, ಸಿವಿಲ್ ಕಾಮಗಾರಿಗಳನ್ನು ಬಿಬಿಎಂಪಿ ಅನುಷ್ಠಾನಗೊಳಿಸುತ್ತಿದೆ. ಇವೆರಡೂ ಹೀಗೆ ಸಮನ್ವಯದಿಂದ ಕೆಲಸ ಮಾಡಲು ಮುಂದಾಗಿರುವುದು ಮತ್ತೊಂದು ಆಶಾದಾಯಕ ಬೆಳವಣಿಗೆ.

ದಿನದ ಟ್ವೀಟ್

ತಪ್ಪು ಏಕೆಂದರೆ...?

ದ್ವೇಷ ಭಾಷಣವು ವಿದೇಶಗಳ ಜೊತೆಗಿನ ಭಾರತದ ಸಂಬಂಧಗಳನ್ನು, ವ್ಯಾಪಾರದ ಹಿತಾಸಕ್ತಿಗಳನ್ನು ಹಾಳುಮಾಡುತ್ತದೆ ಅಥವಾ ಪ್ರಧಾನಿಯವರ ವರ್ಚಸ್ಸಿಗೆ ಚ್ಯುತಿ ತರುತ್ತದೆ ಎಂಬ ಕಾರಣಕ್ಕಷ್ಟೇ ತಪ್ಪಲ್ಲ. ಅಂತಹ ಭಾಷಣ ಮಾಡುವುದು ತಪ್ಪು ಏಕೆಂದರೆ ಅದು ಕಾನೂನುಬಾಹಿರ, ಅನೈತಿಕ ಮತ್ತು ಅಸಾಂವಿಧಾನಿಕ ನಡೆ.

ಸುಶಾಂತ್ ಸಿಂಗ್, ಉಪನ್ಯಾಸಕ, ಲೇಖಕ

ಕಿಡಿನುಡಿ

ಇದು ಅಸಹನೀಯ! ರೈಲ್ವೆಯು ಪೂರೈಸುವ ಆಹಾರವು ಮಾನವನ ಬಳಕೆಗೆ ಯೋಗ್ಯವಲ್ಲ ಎಂಬುದನ್ನು ಮಹಾಲೇಖಪಾಲರು ಪತ್ತೆ ಹಚ್ಚಿದ್ದಾರೆ. ಸುವಾಸನೆಯುಕ್ತ ಹಾಲು, ತಂಪು ಪಾನೀಯ, ಸ್ಯಾಂಡ್‌ವಿಚ್, ಬಿಸ್ಕತ್ತಿನಂತಹವುಗಳನ್ನು ಪ್ರಯಾಣಿಕರು ಸೇವಿಸದಿರುವುದೇ ಒಳ್ಳೆಯದು. ತಪಾಸಣೆಗೆ ಒಳಪಡಿಸಿದ 22 ರೈಲುಗಳಲ್ಲಿನ ಕಾಫಿ, ಟೀ ಮತ್ತು ಸೂಪ್‌ಗಳನ್ನು ಅಶುದ್ಧ ನೀರಿನಿಂದ ತಯಾರಿಸಲಾಗಿತ್ತು. ಅಯ್ಯೋ!

ಕತ್ಯೂಶಾ, ಶಿಕ್ಷಕಿ

25 ವರ್ಷಗಳ ಹಿಂದೆ

ಶುಕ್ರವಾರ, 6-6-1997

- **ಒಮ್ಮತದ ರಾಷ್ಟ್ರಪತಿ ಆಯ್ಕೆಗೆ ತವಕ**

ನವದೆಹಲಿ, ಜೂನ್ 5– ರಾಷ್ಟ್ರದ ಹನ್ನೊಂದನೇ ರಾಷ್ಟ್ರಪತಿ ಆಯ್ಕೆಗಾಗಿ ಚುನಾವಣಾ ಆಯೋಗವು ಇಂದು ನಿರ್ದಿಷ್ಟ ದಿನವನ್ನು ಗೊತ್ತುಪಡಿಸಿದ್ದರಿಂದ ಸಾಂಸ್ಥಿಕ ಚುನಾವಣೆಗಳ ಗದ್ದಲದಲ್ಲಿಯೇ ಮುಳುಗಿರುವ ರಾಜಕೀಯ ಪಕ್ಷಗಳು ಈಗ ಅಭ್ಯರ್ಥಿ ಯಾರಾಗಬೇಕೆನ್ನುವ ಬಗೆಗೆ ಲಾಬಿ ಆರಂಭಿಸಲು ಚಾಲನೆ ನೀಡಿದಂತಾಗಿದೆ.

ಕಳೆದ ಬಾರಿ ಡಾ. ಶಂಕರ ದಯಾಳ್ ಶರ್ಮಾ ಮತ್ತು ಉಪರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಆಯ್ಕೆಯನ್ನು ಎಲ್ಲ ಪಕ್ಷಗಳು ಒಮ್ಮತದಿಂದ ಆಯ್ಕೆ ಮಾಡಿದ್ದವು. ಈ ಬಾರಿಯೂ ಅದೇ ಹಾದಿಯನ್ನು ಹಿಡಿಯುವ ತವಕ ಎಲ್ಲ ಪಕ್ಷಗಳಲ್ಲಿ ಇರುವುದು ಕಾಣುತ್ತದೆ. ಆದರೆ, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎನ್ನುವ ಜಿಜ್ಞಾಸೆಯಂತೆ ಈ ಒಮ್ಮತದ ಆಯ್ಕೆಯ ಪ್ರಶ್ನೆಯನ್ನು ಇದುವರೆವಿಗೂ ಯಾರು ಕೂಡಾ ಬೇರೆ ಬೇರೆ ರಾಜಕೀಯ ಪಕ್ಷಗಳ ಜತೆ ಮಾತುಕತೆ ನಡೆಸುವ ಮುಂದಾಳತ್ವದ ಕ್ರಿಯೆಯನ್ನು ಆರಂಭಿಸಿಲ್ಲ.

50 ವರ್ಷಗಳ ಹಿಂದೆ

ಮಂಗಳವಾರ, 6-6-1972

- **ದೇವಾಲಯಗಳ ನಾಲ್ಕು ಲಕ್ಷ ಎಕರೆ ಇನಾಂ ಜಮೀನು ಗೇಣಿದಾರರಿಗೆ**

ಬೆಂಗಳೂರು, ಜೂನ್ 5– ರಾಜ್ಯದ ದೇವಾಲಯಗಳಿಗೆ ಸೇರಿದ 4,12,227 ಎಕರೆ ಇನಾಂ ಜಮೀನು ಸದ್ಯದಲ್ಲೇ ಅದರ ಗೇಣಿದಾರರ ಕೈಸೇರಲಿದೆ.

ಈ ಜಮೀನುಗಳ ಆದಾಯವನ್ನು ಕಳೆದುಕೊಳ್ಳುವ ದೇವಾಲಯಗಳಲ್ಲಿ ಎಂದಿನಂತೆ ಪೂಜೆ ನಡೆಯಲು ಸರ್ಕಾರ 17.69 ಲಕ್ಷ ರೂಪಾಯಿ ವಾರ್ಷಿಕ ತಸ್ತೀಕನ್ನು ನೀಡಲಿದೆ. ಇಂದು ನಡೆದ ಮಂತ್ರಿಮಂಡಲದ ಸಭೆ, ದೇವಾಲಯಗಳಿಗೆ ಸೇರಿದ ಇನಾಂಗಳ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಏಕರೂಪದ ಶಾಸನವನ್ನು ರಚಿಸಲು ತೀರ್ಮಾನಿಸಿತು.

- **ತಕ್ಷಣ ಜಿಲ್ಲಾ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆ**

ಬೆಂಗಳೂರು, ಜೂನ್ 5– ತತ್‌ಕ್ಷಣದಿಂದ ಜಿಲ್ಲಾ ಮಟ್ಟದಲ್ಲೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲು ಇಂದು ನಡೆದ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು.

- **ದೇಶೀಯ ವೈದ್ಯಪದ್ಧತಿ ಬೆಳವಣಿಗೆ: ಸರ್ಕಾರದ ಭಾರಿ ಉತ್ತೇಜನ**

ಬೆಂಗಳೂರು, ಜೂನ್ 5– ಮಂತ್ರಿಮಂಡಲ ಇಂದು ಕೈಗೊಂಡ ನಿರ್ಧಾರದಿಂದಾಗಿ ರಾಜ್ಯದಲ್ಲಿ ದೇಶೀಯ ವೈದ್ಯಪದ್ಧತಿಯ ಬೆಳವಣಿಗೆ ಹಾಗೂ ಸಂಶೋಧನೆಗೆ ಭಾರಿ ಉತ್ತೇಜನ ದೊರೆಯಲಿದೆ.

ಇಷ್ಟುಕಾಲ ಈ ವೈದ್ಯಪದ್ಧತಿಗೆ ನಿರಾಕರಿಸಲ್ಪಟ್ಟಿದ್ದ ಪ್ರಾಮುಖ್ಯ ಈಗ ಅದಕ್ಕೆ ಬಂದಿದೆ. ಆಯುರ್ವೇದ ಹಾಗೂ ಇತರ ದೇಶೀಯ ವೈದ್ಯ ಪದ್ಧತಿ ಇತರ ವೈದ್ಯಪದ್ಧತಿಗಿಂತ ಕಡಿಮೆ ಪರಿಣಾಮಕಾರಿಯಾದುದಲ್ಲ. ಕೆಲವು ವಿಷಯಗಳಲ್ಲಿ ‘ಹೆಚ್ಚು ಪರಿಣಾಮಕಾರಿ’ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ವರದಿಗಾರರಿಗೆ ತಿಳಿಸಿದರು.

ಸಂಸತ್ತಿನ ಮೇಲ್ಮನೆಯು ರಾಜ್ಯಗಳ ಸಭೆಯಾಗಿ ಮಾಡಬೇಕಿದ್ದ ಕೆಲಸ ಗೌಣವಾಗಿದೆ

ರಾಜ್ಯಸಭಾ ಚುನಾವಣೆ: ಯಾವುದು ಪರಿಗಣನೆ?

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ನಾವು ಮತ್ತೆ ರಾಜ್ಯಸಭಾ ಚುನಾವಣೆಗಳ ಹಂಗಾಮಿನಲ್ಲಿ ಇದ್ದೇವೆ. ತಮ್ಮ ಪಕ್ಷದಿಂದ ಗರಿಷ್ಠ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವುದು ಹೇಗೆ ಎಂಬ ಕಾರ್ಯತಂತ್ರ ರೂಪಿಸುವಲ್ಲಿ ದೇಶದಲ್ಲೆಡೆ ಎಲ್ಲ ರಾಜಕೀಯ ಪಕ್ಷಗಳೂ ತೊಡಗಿಸಿಕೊಂಡಿವೆ. ಹಲವು ರಾಜ್ಯಗಳಲ್ಲಿ ತೆರವಾಗುತ್ತಿರುವ ಸ್ಥಾನಗಳಿಗೆ ಸಮನಾದ ಸಂಖ್ಯೆಯ ಅಭ್ಯರ್ಥಿಗಳು ಕಣದಲ್ಲಿ ಇರುವುದರಿಂದ ಮತದಾನದ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕದಲ್ಲಿ ತೆರವಾಗುತ್ತಿರುವ ನಾಲ್ಕು ಸ್ಥಾನಗಳಿಗೆ ಆರು ನಾಮಪತ್ರಗಳು ಸಲ್ಲಿಕೆಯಾಗಿರುವ ಕಾರಣ, ಇಲ್ಲಿ ಮತದಾನ ನಡೆಯುವುದು ಅನಿವಾರ್ಯ ಆಗಿದೆ. ಮುಂದಿನ ಕೆಲವು ದಿನಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಅನಿರೀಕ್ಷಿತ ತಿರುವುಗಳು, ಬದಲಾವಣೆಗಳು ನಡೆಯಬಹುದು ಎಂಬ ನಿರೀಕ್ಷೆ ಇರಿಸಿಕೊಳ್ಳಬಹುದು.

ರಾಜ್ಯಸಭಾ ಚುನಾವಣೆ ಹತ್ತಿರವಾದಾಗಲೆಲ್ಲ, ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಹಾಗೂ ಸಂಸತ್ತಿನ ಮೇಲ್ಮನೆಯಾಗಿ ರಾಜ್ಯಸಭೆ ವಹಿಸುವ ಪಾತ್ರದ ಬಗ್ಗೆ ಗಮನ ಹರಿಯುತ್ತದೆ. ರಾಜ್ಯಸಭೆಯ ಸ್ಥಾನಗಳು ದೇಶದ ಎಲ್ಲ ರಾಜ್ಯಗಳ ನಡುವೆ ಹಂಚಿಕೆಯಾಗಿವೆ. ಸಂಖ್ಯೆಯನ್ನು ತೀರ್ಮಾನಿಸುವಲ್ಲಿ ರಾಜ್ಯಗಳ ಜನಸಂಖ್ಯೆಯು ಒಂದು ಮುಖ್ಯ ಅಂಶ. ಸಣ್ಣ ರಾಜ್ಯಗಳಿಗೆ ಕನಿಷ್ಠ ತಲಾ ಒಂದಾದರೂ ಸ್ಥಾನ ಇರುತ್ತದೆ. ರಾಜ್ಯಗಳ ವಿಧಾನಸಭೆಗಳು ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆ ಮಾಡುತ್ತವೆ. ರಾಜ್ಯಸಭೆಯ ಹನ್ನೆರಡು ಸದಸ್ಯರನ್ನು ನಾಮನಿರ್ದೇಶನದ ಮೂಲಕ ರಾಷ್ಟ್ರಪತಿ ನೇಮಿಸುತ್ತಾರೆ.

ರಾಜ್ಯಸಭೆಯ ಚುನಾಯಿತ ಪ್ರತಿನಿಧಿಗಳ ಜಾತಕವನ್ನು ಅವಲೋಕಿಸಿದರೆ, ಸ್ಪಷ್ಟವಾದ ಕೆಲವು ವಿದ್ಯಮಾನಗಳು ಗೊತ್ತಾಗುತ್ತವೆ. ಮೊದಲನೆಯದು, ಕೇಂದ್ರ ಸಂಪುಟದ ಸದಸ್ಯರನ್ನಾಗಿ ಅಥವಾ ಸಚಿವರನ್ನಾಗಿ ನೇಮಕ ಮಾಡಲಿಕ್ಕಿರುವವರನ್ನು ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ಪಕ್ಷಗಳು ರಾಜ್ಯಸಭೆಯ ಮೂಲಕ ಸಂಸತ್ ಸದಸ್ಯರನ್ನಾಗಿಸುತ್ತವೆ. ಎರಡನೆಯದು, ಲೋಕಸಭಾ ಚುನಾವಣೆಯಲ್ಲಿ ಸೋಲುಂಡ ಅಥವಾ ನೇರ ಚುನಾವಣೆಯನ್ನು ಎದುರಿಸಲು ನಿರಾಕರಿಸುವ ಹಿರಿಯ ನಾಯಕರನ್ನು ಪಕ್ಷಗಳು ರಾಜ್ಯಸಭೆಗೆ ಕಳುಹಿಸುತ್ತವೆ. ಮೂರನೆಯದು, ವಿದ್ವಾಂಸರನ್ನು ಗೌರವಿಸಲು ಕೂಡ ರಾಜಕೀಯ ನಾಯಕರು ರಾಜ್ಯಸಭಾ ಸ್ಥಾನವನ್ನು ನೀಡುತ್ತಾರೆ. ಈಚಿನ ವರ್ಷಗಳಲ್ಲಿ, ಉದ್ಯಮ ಜಗತ್ತಿನವರು ಕೂಡ ರಾಜ್ಯಸಭೆಯಲ್ಲಿ ಸ್ಥಾನ ಪಡೆದಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಎರಡು ಬಗೆಯ ಬೆಳವಣಿಗೆಗಳು ಕಂಡುಬರುತ್ತಿವೆ. ಮೊದಲನೆಯದು, ಸರಿಸುಮಾರು ಮೂರನೆಯ ಒಂದರಷ್ಟು ಸದಸ್ಯರು ಒಂದು ಬಾರಿ ಸದಸ್ಯರಾದವರು. ಅಂದರೆ, ಒಂದು ಅವಧಿ ಪೂರ್ಣಗೊಳಿಸಿದ ನಂತರದಲ್ಲಿ ಪಕ್ಷಗಳು ಅವರನ್ನು ಮತ್ತೆ ಅದೇ ಸ್ಥಾನಕ್ಕೆ ತರುತ್ತಿಲ್ಲ. ಎರಡನೆಯದು, 2002ರ ನಂತರದಲ್ಲಿ ರಾಜ್ಯಸಭೆಯ ಸರಿಸುಮಾರು ನಾಲ್ಕನೆಯ ಒಂದರಷ್ಟು ಸದಸ್ಯರು ಲೋಕಸಭೆಯ ಮಾಜಿ ಸದಸ್ಯರೂ ಹೌದು. 2002ಕ್ಕೂ ಮೊದಲು ಲೋಕಸಭೆಯ ಮಾಜಿ ಸದಸ್ಯರು ರಾಜ್ಯಸಭಾ ಸದಸ್ಯರಾದ ಪ್ರಮಾಣವು ಶೇಕಡ 10ಕ್ಕಿಂತ ಕಡಿಮೆ ಇತ್ತು.

ಇವೆಲ್ಲ ಕರ್ನಾಟಕದ ಮಟ್ಟಿಗೂ ಸತ್ಯ. ರಾಜ್ಯಸಭೆಗೆ ಕರ್ನಾಟಕದಿಂದ ಆಯ್ಕೆಯಾಗಿರುವ ಇಬ್ಬರು ಹಿರಿಯ ಮುಖಂಡರು ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಹಾಗೂ ಕಾಂಗ್ರೆಸ್ಸಿನ ಮಲ್ಲಿಕಾರ್ಜುನ ಖರ್ಗೆ. ಇವರಿಬ್ಬರೂ 2019ರ ಲೋಕಸಭಾ ಚುನಾವಣೆಯಲ್ಲಿ ಸೋಲು ಕಂಡವರು. ಈ ಬಾರಿಯ ಚುನಾವಣೆಯಲ್ಲಿಯೂ ಕರ್ನಾಟಕದಲ್ಲಿ ಕಾಣುತ್ತಿರುವುದು ರಾಷ್ಟ್ರಮಟ್ಟದಲ್ಲಿನ ಬೆಳವಣಿಗೆಗಳ ಬಿಂಬವೇ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮತ್ತೆ ಬಿಜೆಪಿ ಅಭ್ಯರ್ಥಿಯಾಗಿ ಚುನಾವಣೆಗೆ ಇಳಿದಿದ್ದಾರೆ. 2014ರಲ್ಲಿ ಕೇಂದ್ರ ಸಂಪುಟ ಸೇರಿದ ತಕ್ಷಣ ಅವರು ಆಂಧ್ರಪ್ರದೇಶದಿಂದ ರಾಜ್ಯಸಭೆ ಪ್ರವೇಶಿಸಿದರು. 2016ರಲ್ಲಿ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದರು. ಈಗ ಅವರು ಇಲ್ಲಿಂದ ಮತ್ತೊಂದು ಅವಧಿಗೆ ಆಯ್ಕೆಯಾಗಬಯಸಿದ್ದಾರೆ. ನಟ ಜಗ್ಗೇಶ್ ಅವರೂ ಬಿಜೆಪಿ ಅಭ್ಯರ್ಥಿ. ಅವರಿಗೆ ಇದು ರಾಜ್ಯಸಭೆ ಪ್ರವೇಶಕ್ಕೆ ಮೊದಲ ಚುನಾವಣೆ. ಕೆ.ಸಿ.ರಾಮಮೂರ್ತಿ ಅವರ ಬದಲಿಗೆ ಜಗ್ಗೇಶ್ ಕಣಕ್ಕೆ ಇಳಿದಿದ್ದಾರೆ. ರಾಮಮೂರ್ತಿ ಅವರು 2016ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದರು. ಕಾಂಗ್ರೆಸ್ ಪಕ್ಷವು ಜೈರಾಂ ರಮೇಶ್ ಅವರನ್ನು ಅಭ್ಯರ್ಥಿಯನ್ನಾಗಿಸಿದೆ.

ರಮೇಶ್ ಅವರು ರಾಜ್ಯಸಭಾ ಸದಸ್ಯರಾಗಿ ಮೂರು ಅವಧಿಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಅವರು ಮೊದಲಿಗೆ 2004ರಲ್ಲಿ ಆಂಧ್ರಪ್ರದೇಶದಿಂದ ಆಯ್ಕೆಯಾಗಿದ್ದರು. 2016ರಲ್ಲಿ ಕರ್ನಾಟಕದಿಂದ ಆಯ್ಕೆಯಾದರು. ನಿರ್ಮಲಾ, ಜಗ್ಗೇಶ್ ಮತ್ತು ರಮೇಶ್ ಅವರ ಗೆಲುವು ಸುಲಭದ್ದಾಗಿರುವ ನಿರೀಕ್ಷೆ ಇದೆ. ಏಕೆಂದರೆ ಅವರ ಪಕ್ಷಗಳಿಗೆ ಅವರನ್ನು ಗೆಲ್ಲಿಸಲು ಅಗತ್ಯವಿರುವಷ್ಟು ಸಂಖ್ಯಾಬಲ ವಿಧಾನಸಭೆಯಲ್ಲಿ ಇದೆ.

ನಿಜವಾದ ಸ್ಪರ್ಧೆ ನಡೆಯಲಿರುವುದು ನಾಲ್ಕನೆಯ ಸ್ಥಾನಕ್ಕಾಗಿ. ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳು– ಬಿಜೆಪಿ, ಕಾಂಗ್ರೆಸ್, ಜೆಡಿಎಸ್– ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ಆದರೆ, ನಾಲ್ಕನೆಯ ಅಭ್ಯರ್ಥಿಯನ್ನು ಗೆಲ್ಲಿಸಲು ಅಗತ್ಯವಿರುವ ಸಂಖ್ಯಾಬಲ ಯಾವ ಪಕ್ಷಕ್ಕೂ ಇಲ್ಲ. ಹೀಗಾಗಿ, ನಾಲ್ಕನೆಯ ಸ್ಥಾನವನ್ನು ಗೆಲ್ಲಬೇಕು ಎಂದಾದರೆ ಅಭ್ಯರ್ಥಿ (ಮತ್ತು ಅವರನ್ನು ಬೆಂಬಲಿಸಿರುವ ಪಕ್ಷ) ತಮ್ಮ ಪಕ್ಷದ ಆಚೆಗೂ ಬೆಂಬಲ ಗಿಟ್ಟಿಸಿಕೊಳ್ಳಬೇಕು. ಮೂರೂ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸ್ಪಷ್ಟ ಕಾರ್ಯತಂತ್ರವೊಂದನ್ನು ರೂಪಿಸಿದ್ದವು ಎಂದು ಕಾಣುತ್ತಿದೆ.

ರಾಜ್ಯಸಭೆಯ ಮಾಜಿ ಸದಸ್ಯ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಕುಪೇಂದ್ರ ರೆಡ್ಡಿ ಅವರನ್ನು ಜೆಡಿಎಸ್ ಕಣಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷವು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮನ್ಸೂರ್ ಅಲಿ ಖಾನ್ ಅವರನ್ನು ಕಣಕ್ಕಿಳಿಸಿದೆ. ಖಾನ್ ಅವರು ಸಿದ್ದರಾಮಯ್ಯ ಅವರಿಗೆ ಆಪ್ತರು ಎನ್ನಲಾಗಿದೆ. ಬಿಜೆಪಿಯು ಪಕ್ಷದ ರಾಜ್ಯ ಘಟಕದ ಮಾಜಿ ಖಜಾಂಚಿ ಲಹರ್ ಸಿಂಗ್ ಸಿರೋಯಾ ಅವರನ್ನು ಕಣಕ್ಕಿಳಿಸಿದೆ. ಇವರಲ್ಲಿ ಯಾರೇ ಗೆಲ್ಲಲಿ ಆ ಗೆಲುವು ಪಕ್ಷಗಳ ನಡುವಿನ ಪ್ರಭಾವವನ್ನು, ಬೆಂಬಲ ಗಿಟ್ಟಿಸುವ ವಿಚಾರದಲ್ಲಿ ಅಭ್ಯರ್ಥಿಗಳು ಹೊಂದಿರುವ ಕೌಶಲವನ್ನು ತೋರಿಸಿಕೊಡಲಿದೆ.

ರಾಜ್ಯಸಭಾ ಚುನಾವಣೆಯು ಇನ್ನೂ ಒಂದು ಪ್ರಶ್ನೆಯನ್ನು ಎತ್ತುತ್ತದೆ. ಸದಸ್ಯರು ಯಾವ ರಾಜ್ಯದಿಂದ ಆಯ್ಕೆಯಾಗಿರುತ್ತಾರೋ ಆ ರಾಜ್ಯವನ್ನು ಪ್ರತಿನಿಧಿಸಲು ರಾಜಕೀಯ ಪಕ್ಷಗಳು ನಡೆಸಿದ ಪ್ರಯತ್ನವನ್ನು ಆ ಸದಸ್ಯತ್ವವು ಪ್ರತಿಬಿಂಬಿಸುತ್ತದೆಯೇ? ನಮ್ಮಂತಹ ಒಕ್ಕೂಟ ವ್ಯವಸ್ಥೆಯಲ್ಲಿ, ರಾಜ್ಯಸಭೆ ಇರುವುದು ರಾಜ್ಯಗಳ ಹಿತಾಸಕ್ತಿಗಳ ಕುರಿತು ಗಮನ ಸೆಳೆಯುವುದಕ್ಕೆ. ಆದರೆ, ಪಕ್ಷಗಳು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುತ್ತಿರುವ ರೀತಿಯನ್ನು ಗಮನಿಸಿದರೆ, ರಾಜ್ಯಸಭೆಯ ಪಾತ್ರವನ್ನು ನಿಜವಾಗಿಯೂ ಗಮನದಲ್ಲಿ ಇರಿಸಿಕೊಂಡು ಇವನ್ನೆಲ್ಲ ಮಾಡಲಾಗುತ್ತದೆಯೇ ಎಂಬುದು ಖಚಿತವಾಗುವುದಿಲ್ಲ. ಇದು ಹಿರಿಯ ನಾಯಕರನ್ನು, ಸಚಿವರಾದವರನ್ನು, ಸಚಿವ ಆಗಬೇಕಿರುವವರನ್ನು ಸಂಸತ್ತಿಗೆ ಕರೆತರಲು ಇರುವ ದಾರಿಯಂತೆ ಕಾಣಿಸುತ್ತಿದೆ.

ಹಾಗೆಯೇ, ಲೋಕಸಭೆಗೆ ಚುನಾಯಿತರಾಗಲು ಸಾಧ್ಯವಾಗದ ಪಕ್ಷದ ನಾಯಕರನ್ನು ಸಂಸತ್ತಿಗೆ ಕರೆದು ತರಲು ಇರುವ ಮಾರ್ಗದಂತೆಯೂ ಇದು ಕಾಣಿಸುತ್ತಿದೆ. ಪಕ್ಷಕ್ಕೆ ಅಥವಾ ನಾಯಕನೊಬ್ಬನಿಗೆ ತೋರಿದ ನಿಷ್ಠೆಗೆ ಪ್ರತಿಯಾಗಿ ನೀಡುವ ಬಹುಮಾನದ ರೀತಿ ಯಲ್ಲಿಯೂ ರಾಜ್ಯಸಭಾ ಸ್ಥಾನವು ಹಲವು ಸಂದರ್ಭಗಳಲ್ಲಿ ಕಾಣಿಸುತ್ತಿದೆ. ಕೊನೆಯಲ್ಲಿ ಹೇಳಬೇಕು ಎಂದಾದರೆ, ಸ್ಪರ್ಧೆ ತುರುಸಿನಿಂದ ಕೂಡಿದ್ದರೆ ಪಕ್ಷದ ಪರಿಧಿಯನ್ನು ಮೀರಿ ಬೆಂಬಲ ಒಗ್ಗೂಡಿಸಲು ಸಾಧ್ಯವಾಗುವ ಕೌಶಲ ಅಭ್ಯರ್ಥಿಗೆ ಇದ್ದರೆ ಅದು ಮಹತ್ವದ್ದಾಗುತ್ತದೆ.

ಇವೆಲ್ಲವುಗಳ ಫಲವಾಗಿ, ಸಂಸತ್ತಿನ ಮೇಲ್ಮನೆಯ ನಿಜವಾದ ಪಾತ್ರ, ರಾಜ್ಯಗಳ ಸಭೆಯಾಗಿ ಅದು ಮಾಡಬೇಕಿದ್ದ ಕೆಲಸ ಮರೆಯಾಗಿವೆ. ಅದು ತಾತ್ವಿಕವಾಗಿ ರಾಜಕೀಯ ಪುನರ್ವಸತಿಗೆ ವೇದಿಕೆ ಆಗುತ್ತದೆ. ನಮ್ಮ ರಾಜಕೀಯ ಸಂಸ್ಥೆಗಳ ಸ್ಥಿತಿ ಕುರಿತ ವಿಷಾದಕರ ಬಣ್ಣನೆ ಇದು.

ಚುರುಮುರಿ

ವಿತಂಡವಾದಾಸನ

• ಸುಮಂಗಲಾ

‘ನೋಡಲೇ... ಚೀನಾದವರು ತಮ್ಮದೇ ಸ್ವಂತ ಅಂಬಾನಿ ಮಾಡಿಕೊಳ್ಳಾಕ ಹತ್ಯಾರ’ ಎಂದು ಬೆಕ್ಕಣ್ಣನಿಗೆ ಸುದ್ದಿ ತೋರಿಸಿದೆ.

‘ನಮ್ಮ ಅಂಬಾನಿದು ಇಪ್ಪತ್ತೇಳು ಮಹಡಿ ಅರಮನಿ ಮುಂಬೈನಾಗೈತೆ... ಅವರೇನ್ ಸ್ವಂತ ಮಾಡತಾರ...’ ಎಂದು ಗುರುಗುಟ್ಟಿತು.

‘ನಿಮ್ಮ ಅಂಬಾನಿ ಅರಮನೆ ಭೂಮಿ ಮ್ಯಾಗೈತಿ. ಚೀನಾದವ್ರ ಅಂಬಾನಿ ಆಕಾಶದಾಗೈತಿ, ಅದು ಅಂತರಿಕ್ಷ ಬಾಹ್ಯಾಕಾಶ ನಿಲ್ದಾಣ. ಹಂಗ ಸ್ವಂತ ಅಂಬಾನಿ ಮಾಡೂದಂದ್ರ ರಾತ್ರೋರಾತ್ರಿ ಡಿಮಾನಿಟೈಸೇಶನ್ ಮಾಡಿದಂಗೆ ಅಲ್ಲಲೇ’.

‘ನೀ ಹೊಳ್ಳಂಬಳ್ಳ ನಮ್ ಮೋದಿಮಾಮಾನ ವಿರುದ್ಧ ಏನರ ಹೇಳಬ್ಯಾಡ. ಈ ಎಂಟು ವರ್ಷದಾಗೆ ಮೋದಿಮಾಮಾ ನಮ್ಮ ಕರುನಾಡಿಗೆ 1,29,776 ಕೋಟಿ ರೂಪಾಯಿ ಕೊಡುಗೆ ಕೊಟ್ಟಾರೆ’ ಎಂದು ಎದೆಯುಬ್ಬಿಸಿತು.

‘ಹುಚ್ ಪ್ಯಾಲಿ... ಕೊಡುಗೆ ಅಂದ್ರ ಅದೇನ್ ಉಡುಗೊರೆ ಅಲ್ಲಲೇ. ಕೇಂದ್ರದಿಂದ ರಾಜ್ಯಕ್ಕೆ ಹಕ್ಕುಪ್ರಕಾರ ಬರಬೇಕಾದ ರೊಕ್ಕ, ಅನುದಾನ ಅದು. ವಳ್ಳೆ ಮೋದಿಮಾಮಾ ತನ್ನ ಕಿಸೇದಾಗಿಂದ ಕೊಟ್ಟಂಗ ಮಾತಾಡತೀಯಲ್ಲ’ ಎಂದರೆ ಬೆಕ್ಕಣ್ಣ ಕೇಳುವ ಪೈಕಿಯೇ...

‘ನಮ್ ಹಿರಿಯ ಸಾಹಿತಿ ಭೈರಪ್ಪಾರೂ ಹೇಳ್ಯಾರ, ಸರ್ಜಿಕಲ್ ಸ್ಟ್ರೈಕ್ ಮಾಡೂಮುಂದ ಮೋದಿಮಾಮಾ ಇಡೀ ರಾತ್ರಿ ನಿದ್ದೆ ಮಾಡಿರಲಿಲ್ಲ, ಅದೇ ಚೀನಾ ಯುದ್ಧ ನಡೆದಾಗ ನೆಹರೂ ಗಪ್ಪನೆ ಮಕ್ಕೊಂಡುಬಿಟ್ಟಿದ್ರು ಅಂತ’ ಇನ್ನೊಂದು ವಿತಂಡವಾದಾಸನ ಹಾಕಿತು.

‘ನಿಮ್ಮ ಮೋದಿಮಾಮಾ ನಿದ್ದೆ ಮಾಡಿರಲಿಲ್ಲ ಅಂದ್ರ ಯುದ್ಧಭೂಮಿವಳಗ ಅವರೇ ಕಾದಾಡ್ಯಾರ ಅಂತಲ್ಲಲೇ. ಮಂಗ್ಯಾ... ಹಿಂಗೆಲ್ಲ ವಿತಂಡವಾದಾ ಮಾಡೂದೇ ಬಾಲಿಶ. ಆವಾಗೆಲ್ಲ ಪ್ರಧಾನಿಗಳು ಏನು ಮಾಡತಿದ್ದರು ಅಂತ ಇಷ್ಟೆಲ್ಲ ಜಾಹೀರಾತು ಕೊಡ್ತಿರಲಿಲ್ಲ. ಈಗ ಮೋದಿಮಾಮಾ ಕಣ್ ಮುಚ್ಚಿದ್ದು, ತೆಗೆದಿದ್ದು, ಮೀಟಿಂಗ್ ಮಾಡಿದ್ದು, ಒಟ್ರಾಶಿ ಎಲ್ಲಾನೂ ಜಾಹೀರಾತು ಮಾಡ್ತಾರಷ್ಟೇ. ಗೊತ್ತೈತಿಲ್ಲೋ... ಮೋದಿಮಾಮಾರ ಎಂಟುವರ್ಷದಾಗೆ 7,000 ಕೋಟಿ ರೂಪಾಯಿಗೂ ಹೆಚ್ಚು ರೊಕ್ಕ ಜಾಹೀರಾತಿಗೆ ಹಾಕ್ಯಾರೆ. ಹಿಂದಿನ ಯಾವ ಸರ್ಕಾರನೂ ಇಷ್ಟ್ ಖರ್ಚ್ ಮಾಡಿರಲಿಲ್ಲ’ ಎಂದು ನಾನೆಂದರೆ, ‘ಛಲೋ ಅಲ್ಲೇನ್ ಮತ್ತ... ಮಾಧ್ಯಮಗಳೂ ವಿಕಾಸ ಆದುವಲ್ಲ’ ಎನ್ನುತ್ತ ತನ್ನ ಎಂದಿನ ಕೊಂಕುನಗೆ ಬೀರಿತು.

ಸಂಗತ

ಪೂರ್ವಜರ ಮತಿ ಮರುಕಳಿಸಲಿ

ಪರಿಸರ ಕಾಳಜಿಯ ಸಂವೇದನೆ ಹಿಂದೆಂದಿಗಿಂತಲೂ ಇಂದು ತೀವ್ರವಾಗಿ ಚಳವಳಿಯ ರೂಪದಲ್ಲಿ ವ್ಯಕ್ತವಾಗಬೇಕಾಗಿದೆ

• ಡಾ. ಬಿ.ಸಿ.ಪ್ರಭಾಕರ್

ಗ್ರಾಮೀಣ ಪ್ರದೇಶದಿಂದ ಬಂದವರಿಗೆಲ್ಲ ನೆನಪಿರುತ್ತದೆ... ಹಳ್ಳಿಗಳಲ್ಲಿ ಬೆಳಗ್ಗೆ ದೇವರ ಪೂಜೆಯ ನಂತರ ಅಕ್ಕಿ ಅಥವಾ ಜೋಳದ ನುಚ್ಚನ್ನು ಇರುವೆ-ಗೂಡುಗಳಿಗೆ ಹಾಕಿ, ಸೂರ್ಯನಿಗೊಮ್ಮೆ ನಮಸ್ಕರಿಸಿ ನಂತರ ತಾವು ಆಹಾರ ಸೇವಿಸುತ್ತಿದ್ದುದು. ಅದು ತಲೆ-ತಲಾಂತರದಿಂದ ಬಂದ ಜೀವನಕ್ರಮ. ಅದರ ಹಿಂದೆ ಇರುವ ಉದಾತ್ತ ಯೋಚನೆಯನ್ನೇ ನೋಡಿ, ಜಗತ್ತಿನ ಎಲ್ಲ ಜೀವಿಗಳ ಸೌಖ್ಯ ತನಗೆ ಮುಖ್ಯ ಎಂಬ ಭಾವ ಅಲ್ಲಿ ಕಾಣುತ್ತದೆ. ಅದನ್ನು ನಮ್ಮ ಪೂರ್ವಿಕರು ಪರಿಸರ ಕಾಳಜಿಯೆಂದೋ ಜೀವಸಂಕುಲದ ರಕ್ಷಣೆಯೆಂದೋ ಅಥವಾ ಅದರಿಂದ ತನಗೆ ಅನುಕೂಲವೆಂದೋ ಎಂದೂ ಮಾಡಲಿಲ್ಲ. ಅದೊಂದು ಅಂತರ್ಗತವಾದ ಸರ್ವಹಿತದ ಭಾವ.

ಊರಿನ ಸುತ್ತಮುತ್ತ ಹಿಂದೆ ಇದ್ದ ದೇವರ ಕಾಡುಗಳಾಗಲೀ ಗೋಮಾಳಗಳಾಗಲೀ ಅಶ್ವತ್ಥಕಟ್ಟೆ-ಯಾಗಲೀ ಕೆರೆಗಳನ್ನು ‘ಗಂಗಮ್ಮ’ ಎಂದು ಪೂಜಿಸುವುದಾಗಲೀ ಎಲ್ಲವೂ ಅವರ ಬದುಕಿನ ಅಂಗಗಳಾಗಿದ್ದವು. ಕೆರೆ ಅಥವಾ ಬಾವಿಯ ನೀರನ್ನು ಪೂರ್ವಜರು ಎಂದೂ ಅಶುದ್ಧವೆಂದು ಭಾವಿಸಿದುದಾಗಲೀ ಗಾಳಿ ಕಲುಷಿತವೆಂದಾಗಲೀ ಕೊರಗಲಿಲ್ಲ. ಏಕೆಂದರೆ ಅವು ಅಷ್ಟೊಂದು ಚೇತೋಹಾರಿಯಾಗಿದ್ದವು. ಸರಳ ಬದುಕಿಗೆ ಹೆಚ್ಚೇನೂ ಬೇಡದ ಅಂದಿನ ಜನರ ಬದುಕು ಸುಸ್ಥಿರವಾಗಿತ್ತು. ಪರಿಸರ ಬಸವಳಿಯದೆ ಸರಳ ಬದುಕಿಗೆ ನೆಮ್ಮದಿ ನೀಡುತ್ತಿತ್ತು.

ಕಾಲ ಸರಿದಂತೆ ಚಿತ್ರಣ ಬದಲಾಗಿ ಹೋಯಿತು. ಜನಸಂಖ್ಯೆ ಶರವೇಗದಲ್ಲಿ ದ್ವಿಗುಣಿಸಿ ಭೂಮಿಯ ಸಂಪನ್ಮೂಲಗಳ ಮೇಲೆ ಇನ್ನಿಲ್ಲದ ಒತ್ತಡ ಬಿತ್ತು. ನಾಗರಿಕತೆಯ ವಿಕಾಸವು ಜನರ ಐಹಿಕ ಆಸೆಗಳಿಗೆ ರೆಕ್ಕೆ ಪುಕ್ಕ ಅಂಟಿಸಿ ಆಕಾಶದೆತ್ತರ ಬೆಳೆಯುವಂತೆ ಮಾಡಿತು. ಮಾನವನ ಅಪರಿಮಿತ ಭೋಗದ ಆಸೆಗೆ ಪರಿಸರ ಹಾನಿಗೊಂಡು ಗಾಳಿ, ನೀರು, ಮಣ್ಣು, ಜೀವಸಂಕುಲ ಎಲ್ಲವೂ ಬಸವಳಿದವು. ಆ ಕಾರಣದಿಂದಲೇ ಇಂದು ‘ಪರಿಸರ ರಕ್ಷಣೆ’ ಎಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿರುವುದು.

ಪರಿಸರ ಸಮತೋಲನಕ್ಕೆ ಏನೆಲ್ಲಾ ಕ್ರಮ ಕೈಗೊಳ್ಳಬಹುದೆಂಬ ವೈಜ್ಞಾನಿಕ ಅರಿವು ಮತ್ತು ಮಾರ್ಗಗಳು ಇದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವುದೇ ಇಂದು ದೊಡ್ಡ ಸಾಹಸವಾಗಿದೆ. ಶಾಲಾ ಪುಸ್ತಕದಿಂದ ಹಿಡಿದು ಉನ್ನತ ಶಿಕ್ಷಣದ ಪಠ್ಯಕ್ರಮದ-ವರೆಗೆ ಪರಿಸರ ವಿಜ್ಞಾನ ಮತ್ತು ಪರಿಸರ ರಕ್ಷಣೆಯ ಬಗ್ಗೆ ಹೇರಳವಾಗಿ ಮಾಹಿತಿ ಕೊಡುತ್ತಿದ್ದರೂ ಲೆಕ್ಕವಿಲ್ಲದಷ್ಟು ಸಂವಾದ, ಸೆಮಿನಾರ್‌ಗಳು ಆಗುತ್ತಿದ್ದರೂ ಅವನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಆಗುತ್ತಿರುವ ಪ್ರಗತಿ ಅತ್ಯಲ್ಪ.

ನಮ್ಮ ಲೆಕ್ಕವಿಲ್ಲದಷ್ಟು ಅನವಶ್ಯಕ ಉಪಯೋಗಗಳಲ್ಲಿ ಕಡಿತವಾಗದೇ ಪರಿಸರ ಮಾಲಿನ್ಯ ಕಡಿಮೆ ಆಗದೆಂಬ ಸಂವೇದನೆಯನ್ನು ನಾವಿಂದು ಬೆಳೆಸಿಕೊಳ್ಳಬೇಕಾಗಿದೆ. ಇದಕ್ಕೆ ಸರ್ಕಾರಗಳು ಕ್ರಮಬದ್ಧ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವ ಇಚ್ಛಾಶಕ್ತಿಯನ್ನು ತೋರಬೇಕಾಗಿದೆ. ಎಲ್ಲಕ್ಕೂ ಸರ್ಕಾರಗಳನ್ನಷ್ಟೇ ದೂರಿದರೆ ಪ್ರಯೋಜನವಾಗದು. ಒಂದು ಸಣ್ಣ ಉದಾ-ಹರಣೆಯನ್ನು ತೆಗೆದುಕೊಳ್ಳೋಣ. ಇತ್ತೀಚೆಗೆ ಸುರಿದ ಮಳೆಯಿಂದ ಬೆಂಗಳೂರಿನ ಕೆಲವು ಪ್ರದೇಶಗಳು ಜಲಾವೃತವಾಗಿ ಜನ ಸಂಕಷ್ಟಕ್ಕೆ ಒಳಗಾದರು. ಹಾಗಾಗುವುದಕ್ಕೆ ಎರಡು ಕಾರಣಗಳು ಸುಸ್ಪಷ್ಟ. ನೀರು ಸರಾಗವಾಗಿ ಹರಿಯಲು ಇದ್ದ ಮಾರ್ಗಗಳು ಕಿರಿದಾಗಿ ಅಥವಾ ಇನ್ನಿಲ್ಲದಂತಾಗಿ (ಜನರ ದುರಾಸೆಯಿಂದ) ಮತ್ತು ಹರಿದ ನೀರು ಶೇಖರವಾಗಲು ಇದ್ದ ಕೆರೆಗಳ ಜಾಗಗಳನ್ನು ಸೈಟು, ಮನೆಗಳು ಆಕ್ರಮಿಸಿಕೊಂಡಿದ್ದು ನೀರಾದರೂ ಎಲ್ಲಿಗೆ ಹೋಗಬೇಕು?!

ಎರಡನೆಯದು, ನೀರು ಹರಿಯುವ ಕಾಲುವೆಗಳ ತುಂಬೆಲ್ಲಾ ಜನರೇ ಎಸೆದ ಕಸ ತುಂಬಿಕೊಂಡು ಹರಿವಿಗೆ ಅಡೆತಡೆ ಉಂಟಾಗಿರುವುದು. ಇಲ್ಲಿ ಆಡಳಿತ ನಡೆಸುವ ಸರ್ಕಾರ, ರಾಜಕಾರಣಿಗಳು, ಅಧಿಕಾರಿಗಳ ಅದಕ್ಷತೆ ಮತ್ತು ಪ್ರಾಮಾಣಿಕತೆಯ ಕೊರತೆಯು ಪರಿಸರ ಕಾಳಜಿಗೆ ತಿಲಾಂಜಲಿ ಇಟ್ಟರೆ, ಜನಸಾಮಾನ್ಯರ ಬೇಜವಾಬ್ದಾರಿಯೂ ಅಷ್ಟೇ ಕಾರಣವಾಗಿದೆ.

ನಮಗೆ ಪರಿಸರದ ಸಮಷ್ಟಿಪ್ರಜ್ಞೆ ಇರಬೇಕು. ಮಕ್ಕಳು ತಿಂಗಳಿಗೆ ಒಮ್ಮೆಯಾದರೂ ಪರಿಸರದ ಜೊತೆ ‘ಸಂವಾದ’ ನಡೆಸುವಂತಹ ವಾತಾವರಣ ಸೃಷ್ಟಿ ಮಾಡಬೇಕು, ಕೆರೆ ಕಟ್ಟೆ, ಸುತ್ತಲಿನ ಹಸಿರು, ಬೆಟ್ಟಗುಡ್ಡ, ಹಾರುವ ಹಕ್ಕಿ, ಬೀಸುವ ಗಾಳಿ, ಅಲ್ಲಿನ ಜೀವಸಂಕುಲ ಅವುಗಳೆಲ್ಲದರ ಜೊತೆ ನಮ್ಮ ಬದುಕು ಮತ್ತು ಅವುಗಳ ವಿನಾ ನಮ್ಮ ಬದುಕು ಬರಡು ಎಂಬ ಪರಿಸರಭಾವ ಬೆಳೆಸಬೇಕು. ಈ ಕಲಿಕೆ ಶಾಲಾ ಮಕ್ಕಳಿಗಷ್ಟೇ ಅಲ್ಲದೆ, ಕಾಲೇಜು ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರಿಗೂ ಅಷ್ಟೇ ಮುಖ್ಯ.

ಪರಿಸರ ಕಾಳಜಿಯು ಜನರಿಗೆ ಪ್ರಕೃತಿಯಲ್ಲಿ ಪ್ರೀತಿ ಹುಟ್ಟುವಂತೆ ಮಾಡಬಲ್ಲದು. ಸಣ್ಣ ದೇಶಗಳಾದ ಸಿಂಗಪುರ, ಮಲೇಷ್ಯಾ, ಥಾಯ್ಲೆಂಡ್ ಮತ್ತು ಅನೇಕ ಐರೋಪ್ಯ ದೇಶಗಳು ಪರಿಸರಕ್ಕೆ ಹಾನಿ ಮಾಡುವ ಬೃಹತ್ ಯೋಜನೆಗಳಿಗೆ ಕೈಹಾಕುವುದೇ ಇಲ್ಲ. ಅದರಿಂದ ಅಗಾಧ ಪ್ರಯೋಜನಗಳೂ ಉಂಟು. ಅಲ್ಲಿಗೆ ನಿಸರ್ಗ ಸಂಪತ್ತನ್ನು ನೋಡಲು ಬರುವ ಪ್ರವಾ-ಸಿಗರಿಂದಲೇ ಅವರಿಗೆ ಹೇರಳ ಆರ್ಥಿಕ ಸಂಪನ್ಮೂಲ ದೊರೆಯುತ್ತಿದೆ. ಪರಿಸರ ಸಂವೇದನೆ ಅಷ್ಟೊಂದು ಬಲವಾಗಿದೆ ಅಲ್ಲಿ. ನಮ್ಮ ದೇಶದಲ್ಲಿ ಪರಿಸರ ಕಾಳಜಿಯ ಸಂವೇದನೆ ಹಿಂದೆಂದಿಗಿಂತಲೂ ಇಂದು ತೀವ್ರವಾಗಿ ಚಳವಳಿಯ ರೂಪದಲ್ಲಿ ವ್ಯಕ್ತವಾಗಬೇಕಾಗಿದೆ. ಅದು ನಮ್ಮ ಸುಸ್ಥಿರ ಬದುಕಿಗೆ ಅತ್ಯಂತ ಅಗತ್ಯ ಕೂಡ.

ಲೇಖಕ: ಭೂವಿಜ್ಞಾನಿ

ವಾಚಕರ ವಾಣಿ

ಕೇಂದ್ರದ ನಡೆ ಸ್ವಾಗತಾರ್ಹ

ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಆಹಾರದ ಬಿಲ್ ಜೊತೆಗೆ ಸೇವಾ ಶುಲ್ಕವನ್ನು ಮನಬಂದಂತೆ ವಸೂಲಿ ಮಾಡುವುದನ್ನು ತಡೆಯುವ ಸಲುವಾಗಿ ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಆಹಾರದ ಬಿಲ್‌ನೊಂದಿಗೆ ಸೇವಾ ಶುಲ್ಕ ವಸೂಲಿ ಮಾಡಬಾರದು ಎಂದು ಸೂಚನೆ ನೀಡಿದ್ದಾರೆ. ಜೊತೆಗೆ ಈ ಸಂಬಂಧ ಹೊಸ ನಿಯಮ ಜಾರಿಗೆ ತರಲು ಮುಂದಾಗಿದ್ದಾರೆ. ಇದು ಸ್ವಾಗತಾರ್ಹ ನಡೆ. ಇದರಿಂದ ಗ್ರಾಹಕರ ಮೇಲಿನ ಹೊರೆ ಕಡಿಮೆಯಾಗಲಿದೆ. ಹೋಟೆಲ್, ರೆಸ್ಟೋರೆಂಟ್‌ನ ಸೇವೆಯಿಂದ ತೃಪ್ತಿಯಾಗಿ ಗ್ರಾಹಕರೇ ಟಿಪ್ಸ್ ರೂಪದಲ್ಲಿ ಹಣ ನೀಡಿದರೆ ಸ್ವೀಕರಿಸಲು ಅನುಮತಿ ನೀಡಿರುವುದನ್ನು ಮಾಲೀಕರು ಗಮನಿಸಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಭಯೋತ್ಪಾದಕರನ್ನು ನಿರ್ನಾಮಗೊಳಿಸಿ

ಕಾಶ್ಮೀರದಲ್ಲಿ ಈಚಿನ ದಿನಗಳಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಿರುವ ಮುಸ್ಲಿಮೇತರರ ಹತ್ಯೆಯನ್ನು ತಡೆಯುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಲ್ಲಿನ ಭಯೋತ್ಪಾದಕ ಸಂಘಟನೆಗಳ ಮೂಲವನ್ನು ಹುಡುಕಿ ನಿರ್ನಾಮ ಮಾಡಬೇಕಿದೆ. ಇವರಿಗೆ ತರಬೇತಿ ನೀಡುವ ಸಂಸ್ಥೆಗಳು, ಶಸ್ತ್ರಾಸ್ತ್ರ ಬರುವ ದಾರಿಗಳನ್ನು ಸಹ ಹುಡುಕಬೇಕಿದೆ.

ನಿರಪರಾಧಿಗಳ ಮೇಲೆ ನಡೆಯುವ ಈ ದೌರ್ಜನ್ಯಕ್ಕೆ ಕಾರಣವಾಗಿರುವ ಭಯೋತ್ಪಾದಕ ಚಟುವಟಿಕೆಗಳನ್ನು ಮಟ್ಟ ಹಾಕಲೇಬೇಕು. ಈವರೆಗಿನ ವಿಧ್ವಂಸಕ ಕೃತ್ಯಗಳನ್ನು ನೋಡಿದರೆ, ದೇಶದ ಕಾನೂನಿಗೆ ಭಯೋತ್ಪಾದಕರು ಕವಡೆಕಾಸಿನ ಕಿಮ್ಮತ್ತನ್ನೂ ಕೊಟ್ಟಿಲ್ಲದಿರುವುದು ಅರಿವಿಗೆ ಬರುತ್ತದೆ. ಕಾನೂನಿನ ಭಯ ಅವರಲ್ಲಿ ಮೂಡಬೇಕು. ದೇಶದ್ರೋಹಿಗಳಿಗೆ ಯಾವುದೇ ರೀತಿಯ ರಿಯಾಯಿತಿ ತೋರಿಸದೆ ಬಗ್ಗುಬಡಿಯಬೇಕಿದೆ. ಪರೋಕ್ಷವಾಗಿ ಇವರಿಗೆ ನೆರವಾಗುವ ಸ್ಥಳೀಯರ ವಿರುದ್ಧ ಕಾನೂನಿನ ಅನ್ವಯ ಕ್ರಮ ಜರುಗಿಸಲಿ.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ಮುನ್ನೆಲೆಗೆ ಬರಲಿ ನೈಜ ಶೈಕ್ಷಣಿಕ ಸಮಸ್ಯೆ

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದ ರಾಷ್ಟ್ರೀಯ ಸಾಧನೆ ಸಮೀಕ್ಷೆಯ ಅಂಶಗಳು ಪ್ರಕಟಗೊಂಡಿದ್ದು, ವರದಿ ಪ್ರಕಾರ 2021ನೇ ಸಾಲಿನ 3, 5, 8 ಮತ್ತು 10ನೇ ತರಗತಿಯ ಮಕ್ಕಳ ಭಾಷೆ ಹಾಗೂ ಇತರ ವಿಷಯಗಳ ಕಲಿಕೆಯಲ್ಲಿ ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇಳಿಕೆ ಕಂಡುಬಂದಿದೆ. ಹತ್ತನೇ ತರಗತಿಯ ಆಧುನಿಕ ಭಾರತೀಯ ಭಾಷೆ ಮತ್ತು ಇತರ ವಿಷಯಗಳ ಕಲಿಕೆ, ಗ್ರಹಿಕೆಯ ಮಟ್ಟ ಶೇ 99ರಷ್ಟು ವಿದ್ಯಾರ್ಥಿಗಳಲ್ಲಿ ಸಾಧಾರಣ ಮತ್ತು ಅದಕ್ಕಿಂತ ಕಡಿಮೆ, ಅದೇ ರೀತಿ ಇಂಗ್ಲಿಷ್ ಕಲಿಕೆಯ ಮಟ್ಟ ಕೂಡ ಕಡಿಮೆ ಎಂದು ಹೇಳಲಾಗಿದೆ.

ಪಠ್ಯಗಳಲ್ಲಿ ಕೆಲವು ಪಾಠಗಳನ್ನು ಸೇರಿಸುವುದು, ಪದೇ ಪದೇ ತೆಗೆದುಹಾಕುವುದು ಇದಕ್ಕೆ ಪ್ರಮುಖ ಕಾರಣಗಳು ಎನ್ನಲಾಗಿದೆ. ರಾಜ್ಯದಲ್ಲಿ ಪಠ್ಯಪುಸ್ತಕ ಕುರಿತ ವಿವಾದ ತಾರಕಕ್ಕೇರಿರುವ ಈ ಹೊತ್ತಿನಲ್ಲಿ ಈ ಸಮೀಕ್ಷಾ ವರದಿಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಪಠ್ಯವನ್ನು ಬದಲಿಸುವ ಬದಲು ಈಗಾಗಲೇ ಪಠ್ಯದಲ್ಲಿರುವ ಪಾಠಗಳನ್ನು ಮಕ್ಕಳಿಗೆ ಹೇಗೆ ಕಲಿಸಲಾಗುತ್ತಿದೆ, ಅವರು ಪಾಠಗಳನ್ನು ಹೇಗೆ ಕಲಿಯುತ್ತಿದ್ದಾರೆ ಅಥವಾ ಗ್ರಹಿಸುತ್ತಿದ್ದಾರೆ ಎಂಬುದರ ಕುರಿತು ಗಂಭೀರವಾಗಿ ಚಿಂತಿಸಬೇಕಿದೆ. ಈ ಬಗೆಗಿನ ಚರ್ಚೆಗಳು ಕೂಡ ಮುನ್ನೆಲೆಗೆ ಬರಬೇಕಾಗಿದೆ. ಇಲ್ಲದಿದ್ದರೆ ಪಠ್ಯ ಕುರಿತ ವಿವಾದ ಕೇವಲ ಎಡ-ಬಲ ಎಂಬ ವಿವಾದವಾಗಿ, ನೈಜ ಶೈಕ್ಷಣಿಕ ಸಮಸ್ಯೆ ಹಾಗೆಯೇ ಉಳಿಯುತ್ತದೆ.

ಡಾ. ಮಹೇಶ್ ಮೂರ್ತಿ, ತುಮಕೂರು

ಪ್ರಬಲ ಪ್ರತಿಪಕ್ಷ ಬೇಕು, ಆದರೆ...

‘ಪ್ರಜಾಪ್ರಭುತ್ವ ಬಲಗೊಳ್ಳಲು ವಂಶಾಡಳಿತ ರಾಜಕಾರಣದಿಂದ ಹೊರತಾದ ಪ್ರಬಲ ಪ್ರತಿಪಕ್ಷ ಅತ್ಯಗತ್ಯ’ ಎಂದು ಪ್ರಧಾನಿ ನರೇಂದ್ರ ಮೋದಿ (ಪ್ರ.ವಾ., ಜೂನ್ 4) ಹೇಳಿದ್ದಾರೆ. ಅದು ಸರಿ. ಆದರೆ ಪ್ರತಿಪಕ್ಷಗಳು ಪ್ರಬಲವಾಗಿ ಬೆಳೆಯುವುದಾದರೂ ಹೇಗೆ? ಆಳುವ ಪಕ್ಷವು ಎಂಟು ವರ್ಷಗಳಿಂದ ಪ್ರತಿಪಕ್ಷಗಳ ಬುಡಕ್ಕೆ ಬಿಸಿ ನೀರೆರೆಯುತ್ತಾ ಧರ್ಮರಾಜಕಾರಣವನ್ನು ಮುಂದೊತ್ತಿ ಅಧಿಕಾರ ನಡೆಸುತ್ತಿದೆಯಲ್ಲವೇ? ಪ್ರತಿಪಕ್ಷಗಳು ಲೋಕಸಭೆಯಲ್ಲಿ ತಲೆಯೆತ್ತಲೂ ಬಿಡುತ್ತಿಲ್ಲ. ಉದಾಹರಣೆಗೆ, ನೋಟು ರದ್ದತಿ, ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವುದು, ಪೌರತ್ವ ತಿದ್ದುಪಡಿ ಕಾಯ್ದೆ, ಕೃಷಿ ಕಾಯ್ದೆ ತಿದ್ದುಪಡಿ ಮಸೂದೆಯಂತಹ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ವಿಸ್ತೃತ ಚರ್ಚೆಗೆ ಅವಕಾಶ ಕೊಡಲಿಲ್ಲ. ಸುಗ್ರೀವಾಜ್ಞೆ ಮೂಲಕ ಕೆಲವು ಕಾಯ್ದೆಗಳನ್ನು ಜಾರಿಗೊಳಿಸಲಾಯಿತು.

ಕೊರೊನಾ ಕಾಲಘಟ್ಟದಲ್ಲಿ ಅವಸರದಲ್ಲಿ ಜಾರಿಗೆ ತಂದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ದಿಡ್ಡಿಬಾಗಿಲಿನಲ್ಲಿ ರೈತರು ಒಂದು ವರ್ಷ ಪೂರ್ತಿ ಧರಣಿ ಸತ್ಯಾಗ್ರಹ ಹೂಡಿ ಅಪಾರ ಕಷ್ಟ ನಷ್ಟ ಅನುಭವಿಸಿದರು. ಅವರನ್ನು ಸೌಜನ್ಯಕ್ಕಾದರೂ ಪ್ರಧಾನಿ ಭೇಟಿ ಮಾಡಲಿಲ್ಲ. ಕೊನೆಗೆ ಉತ್ತರಪ್ರದೇಶ, ಪಂಜಾಬ್ ಮುಂತಾದ ರಾಜ್ಯಗಳ ಚುನಾವಣೆ ಹತ್ತಿರ ಬಂದಾಗ ಬೇಷರತ್ತಾಗಿ ಆ ಕಾಯ್ದೆಗಳನ್ನು ಹಿಂಪಡೆಯಲಾಯಿತು.

ಈಗಲೂ ದೇಶದ ಹಲವೆಡೆ ಕೋಮು ಘರ್ಷಣೆಗಳು, ಮಹಿಳೆಯರ ಮೇಲೆ ಅತ್ಯಾಚಾರಗಳು, ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಕಾಶ್ಮೀರ ಕಣಿವೆಯಲ್ಲಿ ಹಿಂದೂ ಅಲ್ಪಸಂಖ್ಯಾತ ಪಂಡಿತ ವರ್ಗ ಅಭದ್ರತೆ ಎದುರಿಸುತ್ತಿದೆ. ಪ್ರಸ್ತುತ ದೇಶದಲ್ಲಿ ಕಿಡಿ ಹಾರಿಸುವ ಕೋಮುಗಲಭೆಗಳನ್ನು ಆರಂಭದಲ್ಲೇ ಚಿವುಟಿ ಹಾಕಿ, ಮಸೀದಿಗಳಲ್ಲಿ ಮಂದಿರದ ತಡಕಾಟವನ್ನು ನಿಲ್ಲಿಸಿ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವತ್ತ ಸರ್ಕಾರವು ದೃಢ ಹೆಜ್ಜೆ ಇಡಬೇಕು. ತಾತ್ಪರ್ಯ, ಯಾವ ಕಾರಣಕ್ಕೂ ರಾಜಕೀಯದಲ್ಲಿ ಧರ್ಮ ಬೆರೆಯಬಾರದು. ಆಗ ಪ್ರತಿಪಕ್ಷಗಳು ತಾವಾಗಿಯೇ ಬಲಗೊಳ್ಳುತ್ತವೆ, ಜನತಂತ್ರ ಗಟ್ಟಿಗೊಳ್ಳುತ್ತದೆ ಮತ್ತು ಅಚ್ಛೇ ದಿನ ಬಂದೇ ಬರುತ್ತದೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕದ ಕಾಡಿನ ಸ್ವರೂಪ ಬದಲು

ದೇಶದಲ್ಲಿರುವ ಕಾಡಿನ ವಿಸ್ತೀರ್ಣ ಶೇ 0.22ರಷ್ಟು ಏರಿಕೆಯಾಗಿದೆ ಎನ್ನುತ್ತದೆ ಭಾರತದಲ್ಲಿ ಕಾಡಿನ ಸ್ಥಿತಿಗತಿ ವರದಿ–2021. ದೇಶದಲ್ಲಿ ಕಾಡಿನ ವಿಸ್ತೀರ್ಣ ಹೆಚ್ಚಾಗುವಲ್ಲಿ ಕರ್ನಾಟಕದ ಕೊಡುಗೆಯೂ ಇದೆ. ಅತಿಹೆಚ್ಚು ವಿಸ್ತೀರ್ಣದಷ್ಟು ಕಾಡು ಹೆಚ್ಚಾದ ರಾಜ್ಯಗಳಲ್ಲಿ ಕರ್ನಾಟಕವು 4ನೇ ಸ್ಥಾನದಲ್ಲಿ ಇದೆ. ಆದರೆ ಕಾಡಿನ ವಿಸ್ತೀರ್ಣ ಹೆಚ್ಚಾಗಿದ್ದರೂ, ರಾಜ್ಯದಲ್ಲಿ ಕಾಡಿನ ಸ್ವರೂಪದಲ್ಲಿ ಗಣನೀಯ ಬದಲಾವಣೆಗಳಾಗಿವೆ. ರಾಜ್ಯದಲ್ಲಿ ಕುರುಚಲು ಕಾಡಿನಲ್ಲಿನ ಪೊದೆ ಸಸ್ಯಗಳು ಮತ್ತು ಕಳೆ ಸಸ್ಯಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಅಂತೆಯೇ ರಾಜ್ಯದಲ್ಲಿ ದಟ್ಟ ಕಾಡಿನ ವಿಸ್ತೀರ್ಣ ಕಡಿಮೆಯಾಗಿದೆ. ಇದರ ಜತೆಯಲ್ಲಿ ಕಾಡಿನಲ್ಲಿರುವ ಬೃಹತ್ ಮರಗಳ ಸಂಖ್ಯೆಯೂ ಕಡಿಮೆಯಾಗಿದೆ. ಒಟ್ಟಾರೆಯಾಗಿ ಕಾಡಿನ ಇಡೀ ಸ್ವರೂಪವೇ ಬದಲಾಗಿದೆ.

ದೊಡ್ಡ ಮರಗಳ ಸಂಖ್ಯೆ ಇಳಿಕೆ

ರಾಜ್ಯದ ಕಾಡಿನಲ್ಲಿರುವ ದೊಡ್ಡ ಮರಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿದೆ. ರಾಜ್ಯದ ಕಾಡುಗಳಲ್ಲಿ ಹೊನಗಲು, ಕರಿಮತ್ತಿ, ಸಾಗುವಾನಿ, ಬೆಟ್ಟದಾವರಿಕೆ ಮತ್ತು ದಿಂಡುಗದ ಮರಗಳು ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಆದರೆ, 2019ಕ್ಕೆ ಹೋಲಿಸಿದರೆ, 2021ರಲ್ಲಿ ಈ ಮರಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಈ ಐದೂ ಜಾತಿಯ, ಎಲ್ಲಾ ಗಾತ್ರದ ಮರಗಳ ಸಂಖ್ಯೆಯೂ ಇಳಿಕೆಯಾಗಿದೆ ಎಂಬ ವಿವರ ಈ ವರದಿಯಲ್ಲಿ ಇದೆ. ರಾಜ್ಯದ ಕಾಡಿನಲ್ಲಿ ಈ ಜಾತಿಯ ಮರಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣ, ಈ ಮರಗಳಿಗೆ ಸಂಬಂಧಿಸಿದ ವಿವರವನ್ನು ಮಾತ್ರ ಈ ವರದಿಯಲ್ಲಿ ನೀಡಲಾಗಿದೆ.

2019ರಲ್ಲಿ ಇದ್ದ ಮರಗಳ ಸಂಖ್ಯೆ	ಮರಗಳ ಕಾಂಡದ ಸುತ್ತಳತೆ	2021ರಲ್ಲಿ ಗುರುತಿಸಲಾದ ಮರಗಳ ಸಂಖ್ಯೆ
18.61 ಕೋಟಿ	10-30 ಸೆಂ.ಮೀ.	14.95 ಕೋಟಿ
4.81 ಕೋಟಿ	30-60 ಸೆಂ.ಮೀ.	4.40 ಕೋಟಿ
61.13 ಲಕ್ಷ	60 ಸೆಂ.ಮೀ. ಗಿಂತಲೂ ಹೆಚ್ಚು	66.40 ಲಕ್ಷ

- ಈ ಐದೂ ಜಾತಿಗೆ ಸೇರಿದ, 10–30 ಸೆಂ.ಮೀ.ನಷ್ಟು ಕಾಂಡದ ಸುತ್ತಳತೆ ಇರುವ ಮರಗಳ ಪ್ರಮಾಣದಲ್ಲಿ ಶೇ 20ರಷ್ಟು ಇಳಿಕೆಯಾಗಿದೆ
- ಈ ಐದೂ ಜಾತಿಗೆ ಸೇರಿದ, 30–60 ಸೆಂ.ಮೀ.ನಷ್ಟು ಕಾಂಡದ ಸುತ್ತಳತೆ ಇರುವ ಮರಗಳ ಪ್ರಮಾಣದಲ್ಲಿ ಶೇ 8.5ರಷ್ಟು ಇಳಿಕೆಯಾಗಿದೆ
- ಈ ಐದೂ ಜಾತಿಗೆ ಸೇರಿದ, 60 ಸೆಂ.ಮೀ.ಗಿಂತಲೂ ಹೆಚ್ಚು ಕಾಂಡದ ಸುತ್ತಳತೆ ಇರುವ ಮರಗಳ ಪ್ರಮಾಣದಲ್ಲಿ ಮಾತ್ರ ಏರಿಕೆಯಾಗಿದೆ. ಇಂತಹ ಮರಗಳ ಸಂಖ್ಯೆಯಲ್ಲಿ ಶೇ 8.3ರಷ್ಟು ಏರಿಕೆಯಾಗಿದೆ

ಕಳೆ, ಪೊದೆ ಸಸ್ಯಗಳ ಪ್ರಮಾಣ ಇಳಿಕೆ

2019ಕ್ಕೆ ಹೋಲಿಸಿದರೆ, 2021ರ ವೇಳೆಗೆ ರಾಜ್ಯದ ಕಾಡಿನಲ್ಲಿರುವ ಕಳೆ ಮತ್ತು ಪೊದೆ ಜಾತಿಯ ಸಸ್ಯಗಳಿರುವ ಪ್ರದೇಶದ ವಿಸ್ತೀರ್ಣ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ರಾಜ್ಯದ ದಟ್ಟ ಕಾಡು, ತೆರೆದ ಕಾಡು ಮತ್ತು ಕುರುಚಲು ಕಾಡಿನಲ್ಲಿ ಲಂಟಾನಾ, ತೀವ್ರಗಂಧ ಕಳೆ ಸಸ್ಯಗಳು ಭಾರಿ ಪ್ರಮಾಣದಲ್ಲಿ ಇವೆ. ಬೇರೆಲ್ಲಾ ಕಳೆ ಸಸ್ಯಗಳಿಗ ಹೋಲಿಸಿದರೆ, ಈ ಕಳೆಗಳ ಪ್ರಮಾಣ ಅತಿಹೆಚ್ಚು. ಆದರೆ, ಈ ಎರಡು ವರ್ಷಗಳಲ್ಲಿ ಈ ಕಳೆ ಸಸ್ಯಗಳಿರುವ ಪ್ರದೇಶದ ವಿಸ್ತೀರ್ಣದಲ್ಲಿ ಶೇ 50ರಷ್ಟು ಇಳಿಕೆಯಾಗಿದೆ. 2019ರಲ್ಲಿ ಈ ಎರಡೂ ಕಳೆ ಸಸ್ಯಗಳು ಇರುವ ಪ್ರದೇಶದ ವಿಸ್ತೀರ್ಣವು 5,348 ಚದರ ಕಿ.ಮೀ.ನಷ್ಟು ಇತ್ತು. 2021ರಲ್ಲಿ ಈ ವಿಸ್ತೀರ್ಣವು 2,675 ಚದರ ಕಿ.ಮೀ.ಗಳಿಗೆ ಇಳಿಕೆಯಾಗಿದೆ. ಇದು ಭಾರಿ ಪ್ರಮಾಣದ ಇಳಿಕೆ. ಉಳಿದ ಕಳೆ ಸಸ್ಯಗಳಿರುವ ಪ್ರದೇಶದ ವಿಸ್ತೀರ್ಣದಲ್ಲೂ ಇಷ್ಟೇ ಪ್ರಮಾಣದ ಇಳಿಕೆಯಾಗಿದೆ. ಇವು ಇಳಿಕೆಯಾಗಲು ಏನು ಕಾರಣ ಎಂಬುದನ್ನು ಈ ವರದಿಯಲ್ಲಿ ಉಲ್ಲೇಖಿಸಿಲ್ಲ. ಜತೆಗೆ ಇಂತಹ ಭಾರಿ ಪ್ರಮಾಣದ ಬದಲಾವಣೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆಯೂ ಈ ವರದಿಯಲ್ಲಿ ಯಾವುದೇ ಮಾಹಿತಿ ಇಲ್ಲ.

2019ರಲ್ಲಿ ಇದ್ದ ವಿಸ್ತೀರ್ಣ	ಕಳೆ ಸಸ್ಯ	2021ರಲ್ಲಿ ಇದ್ದ ವಿಸ್ತೀರ್ಣ
2,863 ಚದರ ಕಿ.ಮೀ.	ಲಂಟಾನಾ	1,432 ಚದರ ಕಿ.ಮೀ.
2,485 ಚದರ ಕಿ.ಮೀ.	ತೀವ್ರಗಂಧ	1,243 ಚದರ ಕಿ.ಮೀ.
141 ಚದರ ಕಿ.ಮೀ.	ನಾಯಿತುಳಸಿ	70 ಚದರ ಕಿ.ಮೀ.
122 ಚದರ ಕಿ.ಮೀ.	ಗಂಜಿಮುಳ್ಳು	61 ಚದರ ಕಿ.ಮೀ.
109 ಚದರ ಕಿ.ಮೀ.	ತಗಚೆಗಿಡ	54 ಚದರ ಕಿ.ಮೀ.

ದೇಶದ ಕಾಡಿನ ಪಾಡು

ದೇಶದಲ್ಲಿ ಕಾಡಿನ ಪ್ರದೇಶ ಅಲ್ಪ ಪ್ರಮಾಣ ಮಾತ್ರ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ. ಕೆಲವು ರಾಜ್ಯಗಳಲ್ಲಿ ಕಾಡಿನ ವಲಯ ಹಿಗ್ಗಿದ್ದರೆ, ಕೆಲವು ರಾಜ್ಯಗಳಲ್ಲಿ ಕುಗ್ಗಿದೆ. 2019–2021ರ ಅವಧಿಯಲ್ಲಿ ದಕ್ಷಿಣದ ರಾಜ್ಯಗಳಾದ ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕದಲ್ಲಿ ಕಾಡು ಬೆಳೆದಿದೆ. ಕರ್ನಾಟಕದಲ್ಲಿ 155 ಚ.ಕಿ.ಮೀ.ನಷ್ಟು ಹೆಚ್ಚಳವಾಗಿದ್ದು, ದೇಶದ ಅರಣ್ಯ ವಿಸ್ತರಣೆಗೆ ಕೊಡುಗೆ ನೀಡಿದೆ. ಒಡಿಶಾ, ಜಾರ್ಖಂಡ್ ಕೂಡಾ ವ್ಯಾಪ್ತಿ ವಿಸ್ತರಿಸಿಕೊಂಡ ಅಗ್ರ ಐದು ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಅತಿಹೆಚ್ಚಿನ ಪ್ರಮಾಣದಲ್ಲಿ ಕಾಡು ಕಳೆದುಕೊಂಡ ಐದು ರಾಜ್ಯಗಳ ಪಟ್ಟಿಯಲ್ಲಿ ಈಶಾನ್ಯ ರಾಜ್ಯಗಳೇ ಇವೆ. ಅರುಣಾಚಲ ಪ್ರದೇಶ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಮೇಘಾಲಯ ರಾಜ್ಯಗಳಲ್ಲಿ ಕಾಡು ಇಳಿಕೆಯಾಗಿದೆ. ಅರುಣಾಚಲ ಪ್ರದೇಶವು ಅತಿಹೆಚ್ಚು, ಅಂದರೆ 257 ಚ.ಕಿ.ಮೀ. ಅರಣ್ಯವನ್ನು ಕಳೆದುಕೊಂಡಿದೆ.

ಯಾವ ರಾಜ್ಯದಲ್ಲಿ ಎಷ್ಟು ವ್ಯತ್ಯಾಸ



ಕಾಡು ವಿಸ್ತರಣೆ ಅಲ್ಪ

ಭಾರತದಲ್ಲಿ ಕಾಡಿನ ಸ್ಥಿತಿಗತಿ ವರದಿ–2021ರ ಪ್ರಕಾರ, ದೇಶದಲ್ಲಿ 7,13,789 ಚ.ಕಿ.ಮೀ ಭೂಭಾಗದಲ್ಲಿ ಅರಣ್ಯವಿದೆ. 2019ರ ವರದಿ ಪ್ರಕಾರ 7,12,249 ಚ.ಕಿ.ಮೀ. ಜಾಗದಲ್ಲಿ ಕಾಡು ಇತ್ತು. ಇದು ಕುರುಚಲು ಅಥವಾ ಪೊದೆ ರೂಪದ ಕಾಡುಗಳನ್ನು ಹೊರತುಪಡಿಸಿದ ಅರಣ್ಯವಾಗಿದೆ. 2019ಕ್ಕೆ ಹೋಲಿಸಿದರೆ 2021ರಲ್ಲಿ ಅರಣ್ಯ ವ್ಯಾಪ್ತಿಯು 1,540 ಚದರ ಕಿಲೋಮೀಟರ್‌ನಷ್ಟು ವಿಸ್ತರಣೆಯಾಗಿದೆ ಎಂದು ವರದಿ ತಿಳಿಸಿದೆ. ಈ ಪೈಕಿ, ಅತಿ ದಟ್ಟ ಕಾಡಿನ ಪ್ರಮಾಣ 501 ಚದರ ಕಿಲೋಮೀಟರ್‌ನಷ್ಟು, ತೆರೆದ ಕಾಡಿನ ವ್ಯಾಪ್ತಿಯು 2,621 ಚ.ಕಿ.ಮೀ.ನಷ್ಟು ಹೆಚ್ಚಾಗಿದೆ. ಆದರೆ ಇದೇ ಅವಧಿಯಲ್ಲಿ ದೇಶದ ದಟ್ಟಕಾಡಿನ ವ್ಯಾಪ್ತಿ ಕುಗ್ಗಿದ್ದು, 1,582 ಚದರ ಕಿಲೋ ಮೀಟರ್‌ನಷ್ಟು ಕಡಿತಗೊಂಡಿದೆ ಎಂದು ದತ್ತಾಂಶಗಳು ತಿಳಿಸಿವೆ.

ಕಾಡಿನ ಪ್ರಬೇಧ ವಿಸ್ತರಣೆ/ಕಡಿತ (ಚ.ಕಿ.ಮೀ)

ಕಾಡಿನ ಪ್ರಬೇಧ	2019	2021
ಅತಿ ದಟ್ಟಕಾಡು	99,278	99,779
ದಟ್ಟ ಕಾಡು	3,08,472	3,06,890
ತೆರೆದ ಕಾಡು	3,04,449	3,07,120

2019–21 ಅವಧಿಯ ವ್ಯತ್ಯಾಸ (ಚ.ಕಿ.ಮೀ)

ಅತಿ ದಟ್ಟ ಕಾಡು	ದಟ್ಟ ಕಾಡು	ತೆರೆದ ಕಾಡು
501	-1,582	2,621

ವರದಿ: ಜಯಸಿಂಹ ಆರ್., ಅಮೃತ್ ಕಿರಣ್ ಬಿ. ಎಂ.

ನೆಲೆ ಕಳೆದುಕೊಳ್ಳುತ್ತಿರುವ ಬಿದಿರು

ರಾಜ್ಯದ ಕಾಡಿನಲ್ಲಿ ಬಿದಿರು ಇರುವ ಪ್ರದೇಶದ ವಿಸ್ತೀರ್ಣ ಕಡಿಮೆಯಾಗುತ್ತಿದೆ. 2019ರಲ್ಲಿ ಕಾಡಿನಲ್ಲಿ ಇದ್ದ ಬಿದಿರು ಬೆಳೆದಿರುವ ಪ್ರದೇಶದ ವಿಸ್ತೀರ್ಣಕ್ಕೆ ಹೋಲಿಸಿದರೆ, 2021ರಲ್ಲಿ ವಿಸ್ತೀರ್ಣವು ಶೇ 15ರಷ್ಟು ಇಳಿಕೆಯಾಗಿದೆ. ಎರಡು ವರ್ಷದಲ್ಲಿ ಇಷ್ಟು ಪ್ರಮಾಣದ ಇಳಿಕೆಯು, ಕಾಡಿನ ಸ್ವರೂಪದಲ್ಲಿ ಭಾರಿ ಬದಲಾವಣೆಗೆ ಕಾರಣವಾಗಿದೆ. 2019ರಲ್ಲಿ ದೇಶದ ಕಾಡಿನಲ್ಲಿದ್ದ ಬಿದಿರಿನ ಬೆಳೆಯ ವಿಸ್ತೀರ್ಣದಲ್ಲಿ ಕರ್ನಾಟಕದ ಪಾಲು ಶೇ 6.36ರಷ್ಟು ಇತ್ತು. 2021ರಲ್ಲಿ ದೇಶದ ಕಾಡಿನಲ್ಲಿರುವ ಬಿದಿರು ಇದ್ದ ಪ್ರದೇಶದ ವಿಸ್ತೀರ್ಣದಲ್ಲಿ ರಾಜ್ಯದ ಪಾಲು ಶೇ 5.77ಕ್ಕೆ ಕುಸಿದಿದೆ.

2019ರಲ್ಲಿ ಬಿದಿರು ಇದ್ದ ಪ್ರದೇಶದ ವಿಸ್ತೀರ್ಣ	2021ರಲ್ಲಿ ಬಿದಿರು ಇದ್ದ ಪ್ರದೇಶದ ವಿಸ್ತೀರ್ಣ
10,181 ಚದರ ಕಿ.ಮೀ.	8,624 ಚದರ ಕಿ.ಮೀ.

ಆಧಾರ: ಭಾರತದಲ್ಲಿನ ಕಾಡಿನ ಸ್ಥಿತಿಗತಿ ವರದಿ–2021 ಮತ್ತು 2019

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 139

ಶಿವಮೋಹಕ್ಕೆ ಶಕ್ತಿಯ ಅವತಾರ

ಬ್ರಹ್ಮನಿಗೆ ಬುದ್ಧಿ ಹೇಳುವುದನ್ನು ಮುಂದುವರೆಸಿದ ವಿಷ್ಣು, ತ್ರಿಗುಣಗಳ ಸಂಬಂಧವಿಲ್ಲದವನಾಗಿರುವ ಶಿವನು ಮಾಯಾಮಯನಾದ ಸ್ವರೂಪವುಳ್ಳವನಲ್ಲ; ಪರಮಾರ್ಥವಾದ ಸ್ವರೂಪವುಳ್ಳವನು. ನಿಸ್ಪೃಹನು ಮಾಯೆಯ ಸಂಬಂಧವಿಲ್ಲದವನಾದರೂ ಮಾಯಾಮಯವಾದ ಅನೇಕ ಅದ್ಭುತ ಘಟನೆಗಳನ್ನು ಪ್ರದರ್ಶಿಸುವ ಆನಂದಸ್ವರೂಪನು. ತನ್ನ ಸ್ವರೂಪದಲ್ಲಿಯೇ ವಿಹರಿಸುವವನು. ಸುಖ-ದುಃಖ, ಶೀತೋಷ್ಣ ಮುಂತಾದ ದ್ವಂದ್ವಗಳಿಲ್ಲದ ಸದಾ ಸುಖಸ್ವರೂಪನು. ಯೋಗಿ. ದುಃಖಿತರಲ್ಲಿ ಸದಾ ಕರುಣೆಯುಳ್ಳವನಾದಂತಹ ರುದ್ರನನ್ನು ನಿನ್ನ ಸಾಮಾನ್ಯಪುತ್ರನೆಂದು ತಿಳಿದಿರುವೆಯಲ್ಲಾ?!

ಶಂಕರನು ಪತ್ನಿಯನ್ನು ಪರಿಗ್ರಹಿಸಲೇಬೇಕೆಂಬ ಬಯಕೆಯು ಎಂದರೆ ಶಕ್ತಿದೇವಿಯ ಸಾಕ್ಷಾತ್ಕಾರಕ್ಕೆ ಶಿವನನ್ನು ಸ್ಮರಿಸುತ್ತಾ ತಪಸ್ಸನ್ನು ಮಾಡು. ನಿನ್ನ ಬಯಕೆಯನ್ನು ಈಡೇರಿಸುವಂತೆ ಶಿವಶಕ್ತಿಯನ್ನು ಧ್ಯಾನಮಾಡು. ದೇವತೆಗಳಿಗೊಡೆಯಳಾದ ಆ ದೇವಿ ಪ್ರಸನ್ನಳಾದರೆ ನಿನ್ನ ಎಲ್ಲಾ ಕಾರ್ಯವನ್ನೂ ನೆರವೇರಿಸುವಳು. ದೇವಿಯು ಸಗುಣವಾದ ರೂಪವನ್ನು ಧರಿಸಿ ಲೋಕದಲ್ಲಿ ಯಾರ ಪುತ್ರಿಯಾಗಿ ಅವತರಿಸಿದರೆ, ಅವಳು ಶಿವನ ಪತ್ನಿಯಾಗಬಹುದು ಅಂತ ಯೋಚಿಸು. ಇದಕ್ಕಾಗಿ ದಕ್ಷಬ್ರಹ್ಮನಿಗೆ ದೇವಿಯನ್ನು ಕುರಿತು ಭಕ್ತಿಯಿಂದ ತಪಸ್ಸು ಮಾಡುವಂತೆ ಸೂಚಿಸು. ಅವಳು ಶಿವನ ಪತ್ನಿಯಾಗಿ ಅವತರಿಸುವಂತಾಗಲಿ ಎಂದು ಪ್ರಾರ್ಥಿಸು. ಪರಬ್ರಹ್ಮಸ್ವರೂಪಿಗಳಾದ ಶಿವ ಮತ್ತು ದೇವಿಯರು ಭಕ್ತಪರಾಧೀನರು. ಭಕ್ತರ ಇಚ್ಛೆ ಪೂರೈಸಲು ಸಗುಣರೂಪವನ್ನು ಧರಿಸುವರು ಎಂದು ಬ್ರಹ್ಮನಿಗೆ ವಿಷ್ಣು ಹಿತೋಪದೇಶವನ್ನು ಮಾಡುತ್ತಾನೆ.

ನಂತರ ವಿಷ್ಣುವು 'ಎಲೈ, ವಿಧಿಯೇ! ಹಿಂದೆ ನಾವೀರ್ವರು ಶಿವನ ಇಚ್ಛೆಯಿಂದ ಜನಿಸಿದೆವು. ಆಗ ನಾವು ಶಿವನನ್ನು ಪ್ರಾರ್ಥಿಸಿದಾಗ ಪ್ರತ್ಯಕ್ಷನಾಗಿ ಯಾವ ಮಾತನ್ನು ನಮಗೆ ಹೇಳಿದ್ದ ಎಂಬುದನ್ನು ಈಗ ಸ್ಮರಿಸು. ಆದರೆ ನೀನು ಅದೆಲ್ಲವನ್ನೂ ಶಿವಶಕ್ತಿಯ ಮಹಿಮೆಯಿಂದ ಮರೆತು ಬಿಟ್ಟಿರುವೆ. ಆ ದೇವಿ ಸರ್ವೋತ್ಕೃಷ್ಟಳು. ಅವಳಿಂದಲೇ ಈ ಜಗತ್ತೆಲ್ಲವೂ ಮೋಹಗೊಳಿಸಲ್ಪಟ್ಟಿರುವುದು. ಶಿವನ ಹೊರತು ಆ ದೇವಿಯನ್ನು ಇನ್ನಾರೂ ತಿಳಿಯಲಾರರು. ಯಾವಾಗ ನಿರ್ಗುಣನಾದ ಶಿವನು ತನ್ನ ಇಚ್ಛೆಯಿಂದ ಸಗುಣಸ್ವರೂಪವನ್ನು ಧರಿಸಿದನೋ, ಆಗಲೇ ಈಶ್ವರನು ತನ್ನ ಶಕ್ತಿಯಿಂದ ನನ್ನನ್ನೂ ನಿನ್ನನ್ನೂ ಸೃಷ್ಟಿಸಿದ. ನಿನಗೆ ಸೃಷ್ಟಿಕ್ರಮ ಉಪದೇಶಿಸಿದ. ನನಗೆ ಜಗತ್ತನ್ನು ಪಾಲಿಸುವಿಕೆಯನ್ನು ಉಪದೇಶಿಸಿದ. ಹೀಗಾಗಿ ಆ ಶಿವನೇ ಜಗತ್ಕರ್ತ ಮತ್ತು ಪಾಲಕ. ನಾವಿಬ್ಬರೂ ನಿಮಿತ್ತ ಮಾತ್ರ. ಆಗ ನಾವು ಪರಶಿವನನ್ನು 'ಓ ಪರಮೇಶ್ವರ, ನೀನೂ ಗುಣರೂಪಗಳನ್ನು ಧರಿಸಿ ಅವತಾರವನ್ನು ಎತ್ತಿ, ಲೋಕೋದ್ಧಾರಮಾಡು' ಎಂದು ಪ್ರಾರ್ಥಿಸಿದೆವು.

ನಮ್ಮ ಪ್ರಾರ್ಥನೆಗೆ ಕರುಣಾಮೂರ್ತಿಯಾದ ಪರಮೇಶ್ವರ ನಕ್ಕು ಹೇಳಿದ್ದ, 'ಈ ನನ್ನ ಸ್ವರೂಪವು ಬ್ರಹ್ಮನ ಶರೀರದಿಂದ ಸಗುಣವಾಗಿ ಅವತರಿಸುವುದು. ಆ ರೂಪಕ್ಕೆ ರುದ್ರನೆಂದು ಹೆಸರು. ನನ್ನ ಪೂರ್ಣರೂಪನಾದ ರುದ್ರನನ್ನು ಸದಾ ನೀವು ಪೂಜಿಸಬೇಕು. ಅವನು ಸಕಲ ಕಾರ್ಯವನ್ನೂ ಮಾಡುವನು. ಜಗತ್ತನ್ನು ಸಂಹರಿಸುವ ರುದ್ರನು ಗುಡಿಗಳಿಗೊಡೆಯ, ಅವ್ಯಕ್ತ ಬ್ರಹ್ಮಸ್ವರೂಪ. ತ್ರಿಮೂರ್ತಿಗಳಾದ ನೀವು ನನ್ನ ಸ್ವರೂಪರು. ಆದರೂ ರುದ್ರನು ನನ್ನ ಪೂರ್ಣವಾದ ಸ್ವರೂಪವುಳ್ಳವನು. ಉಮಾದೇವಿಯಿಂದ ಮೂರು ಸಗುಣರೂಪಗಳು ಆಗುವುವು. ಅವರೇ ಲಕ್ಷ್ಮಿ-ಸರಸ್ವತಿ-ಸತೀದೇವಿ. ಮೊದಲನೆ ರೂಪವಾದ ಲಕ್ಷ್ಮಿಯು ಹರಿಯಾದ ನನ್ನ ಪತ್ನಿ. ಎರಡನೆಯದಾದ ಸರಸ್ವತಿಯು ಬ್ರಹ್ಮನಾದ ನಿನ್ನ ಪತ್ನಿ. ಮೂರನೆ ರೂಪವಾದ ಸತೀದೇವಿಯು ರುದ್ರನ ಪತ್ನಿ. ಈ ಮೂರು ತ್ರಿದೇವಿರೂಪಗಳೂ ಶಿವಶಕ್ತಿಯವು. ಸತೀದೇವಿಯೇ ಶಕ್ತಿದೇವಿಯ ಪೂರ್ಣವಾದ ಸ್ವರೂಪವುಳ್ಳವಳು ಎಂದು ಪರಮೇಶ್ವರನು ಹೇಳಿ ಅಂತರ್ಧಾನನಾದ. ಕೆಲವು ಕಾಲದ ನಂತರ ನಾವು ಪತ್ನಿಯನ್ನು ಪರಿಗ್ರಹಿಸಿದೆವು, ಆದರೆ ಕೈಲಾಸವಾಸಿಯಾದ ರುದ್ರನು ಪತ್ನಿಯನ್ನು ಪರಿಗ್ರಹಿಸಲಿಲ್ಲ. ಮುಂದೆ ಆ ಶಿವಶಕ್ತಿಯು ಸತೀದೇವಿಯ ರೂಪದಿಂದ ಅವತರಿಸುವಳು. ಅವಳನ್ನು ಶಿವ ಪರಿಗ್ರಹಿಸುವ. ಆದ್ದರಿಂದ ಶಿವಶಕ್ತಿಯ ಅವತಾರಕ್ಕಾಗಿ ನೀನು ಮತ್ತು ನಿನ್ನ ಮಗ ದಕ್ಷಯಜ್ಞ ಸರ್ವಪ್ರಯತ್ನ ಮಾಡಿ' ಎಂದು ವಿಷ್ಣು ಹೇಳಿ ಅಂತರ್ಧಾನನಾದ. ಶಿವನನ್ನು ಮೋಹಗೊಳಿಸುವ ವಿಧಾನ ತಿಳಿದ ಬ್ರಹ್ಮನಿಗೆ ತುಂಬಾ ಸಂತೋಷವಾಯಿತು ಎಂಬಲ್ಲಿಗೆ ಸತೀಖಂಡದ ಹತ್ತನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ತಾಳ್ಮೆಯೊಂದೇ ಪರಿಹಾರ

ಬಾಳ್ಕೆಯಲಿ ನೂರೆಂಟು ತೊಡಕು ತಿಣಕುಗಳುಂಟು |
ಕೇಳ್ಕೆಮಾಣ್ಕೆಗಳಿಗವು ಜಗ್ಗವೊಂದಿನಿಸುಂ ||
ಗೊಳ್ಕರೆದರೇನು ಫಲ ಗುದ್ದಾಡಲೇನು ಫಲ ? |
ಪಲ್ಕಿರಿದು ತಾಳಿಕೊಳೊ – ಮಂಕುತಿಮ್ಮ || 643 ||

ಪದ-ಅರ್ಥ: ಬಾಳ್ಕೆಯಲಿ = ಬಾಳಿನಲ್ಲಿ, ತಿಣಕು = ಆಯಾಸ, ಕೇಳ್ಕೆ ಮಾಣ್ಕೆಗಳಿಗವು = ಕೇಳ್ಕೆಮಾಣ್ಕೆಗಳಿಗೆ (ಒಪ್ಪುವುದು, ಒಪ್ಪದಿರುವುದು) + ಅವು, ಜಗ್ಗವೊಂದಿನಿಸುಂ = ಜಗ್ಗವು (ಜಗ್ಗುವುದಿಲ್ಲ) + ಒಂದು + ಇನಿಸುಂ (ಸ್ವಲ್ಪವೂ), ಗೋಳ್ಕೆರೆದರೇನು = ಗೋಳು + ಕರೆದರೆ + ಏನು, ಪಲ್ಕಿರಿದು = ಹಲ್ಲುಕಿರಿದು.

ವಾಚ್ಯಾರ್ಥ: ಬದುಕಿನ ಪ್ರಯಾಣದಲ್ಲಿ ಅನೇಕ ತೊಡಕುಗಳು, ಆಯಾಸಗಳಿವೆ. ನಾವು ಅದನ್ನು ಒಪ್ಪುತ್ತೇವೋ, ಬಿಡುತ್ತೇವೊ, ಆ ಕಷ್ಟಗಳು ಜಗ್ಗುವುದಿಲ್ಲ. ಸುಮ್ಮನೇ ಗೋಳು ಕರೆಯುತ್ತ, ಗುದ್ದಾಡಿದರೆ ಏನು ಪ್ರಯೋಜನ? ನಗುಮೊಗದಿಂದ ಅವುಗಳನ್ನು ತಾಳಿಕೊ.

ವಿವರಣೆ: ಹನ್ನೆರಡನೆಯ ಶತಮಾನದ ವಚನಕಾರ ಹೆಂಡದ ಮಾರಯ್ಯ ಒಂದು ವಚನದಲ್ಲಿ ಬದುಕಿನ ಕಷ್ಟಗಳನ್ನು ಕಟ್ಟಿಕೊಡುತ್ತಾನೆ.

ಮಣ್ಣು, ಹೊನ್ನು ಹೆಣ್ಣೆಂಬ ತ್ರಿಭಂಗಿಯಲ್ಲಿ ಭಂಗಿತರಾಗಿ,
ಆಸೆಯೆಂಬ ಮಧುಪಾನದಿಂದ ಉಕ್ಕಲಿತವಿಲ್ಲದೆ,
ವಸ್ತುವ ಮುಟ್ಟುವದಕ್ಕೆ ದೃಷ್ಟವಿಲ್ಲದೆ, ಕಷ್ಟದ ಮರವೆಯಲ್ಲಿ,
ದೃಷ್ಟದ ಸುರಾಪಾನವ ಕೊಂಡು ಮತ್ತರಾಗುತ್ತ,
ಇಷ್ಟದ ದೃಷ್ಟದ ಚಿತ್ತ ಮುತ್ತುಂಟೆ?
ಧರ್ಮೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು.

ಜೀವನದ ದಾರಿಯಲ್ಲಿ ಯಾವ ಯಾವ ಆಕರ್ಷಣೆಗಳು, ಯಾವ ಪ್ರಮಾಣದಲ್ಲಿ ನಮ್ಮನ್ನು ಸೆಳೆಯುತ್ತದೆ, ದಿಕ್ಕುತಪ್ಪಿಸುತ್ತದೆ ಎಂಬುದನ್ನು ವಚನ ತಿಳಿಸುತ್ತದೆ. ಯಾರ ಬದುಕು ಅತ್ಯಂತ ಸುಗಮ? ಇಂಗ್ಲೀಷಿನಲ್ಲಿ ಮಾತೊಂದಿದೆ, 'Happiest are those that are dead and never born' (ಸತ್ತು ಹೋದವರು ಮತ್ತು ಹುಟ್ಟದಿರುವವರು ಮಾತ್ರ ಪರಮಸುಖಿಗಳು). ನಮ್ಮ ಕಷ್ಟಗಳು ತಡೆಯಲಾರದಷ್ಟಿವೆ ಎಂದುಕೊಳ್ಳುತ್ತಲೇ ಬೇರೆಯವರು ಚೆನ್ನಾಗಿದ್ದಾರೆ ಎಂದು ಭಾವಿಸುತ್ತೇವೆ. ಮತ್ತೊಬ್ಬರ ದುಃಖ ನಮಗೆ ಕಾಣುವುದಿಲ್ಲ. ಅವರ ಬದುಕನ್ನು ಹತ್ತಿರದಿಂದ ಕಂಡಾಗ ಮಾತ್ರ ಅವರ ತಲ್ಲಣಗಳು ಗೋಚರವಾಗುತ್ತವೆ. ಒರಿಸ್ಸಾದ ಹವ್ಯಾಸಿ ರಂಗಭೂಮಿಯಲ್ಲಿ ಒಬ್ಬ ನಟ ಶ್ರೀರಾಮನ ಪಾತ್ರ ಮಾಡುತ್ತಿದ್ದ. ಅವನು ನೋಡುವುದಕ್ಕೆ ಸುಂದರಾಂಗ. ರಾಮನ ವೇಷ ಹಾಕಿಕೊಂಡು ರಂಗಭೂಮಿಯ ಮೇಲೆ ಬಂದರೆ ಜನ ಕುಳಿತಲ್ಲೇ ನಮಸ್ಕಾರ ಮಾಡುತ್ತಿದ್ದರು. ಅವನ ಮಾತು, ನಡೆ, ಅವನನ್ನು ನಿಜವಾಗಿಯೂ ಶ್ರೀರಾಮನನ್ನಾಗಿಯೇ ಮಾಡಿತ್ತು. ನಾಟಕ ಮುಗಿದ ಮೇಲೆ ಜನ ಸಾಲುಸಾಲಾಗಿ ಬಂದು ಕಾಲುಮುಟ್ಟಿ ನಮಸ್ಕಾರ ಮಾಡುತ್ತಿದ್ದರು. ಹುಡುಗಿಯರಂತೂ ಅವನೇ ತಮ್ಮ ಗಂಡನಾಗಬೇಕೆಂದು ಬೇಡಿಕೊಳ್ಳುತ್ತಿದ್ದರು. ಒಂದು ದಿನ ನಾಟಕ ಮುಗಿದು ಹೊರಬಂದ ನಟ ನೆಲಕ್ಕೆ ಬಿದ್ದ. ಆಸ್ಪತ್ರೆಗೆ ಹಾಕಿದರೆ, ವೈದ್ಯರು ಹೇಳಿದರು, 'ಅವನಿಗೆ ಔಷಧಿ ಬೇಡ, ಹೊಟ್ಟೆಗೆ ಆಹಾರ ಬೇಕು. ಆತ ಮೂರು ದಿನದಿಂದ ಏನೂ ತಿಂದಿಲ್ಲ'. ರಂಗಭೂಮಿಯ ಮೇಲೆ ಶ್ರೀರಾಮ, ನಿಜಜೀವನದಲ್ಲಿ ಉಪವಾಸಿ.

ಕಗ್ಗ ಹೇಳುತ್ತದೆ ಬದುಕಿನಲ್ಲಿ ಕಗ್ಗಂಟುಗಳು ಅನೇಕ. ಏನು ಮಾಡಿದರೂ ಅವುಗಳನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. What cannot be cured should be endured ಎನ್ನುವ ಇಂಗ್ಲಿಷಿನ ಮಾತಿನಂತೆ, ಕಷ್ಟಗಳನ್ನು ಎದುರಿಸುತ್ತಲೇ, ನಗುತ್ತಲೇ ಅವುಗಳನ್ನು ಸಹಿಸಿಕೊಳ್ಳಬೇಕು. ಸಹನೆಗಿಂತ ದೊಡ್ಡ ಔಷಧಿ ಇಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಷಷ್ಠಿ ಗಂ. 06-40 **ನಕ್ಷತ್ರ:** ಮಘಾ ಗಂ. 26-26 **ಯೋಗ:** ಹರ್ಷಣ ಗಂ. 28-52, **ಕರಣ:** ತೈತಿಲ ಗಂ. 06-40, ವೃಷಭ ಮಾಸದ 22 ನೇ ದಿನ.
ರಾಹುಕಾಲ: ಬೆಳಿಗ್ಗೆ 07:30 – 09:00
ಸೂರ್ಯೋದಯ: 06-06 **ಸೂರ್ಯಾಸ್ತ:** 06-52
ಮುಸ್ಲಿಂ ದಿನಾಂಕ: 06 ಜುಲ್ಹಾಯದ್
ಅದೃಷ್ಟ ಸಂಖ್ಯೆ: 8, 12

ಮೇಷ: ನಿಮ್ಮ ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಈ ದಿನದಿಂದ ಪ್ರಾರಂಭಿಸಿ. ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆ. ಕೆಲಸಗಾರರಿಂದ ಅಸಹಕಾರ.

ವೃಷಭ: ನಿಮ್ಮ ಯಶಸ್ಸಿಗೆ ಕಾರಣರಾದವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿಯೇ ಇರಿಸಿಕೊಳ್ಳಿ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ.

ಮಿಥುನ: ನಿಮ್ಮ ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸಿ.

ಕರ್ಕಾಟಕ: ಸಂಘ-ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಸಹೋದರಿಯ ಮದುವೆಯಂತಹಾ ಸಂದರ್ಭಕ್ಕೆ ಆಪ್ತರೊಬ್ಬರು ನಿಮ್ಮ ನೆರವಿಗೆ ನಿಲ್ಲಲಿದ್ದಾರೆ.

ಸಿಂಹ: ಎಲೆಕ್ಟ್ರಿಕಲ್ ವಸ್ತುಗಳ ಮಾರಾಟದಿಂದ ಅಧಿಕ ವರಮಾನ. ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ತೀವ್ರ ಪ್ರಯತ್ನವನ್ನು ನಡೆಸಿ. ಸ್ವಲ್ಪ ಜಾಣತನ ಪ್ರದರ್ಶಿಸಿ.

ಕನ್ಯಾ: ನ್ಯಾಯಾಂಗ ಇಲಾಖೆಯಲ್ಲಿ ಜೀವನ ನಡೆಸುತ್ತಿರುವವರಿಗೆ ಹಣದ ಆಸೆ ತೋರಿಸಿ ತಪ್ಪು ಕೆಲಸವನ್ನು ಮಾಡುವಂತೆ ಪ್ರಚೋದಿಸುವವರು ಎದುರಾಗಲಿದ್ದಾರೆ.

ತುಲಾ: ಚಿತ್ರಕಲೆ ಮತ್ತು ಸಾಹಿತಿಗಳಿಗೆ ಶುಭವಾರ್ತೆ ಬರಲಿದೆ. ಉದ್ಯೋಗ ನಿಮಿತ್ತವಾಗಿ ಪ್ರಯಾಣ ಸಂಭವ ಇರುವುದು. ನೀವು ಯಶಸ್ಸಿನ ಹಾದಿಯಲ್ಲಿದ್ದೀರಿ.

ವೃಶ್ಚಿಕ: ಸ್ನೇಹಿತನ ಹಣವನ್ನು ದಿನಾಂತ್ಯಕ್ಕೆ ಹಿಂದಿರುಗಿಸುವಿರಿ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹಾಗೂ ಪಕ್ಷನಿಷ್ಠೆ, ಸೇವಾಮನೋಭಾವದಿಂದ ಅಧಿಕಾರ ಪಡೆದುಕೊಳ್ಳುವಿರಿ.

ಧನು: ಆಫೀಸಿನ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇಬೇಕಾದ ಸಮಯ ಬರಲಿದೆ. ರಾಜಕೀಯದಲ್ಲಿನ ಬದಲಾವಣೆಯ ಲಾಭ ಪಡೆಯುವಿರಿ.

ಮಕರ: ನಿಮ್ಮ ಕ್ಷೇತ್ರದಲ್ಲಿ ಉಳಿದುಕೊಳ್ಳಬೇಕಾದರೆ ಅವಿರತ ದುಡಿಮೆಯೊಂದೇ ಮಾರ್ಗ. ಇದರ ಅರಿವೂ ಸಹ ನಿಮಗಿದೆ. ವಿದೇಶ ಪ್ರವಾಸ ಯೋಜನೆಗಳು ಸಹ ನಿಮಗೆ ಲಾಭವನ್ನೇ ನೀಡಲಿದೆ.

ಕುಂಭ: ಮನೆಯಲ್ಲಿ ಶುಭ ಸಮಾರಂಭವು ಸುಸೂತ್ರವಾಗಿ ನಡೆದುದಕ್ಕೆ ಸಮಾಧಾನಗೊಳ್ಳುವಿರಿ. ಕೋರ್ಟು ವ್ಯವಹಾರಗಳಲ್ಲಿ ಜಯ ಸಿದ್ಧಿಸಲಿದೆ. ಬಿಳಿ ಬಣ್ಣ ಶುಭವನ್ನು ಉಂಟುಮಾಡುವುದು.

ಮೀನ: ಮನೆಯವರ ಬೇಡಿಕೆಗಳನ್ನು ಸ್ವಲ್ಪ ಮಟ್ಟಿಗೆ ಪೂರೈಸುವಿರಿ. ಜಮೀನಿನ ಕೆಲಸಗಳನ್ನು ನೋಡಿಕೊಳ್ಳಬೇಕಾಗುವುದು. ಕಾರ್ಮಿಕರಿಗೆ ಒಳ್ಳೆಯ ದಿನ.

ಪದಬಂಧ 4980

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಗ್ಗೊಲೆಯ ಪ್ರಸಂಗವಿದು (4)
3.ಪೀಠಿಕೆಯನ್ನು ಹೀಗೂ ಹೇಳುವರು (4)
5.ಕೆಲಸದವರು ಸಿಡಿಸಿರುವ ರಾಡಿ! (3)
7.ಸುಮ್ಮಾನವಲ್ಲ! ಇದು ದುಃಖ! (3)
9.ಮೊಸಳೆ ಮರದೊಳಗಿದೆಯಲ್ಲಾ! (3)
10.ಬಾಣ ಹಿಡಿದಿರುವ ಶೈವ ಭಕ್ತ (3)
11.ವಾಲಿಯ ಮಗನಿವನು (3)
15.ಕೈಯಲ್ಲಿರುವ ಖಡ್ಗ (4)
16.ಕಾರನ್ನು ಏರಿ ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ
1.ದೇವರಿಗೆ ಸಲ್ಲಿಸುವ ಮುಡಿಪು (3)
2.ಡಬ್ಬುಗಾರ ತೋರಿದ ಆಡಂಬರ! (2)
3.ವಾರದ ಕೊನೆಗೆ ಬಂದಿರುವ ಅಭ್ಯರ್ಥಿ (5)
4.ಆಯವ್ಯಯ ವಿಷಯಗಳ ವಿವರಗಳ ಪಟ್ಟಿ (2)
6.ಒಳ್ಳೆಯ ಅವಕಾಶ (5)
8.ಬಿಳಿಯ ಕೂದಲುಳ್ಳವನು (5)
9.ಸಾಯುವ ಸಮಯವಿದು (5)
12.ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13.ಕಂಬಿ ಹಿಂದೆ ತೋರಿದ ಬಿನ್ನಾಣ! (2)
14.ಉತ್ತರದ ಕಡೆಯವರ ಚಿಕ್ಕಪ್ಪ (2)



4979ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿರೇಚಕ 3.ಅಜರ 4.ಸಹವಾಸ 6.ಪುಟ 7.ಹುಂಜ 8.ಅಕ್ಕ 9.ಋಣಿ 10.ಪ್ರಭೆ 11.ಮಾತು 13.ಶಬ್ದಕೋಶ 15.ಬವಣೆ 16.ನಿರೀಶ್ವರ

ಮೇಲಿಂದ ಕೆಳಕ್ಕೆ: 1.ವಿರಹ 2.ಕಸ 3.ಅತಿಕ್ರಮಪ್ರವೇಶ 5.ಸಮಾಜಸುಧಾರಣೆ 6.ಪುಕ್ಕ 9.ಋತು 12.ಅಂಬರ 14.ಶನಿ

ಸುಡೊಕು 5366

	2			6	7	4		
								2
	7			4	8		6	
	4						8	
8		9		7				
	5		8		4		9	
				9			3	
4		3		5	2			8
	1		4			5		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5365 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಲಂಚವಿಲ್ಲದೆ ಮುಡಾ, ಪಾಲಿಕೆಯಲ್ಲಿ ಕೆಲಸ ಆಗಲ್ಲ

• ನವೀನ್‌ಕುಮಾರ್ ಎನ್.

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಬಡಾವಣೆ ನಿರ್ಮಾಣ, ನಕ್ಷೆ ಮಂಜೂರಾತಿ, ಖಾತೆ ಮಾಡಿಸಿಕೊಳ್ಳಬೇಕಾದರೆ ಅಧಿಕಾರಿಗಳಿಗೆ 'ಲಂಚ' ಕೊಡಲೇಬೇಕು. ಲಂಚ ಕೊಟ್ಟರೂ ಕಡತಗಳು ಟೇಬಲ್‌ನಿಂದ ಟೇಬಲ್‌ಗೆ ದಾಟಬೇಕಾದರೆ ಕನಿಷ್ಠ ಎರಡು ತಿಂಗಳಾದರೂ ಬೇಕು. ಅಧಿಕಾರಿಗಳ ಈ ವಿಳಂಬ ಧೋರಣೆಯಿಂದಾಗಿ ಡೆವಲಪರ್‌ಗಳು ಹಾಗೂ ಜನಸಾಮಾನ್ಯರು ಬೇಸತ್ತು ಹೋಗಿದ್ದಾರೆ.

'ಕೆಲಸದ ಸ್ವರೂಪ, ಆಸ್ತಿ ಮೌಲ್ಯ ಹಾಗೂ ವ್ಯಕ್ತಿಯನ್ನು ಆಧರಿಸಿ ಲಂಚದ ಪ್ರಮಾಣ ನಿರ್ಧಾರವಾಗುತ್ತದೆ. ಅಧಿಕಾರಿಗಳು ₹ 1 ಲಕ್ಷದಿಂದ ₹ 10 ಲಕ್ಷದವರೆಗೆ ಲಂಚ ಕೇಳುತ್ತಾರೆ' ಎಂಬ ಆರೋಪಗಳಿವೆ.

ನಿವೃತ್ತಿಗೆ ನಾಲ್ಕು ದಿನ ಮುಂಚಿತವಾಗಿ ಲಂಚ ಪಡೆಯುತ್ತಿದ್ದಾಗಲೇ ನಗರಾಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಶಾಖೆಯ ಸದಸ್ಯ, ಜಂಟಿ ನಿರ್ದೇಶಕ ಜಿ.ಎಸ್.ಜಯಸಿಂಹ ಹಾಗೂ ಡೇಟಾ ಎಂಟ್ರಿ ಆಪರೇಟರ್ ನಾಗೇಂದ್ರಸ್ವಾಮಿ ಮೇ 27ರಂದು ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸರ ಬಲೆಗೆ ಬಿದ್ದಿದ್ದರು.

ಬೆಂಗಳೂರಿನ ನಿವಾಸಿಯೊಬ್ಬರು ಇಲ್ಲಿನ ಶ್ರೀರಾಂಪುರದಲ್ಲಿ 4 ಎಕರೆ 20 ಗುಂಟೆ ಜಮೀನು ಖರೀದಿಸಿದ್ದರು. ಅಲ್ಲಿ ವಸತಿ ಬಡಾವಣೆ ನಿರ್ಮಾಣಕ್ಕಾಗಿ ನಕಾಶೆಗೆ ಅನುಮೋದನೆ ನೀಡಲು ಆರೋಪಿಗಳು ₹3 ಲಕ್ಷ ಲಂಚಕ್ಕೆ ಆಗ್ರಹಿಸಿ, ₹ 1 ಲಕ್ಷವನ್ನು ಮುಂಗಡವಾಗಿ ಪಡೆದಿದ್ದರು. ಮತ್ತೆ ₹ 1 ಲಕ್ಷಕ್ಕೆ ಬೇಡಿಕೆ ಇಟ್ಟು, ₹ 50 ಸಾವಿರ ಪಡೆಯುವಾಗ ಜಯಸಿಂಹ ಅವರನ್ನು ಬಂಧಿಸಿದ್ದರು.

ಮೈಸೂರು ಮಹಾನಗರ ಪಾಲಿಕೆಯಲ್ಲೂ ಲಂಚಾವತಾರ ತಾಂಡವವಾಡುತ್ತಿದೆ. ಪಾಲಿಕೆ ವಲಯ ಕಚೇರಿ-4ರ ಕಿರಿಯ ಎಂಜಿನಿಯರ್ ಗುರುಸಿದ್ದಯ್ಯ ಎಂಬುವರು ಹೊಸ ಕಟ್ಟಡ ನಿರ್ಮಿಸುವ ಸಂಬಂಧ ಯೋಜನೆ ಮಂಜೂರಾತಿಗಾಗಿ ಮಹಿಳೆಯೊಬ್ಬರಿಂದ ₹ 6 ಸಾವಿರಕ್ಕೆ ಬೇಡಿಕೆ ಇಟ್ಟು, ₹3 ಸಾವಿರ ಲಂಚ ಪಡೆಯುವಾಗ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸರಿಗೆ ಇತ್ತೀಚೆಗೆ ಸಿಕ್ಕಿಬಿದ್ದಿದ್ದರು.

'30x40 ನಿವೇಶನಗಳಿಗೆ ವಲಯ ಕಚೇರಿಯ ಉಪ ಆಯುಕ್ತರೇ ಸ್ಥಳ ಪರಿಶೀಲಿಸಿ ಪ್ಲಾನ್ ಅನುಮೋದನೆ ನೀಡುತ್ತಾರೆ. ಅಲ್ಲಿ ₹5 ಸಾವಿರದಿಂದ ₹15 ಸಾವಿರವರೆಗೆ ಲಂಚ ನೀಡಬೇಕು. 40x60 ಅಡಿ ಮೇಲ್ಪಟ್ಟ ನಿವೇಶನಗಳಿಗೆ ಕೇಂದ್ರ ಕಚೇರಿಯ ಜಂಟಿ ನಿರ್ದೇಶಕರು (ನಗರ ಯೋಜನೆ) ಅನುಮೋದನೆ ನೀಡುತ್ತಾರೆ. ಅವರು ಸ್ಥಳ ಪರಿಶೀಲನೆಗೆ ಬಾರದೆ ವಿಳಂಬ ಮಾಡುತ್ತಾರೆ. ವಿನಾ ಕಾರಣ ಅಲೆದಾಡಿಸುತ್ತಾರೆ. ಕೆಳಗಿನ ಅಧಿಕಾರಿಗಳ ಮೂಲಕ ಲಂಚಕ್ಕೆ ಬೇಡಿಕೆ ಇಡುತ್ತಾರೆ. ₹50 ಸಾವಿರದಿಂದ ₹1 ಲಕ್ಷದವರೆಗೂ ಲಂಚ ನೀಡಬೇಕು' ಎಂದು ಮಾಜಿ ಮೇಯರ್ ಎಚ್.ಎನ್. ಶ್ರೀಕಂಠಯ್ಯ ಹೇಳುತ್ತಾರೆ.

'ಬ್ರೋಕರ್ ಇದ್ದರೆ ಕೆಲಸ ಸಲೀಸು'

• ಸಂಧ್ಯಾ ಹೆಗಡೆ

ಮಂಗಳೂರು: 'ಇ-ಖಾತೆ ಮಾಡಿಸಲು ತಿಂಗಳಿಂದ ಪಾಲಿಕೆಗೆ ಅಲೆದು, ನೆತ್ತಿಸುಡುವ ಬಿಸಿಲಿನಲ್ಲಿ ಮಂಡೆಬಿಸಿ ಮಾಡಿಕೊಂಡಿದ್ದೇ ಬಂತು. ನನ್ನ ಸ್ನೇಹಿತ, ಬ್ರೋಕರ್ ಒಬ್ಬರನ್ನು ಪರಿಚಯಿಸಿದ. ಆತ ನಾಲ್ಕು ದಿನಗಳಲ್ಲಿ ವ್ಯವಸ್ಥಿತವಾಗಿ ಎಲ್ಲ ದಾಖಲೆಗಳನ್ನು ನನ್ನ ಕೈಗಿತ್ತ' ಎಂದು ಮಹಾನಗರ ಪಾಲಿಕೆಗೆ ಬಂದಿದ್ದ ವ್ಯಕ್ತಿಯೊಬ್ಬರು ಸಹಜವೆಂಬಂತೆ ಇದನ್ನು ಹೇಳುತ್ತಿದ್ದರು.

'ಇ- ಖಾತೆ ಮಾಡಲು ಸ್ಟ್ಯಾಂಪ್ ಡ್ಯೂಟಿ ಶೇ 2ರಷ್ಟು ಪಾವತಿಸಬೇಕು. ಈ ಮೊತ್ತ ಆಧರಿಸಿ, ಅಧಿಕಾರಿಯ 'ಪಾವತಿ'ಯೂ ನಿರ್ಧಾರವಾಗುತ್ತದೆ' ಎಂದು ಪಿಸುದನಿಯಲ್ಲಿ ಹೇಳಿದರು.

'ಕಟ್ಟಡ ಪರ ವಾನಗಿ, ಕಟ್ಟಡ ಪೂರ್ಣಗೊಂಡ ಪ್ರಮಾಣಪತ್ರ, ಅಂಗಡಿ ವಿಸ್ತರಣೆ, ಸಿವಿಲ್ ಗುತ್ತಿಗೆ ಕಾಮಗಾರಿಗಳು ಹೀಗೆ ಎಲ್ಲದಕ್ಕೂ ಅಧಿಕಾರಿಗಳ ಕೈಬಿಸಿ ಮಾಡಿದರೆ ಮಾತ್ರಜನರಿಗೆ ಮೊಸರು ಸಿಗುವುದು. ಪಾಲಿಕೆಯಲ್ಲಿ ಯಾವ ಕ್ಷೇತ್ರದಲ್ಲಿ ಭ್ರಷ್ಟಾಚಾರ ಇಲ್ಲ ಎಂದು ಹುಡುಕಿ ಹೇಳುವುದು ಕಷ್ಟ' ಎನ್ನುತ್ತ ಮಾತಿಗಿಳಿದರು ಸಾಮಾಜಿಕ ಕಾರ್ಯಕರ್ತ ಜಿ.ಕೆ.ಭಟ್.

'ತ್ಯಾಜ್ಯದಲ್ಲಿ ಕಾಸು ಎಣಿಸುವ, ಒಂದು ಅಡಿ ಆಳದ ಗುಂಡಿ ತೆಗೆದು, ಮೂರು ಅಡಿಗೆ ಬಿಲ್ ತೋರಿಸುವ ವಿಚಾರ ಬಹಿರಂಗ ಗುಟ್ಟಿನಂತೆ. ಇಂತಹ ವಹಿವಾಟಿಗೆ ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳು ಒಗ್ಗಟ್ಟು ಪ್ರದರ್ಶಿಸುತ್ತಾರೆ. ಪಾಲಿಕೆ ಮುಖ್ಯಸ್ಥರಿಗೆ ಅರಿವಿದ್ದೋ, ಇಲ್ಲದೆಯೋ ಇಂತಹ ವ್ಯವಹಾರಗಳು ಎಗ್ಗಿಲ್ಲದೆ ನಡೆಯುತ್ತವೆ. ಸ್ಮಾರ್ಟ್ ಸಿಟಿ ಯೋಜನೆಯಂತೂ ಭ್ರಷ್ಟಾಚಾರದ ಕೇಂದ್ರವಾಗಿದೆ. ಜನರ ತೆರಿಗೆ ಹಣದಲ್ಲಿ ದುಂದುವೆಚ್ಚ ಆಗುತ್ತಿದೆ' ಎಂದು ನೇರ ಆರೋಪ ಮಾಡಿದರು.

'ಕೆಲವು ಫಾಸ್ಟ್‌ಫುಡ್ ರೆಸ್ಟೋರೆಂಟ್‌ಗಳು ರಾಜಾರೋಷವಾಗಿ ನಿಷೇಧಿತ ಆಹಾರ ಪದಾರ್ಥಗಳನ್ನು ಬಳಸುತ್ತವೆ. ಪಾಲಿಕೆಯ ಆರೋಗ್ಯ ವಿಭಾಗದವರನ್ನು ಅವರು ಚೆನ್ನಾಗಿ ನೋಡಿಕೊಂಡರಾಯಿತು' ಎನ್ನುವಾಗ ಜಿ.ಕೆ.ಭಟ್ ಅವರ ಮಾತಿನಲ್ಲಿ ಆಕ್ರೋಶವಿತ್ತು.

'ಆರೆಸ್ಸೆಸ್ ಟೀಕಿಸಿಯೇ ಅಧಿಕಾರ ಕಳೆದುಕೊಂಡ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜಕೀಯ ಕಾರಣಕ್ಕೆ ಆರ್‌ಎಸ್‌ಎಸ್ ವಿರುದ್ಧ ಟೀಕಿಸುತ್ತಿರುವ ಕಾಂಗ್ರೆಸ್ ದೇಶದಾದ್ಯಂತ ಅಧಿಕಾರ ಕಳೆದುಕೊಂಡಿದೆ. ಸಿದ್ದರಾಮಯ್ಯ ರಾಜ್ಯದಲ್ಲೂ ಅದನ್ನೇ ಮುಂದುವರಿಸಿದ್ದು, ಇಲ್ಲೂ ಅದೇ ಗತಿ ಬರಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆರ್‌ಎಸ್‌ಎಸ್ 75 ವರ್ಷಗಳಿಂದ ದೇಶ, ಜನರ ಸೇವೆ ಮಾಡುತ್ತಿದೆ. ಅನಾಹುತ, ಜನ ಸಂಕಷ್ಟದಲ್ಲಿದ್ದಾಗ ಸ್ಪಂದಿಸಿದೆ. ಕಾಂಗ್ರೆಸ್‌ನವರು ರಾಜಕೀಯ ಕಾರಣಕ್ಕೆ ಈಗ ಟೀಕಿಸುತ್ತಿದ್ದಾರೆ' ಎಂದರು.

'ಆರ್‌ಎಸ್‌ಎಸ್ ತಂಟೆಗೆ ಬಂದರೆ ಸುಟ್ಟು ಹೋಗ್ತೀರಿ'

ಬೆಂಗಳೂರು: 'ನೀವೆಲ್ಲರೂ ಚುನಾವಣೆಗೆ ಹೋಗುತ್ತಿದ್ದೀರಿ, ಸ್ವಲ್ಪ ಹುಷಾರಾಗಿರಿ. ಆರ್‌ಎಸ್‌ಎಸ್ ತಂಟೆಗೆ ಬಂದರೆ ಸುಟ್ಟು ಹೋಗ್ತೀರಿ' ಎಂದು ಕಂದಾಯ ಸಚಿವ ಆರ್. ಅಶೋಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಎಚ್ಚರಿಕೆ ನೀಡಿದರು. ಆರ್‌ಎಸ್‌ಎಸ್ ಚಡ್ಡಿ ಸುಡುವ ಆಂದೋಲನ ನಡೆಸುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿರುವ ಕುರಿತು ಭಾನುವಾರ ಪ್ರತಿಕ್ರಿಯಿಸಿದರು. 'ಈ ರೀತಿ ಸುಡುವವರೆಲ್ಲ ಮನೆ ಸುಟ್ಟುಕೊಂಡಿದ್ದಾರೆ. ಆಂಜನೇಯನ ಬಾಲಕ್ಕೆ ಬೆಂಕಿ ಬಿದ್ದು, ಇಡೀ ಲಂಕೆಯೇ ಸುಟ್ಟು ಹೋಯಿತು. ಆರ್‌ಎಸ್‌ಎಸ್ ಶಕ್ತಿ ಏನು ಪ್ರಪಂಚಕ್ಕೆ ಗೊತ್ತಿದೆ. ಪ್ಯಾಂಟ್, ಚಡ್ಡಿ ಸುಡೋದನ್ನೆಲ್ಲಾ ಬಿಡಿ' ಎಂದರು.

'ಸಿದ್ದರಾಮಯ್ಯಗೆ ಚಡ್ಡಿ ರವಾನಿಸಲು ಸೂಚನೆ'

ಬೆಂಗಳೂರು: 'ಆರ್‌ಎಸ್‌ಎಸ್ ಚಡ್ಡಿ ಸುಡುವ ಆಂದೋಲನಕ್ಕೆ ಕರೆ ನೀಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಚಡ್ಡಿ ರವಾನಿಸುವ ಅಭಿಯಾನ ನಡೆಸುವಂತೆ ಬಿಜೆಪಿ ಪರಿಶಿಷ್ಟ ಮೋರ್ಚಾದ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಸೂಚಿಸಲಾಗಿದೆ' ಎಂದು ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ರಾಜಕೀಯವಾಗಿ ಮೂಲೆಗುಂಪಾಗುತ್ತಿರುವ ಸಿದ್ದರಾಮಯ್ಯ ಅವರು ಸ್ಥಿಮಿತ ಕಳೆದುಕೊಂಡವರಂತೆ ಮಾತನಾಡುತ್ತಿದ್ದಾರೆ. ಎಲ್ಲವನ್ನೂ ಬಿಟ್ಟು ಈಗ ಚಡ್ಡಿಯ ವಿಷಯ ಹಿಡಿದುಕೊಂಡಿದ್ದಾರೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನರು ಅವರ ಚಡ್ಡಿಯನ್ನೇ ಕಿತ್ತುಕೊಂಡು ಕಳಿಸಿರುವುದು ನೆನಪಿಲ್ಲವೆ' ಎಂದು ಕೇಳಿದರು.

ಆರ್‌ಎಸ್‌ಎಸ್ ಚಡ್ಡಿ ಸುಡುವವರು ಯೋಚಿಸಿ ಮಾತನಾಡಲಿ. ಭಸ್ಮಾಸುರನಂತೆ ಸುಡುವ ಸಂಸ್ಕೃತಿ ಇರುವ ಕಾಂಗ್ರೆಸ್‌ನವರೇ ಭಸ್ಮವಾಗುತ್ತಾರೆ

ಎಂ.ಪಿ.ರೇಣುಕಾಚಾರ್ಯ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ

ಕಾಂಗ್ರೆಸ್‌ನವರಿಗೆ ಬುದ್ಧಿ ಭ್ರಮಣೆಯಾಗಿದೆ. ಚಡ್ಡಿ ಸುಡುವ ಮಾತನಾಡುತ್ತಿದ್ದಾರೆ. ಚಡ್ಡಿಯ ತಂಟೆಗೆ ಬಂದರೆ ಸರ್ವನಾಶ ಆಗುತ್ತಾರೆ

ಬೈರತಿ ಬಸವರಾಜ, ಸಚಿವ

ಬಿಬಿಎಂಪಿ– ಭ್ರಷ್ಟರ 'ಕಾಮಧೇನು'

ಭಾವು ಪತ್ತಾರ್

ಒಂದನೇ ಪುಟದಿಂದ

ಇನ್ನು ದೊಡ್ಡ ದೊಡ್ಡ ವಾಣಿಜ್ಯ ಕಟ್ಟಡಗಳು ನೂರಾರು ಕೋಟಿ ರೂಪಾಯಿ ಲೆಕ್ಕದಲ್ಲಿ ತೆರಿಗೆ ವಂಚಿಸಲು ಅಧಿಕಾರಿಗಳೇ ನೆರವಾದ ಹಾಗೂ ಅಕ್ರಮ ಬೆಳಕಿಗೆ ಬಂದ ಬಳಿಕ ಸೇವೆಯಿಂದ ಅಮಾನತುಗೊಂಡ ಉದಾಹರಣೆಗಳೂ ಇಲ್ಲಿವೆ.

ಉದ್ದಿಮೆ ಪರವಾನಗಿ ಪಡೆಯುವುದಕ್ಕೆ, ಅದನ್ನು ನವೀಕರಿಸುವುದಕ್ಕೆ ಲಂಚ ನೀಡಲೇಬೇಕು ಎಂಬ ಸ್ಥಿತಿ ಇತ್ತು. ಕೆಲಸ ಕಾರ್ಯಗಳನ್ನು ಸುಲಲಿತಗೊಳಿಸುವ ಕಾರ್ಯಕ್ರಮ (ಈಸ್ ಆಫ್ ಡೂಯಿಂಗ್ ಬಿಸಿನೆಸ್) ಜಾರಿಯಾದ ಬಳಿಕ ಈ ವ್ಯವಸ್ಥೆ ಡಿಜಿಟಲೀಕರಣಗೊಂಡಿದೆ. ಆ ಬಳಿಕವೂ ವ್ಯಾಪಾರಿಗಳು ಅಧಿಕಾರಿಗಳಿಗೆ ಮಾಮೂಲಿ ನೀಡುವುದು ತಪ್ಪಿಲ್ಲ. 'ನಾವು ಆನ್‌ಲೈನ್‌ನಲ್ಲೇ ಉದ್ದಿಮೆ ಪರವಾನಗಿ ನವೀಕರಿಸಿಕೊಂಡರೆ, ತಳಮಟ್ಟದ ಅಧಿಕಾರಿಗಳಿಗೆ ಮಾಮೂಲಿ ಕೊಡುವುದು ಕೊಡಲೇಬೇಕು. ಇಲ್ಲದಿದ್ದರೆ, ಏನಾದರೂ ಒಂದು ತಪ್ಪು ಹುಡುಕಿ ದಂಡ ವಿಧಿಸುತ್ತಾರೆ' ಎಂದು ಅವೆನ್ಯೂ ರಸ್ತೆಯ ವ್ಯಾಪಾರಿಯೊಬ್ಬರು ಅಳಲು ತೋಡಿಕೊಂಡರು.

ಕಾಮಗಾರಿಯಲ್ಲಿ ಅಕ್ರಮ ಸಹಜ ಎಂಬಂತಾಗಿದೆ. ರಾಜರಾಜೇಶ್ವರಿನಗರ, ಮಲ್ಲೇಶ್ವರ ಹಾಗೂ ಗಾಂಧಿನಗರ ವಲಯಗಳಲ್ಲಿ 2008 ರಿಂದ 2012ರ ನಡುವೆ ನಡೆದಿದ್ದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ ಸಮಿತಿ ವರದಿ ನೀಡಿತ್ತು. ಆದರೆ, ಅಕ್ರಮ ಸಾಬೀತಾದ ಬಳಿಕವೂ ಯಾವ ಅಧಿಕಾರಿಗೂ ಶಿಕ್ಷೆ ಆಗಲೇ ಇಲ್ಲ.

ರಾಜರಾಜೇಶ್ವರಿನಗರ (ಆರ್. ಆರ್. ನಗರ) ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳ್ಳದ ಕಾಮಗಾರಿಗೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಬಿಬಿಎಂಪಿ ₹118.26 ಕೋಟಿ ಬಿಡುಗಡೆ ಮಾಡಿ ಅಕ್ರಮ ಎಸಗಿದ ಪ್ರಕರಣವನ್ನು ಲೋಕಾಯುಕ್ತ ತಾಂತ್ರಿಕ ಲೆಕ್ಕಪರಿಶೋಧನಾ ಕೋಶ ಎಳೆಎಳೆಯಾಗಿ ಬಿಚ್ಚಿಟ್ಟಿತ್ತು. ಆದರೂ ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಮರೀಚಿಕೆ.

ಇನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಟಿಡಿಆರ್ ನೀಡುವ ವಿಚಾರದಲ್ಲಿ ನಡೆದ ಅಕ್ರಮಗಳಿಗಂತೂ ಲೆಕ್ಕವೇ ಇಲ್ಲ. ಇಲ್ಲದ ಜಮೀನು, ಕಟ್ಟಡಗಳಿಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು ಪತ್ರವನ್ನು (ಟಿಡಿಆರ್) ಅಕ್ರಮವಾಗಿ ಪಡೆದು ₹27.68 ಕೋಟಿಗೆ ಮಾರಾಟ ಮಾಡಿದ ದಲ್ಲಾಳಿಗಳು, ಬಿಬಿಎಂಪಿಯ ನಾಲ್ವರು ಎಂಜಿನಿಯರ್‌ಗಳು ಸೇರಿ 16 ಮಂದಿಯ 25 ಬ್ಯಾಂಕ್ ಖಾತೆಗಳಲ್ಲಿದ್ದ ₹85.24 ಲಕ್ಷ ಮುಟ್ಟುಗೋಲು ಪ್ರಕ್ರಿಯೆ ಮುಂದುವರಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ(ಎಸಿಬಿ) ಸರ್ಕಾರ ಅನುಮತಿ ನೀಡಿತ್ತು. ಕೆಲ ಕಾಲ ಸದ್ದು ಮಾಡಿದ ಈ ಹಗರಣ ಈಗ ತೆರೆಮರೆಗೆ ಸರಿದಿದೆ.

ರಸ್ತೆ ಇತಿಹಾಸವನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂಬುದು ದಶಕಗಳ ಬೇಡಿಕೆ. ಈಗ ವೆಬ್‌ಸೈಟ್‌ನಲ್ಲಿ ಕಾಮಗಾರಿಗಳ ಇತಿಹಾಸವನ್ನೇನೂ ಪ್ರಕಟಿಸಲಾಗುತ್ತಿದೆ, ಆದರೆ, ಅದು ಯಾವ ಕಾಮಗಾರಿಗೆ ಸಂಬಂಧಿಸಿದ್ದು ಎನ್ನುವುದನ್ನು ಹುಡುಕುವುದು ಕಷ್ಟ. ಬಿಲ್ ಪಾವತಿಯಲ್ಲಿ ನಿಯಮ ಉಲ್ಲಂಘನೆ ಆಗಬಾರದು ಎಂಬ ಕಾರಣಕ್ಕೆ ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆ (ಐಎಫ್‌ಎಂಎಸ್) ತಂತ್ರಾಂಶ ಜಾರಿಗೆ ತರಲಾಯಿತು. ಈ ಡಿಜಿಟಲ್ ವ್ಯವಸ್ಥೆಯ ಕಣ್ಣಿಗೆ ಮಣ್ಣೆರಚುವ ಚಾಣಾಕ್ಷ ಅಧಿಕಾರಿಗಳು ಬಿಬಿಎಂಪಿಯಲ್ಲಿದ್ದಾರೆ.

'ಬಿಬಿಎಂಪಿಯಲ್ಲಿ ಹುದ್ದೆ ಗಿಟ್ಟಿಸಿಕೊಂಡರೆ ಇಲ್ಲಿ ಹುಲುಸಾದ 'ಫಸಲು' ತೆಗೆಯಬಹುದು ಎಂಬುದು ಅಧಿಕಾರಿಗಳಿಗೆ ಚೆನ್ನಾಗಿ ತಿಳಿದಿದೆ. ಹಾಗಾಗಿ ಇಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಲು ಅಧಿಕಾರಿಗಳು ದುಂಬಾಲು ಬೀಳುತ್ತಾರೆ. ಒಂದು ವರ್ಷದ ಮಟ್ಟಿಗೆ ಇಲ್ಲಿ ಕಾರ್ಯನಿರ್ವಹಿಸುವುದಕ್ಕೂ ಲಕ್ಷಗಟ್ಟಲೆ ಲಂಚ ನೀಡಲು ಹಿಂದೇಟು ಹಾಕುವುದಿಲ್ಲ. ಇದೆಲ್ಲ ಸರ್ಕಾರ ನಡೆಸುವವರಿಗೆ ತಿಳಿಯದ ವಿಚಾರವನೇನಲ್ಲ. ಆದರೆ, ಇದರಲ್ಲಿ ಅವರಿಗೂ ಪಾಲು ಇದೆ. ಹಾಗಾಗಿ ಭ್ರಷ್ಟ ವ್ಯವಸ್ಥೆ ಸುಧಾರಿಸುವುದು ಸರ್ಕಾರಕ್ಕೂ ಬೇಕಿಲ್ಲ' ಎಂದು ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಕಟ್ಟಡ ನಿರ್ಮಾಣ – ಭ್ರಷ್ಟರಿಗೆ ಝಣ ಝಣ ಕಾಂಚಾಣ

ಬೆಂಗಳೂರು: 'ನಗರಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲ ಮಂಜೂರಾತಿಗಳು ಆನ್‌ಲೈನ್‌ನಲ್ಲೇ ಲಭ್ಯ. ಕಟ್ಟಡ ನಿರ್ಮಿಸುವುದಕ್ಕೆ ಈಗ ಲಂಚ ನೀಡುವ ಪ್ರಮೇಯವೇ ಇಲ್ಲ...' ಇಂತಹ ಹೇಳಿಕೆಗಳಿಗೆ ಬರವಿಲ್ಲ. ಆನ್‌ಲೈನ್ ಮಂಜೂರಾತಿಗಳು ಜಾರಿಗೆ ಬಂದ ಬಳಿಕವೂ ಕಟ್ಟಡ ನಕ್ಷೆಗೆ ಮಂಜೂರಾತಿ ಪಡೆಯುವುದರಿಂದ ಹಿಡಿದು ಸ್ವಾಧೀನಾನುಭವ ಪತ್ರ (ಒ.ಸಿ) ಪಡೆಯುವವರೆಗಿನ ಯಾವ ಪ್ರಕ್ರಿಯೆಗಳಲ್ಲೂ 'ಲಂಚ' ನೀಡದೇ ಕಡತ ಕೊಂಚವೂ ಮುಂದಕ್ಕೆ ಸಾಗಲು ಸಾಧ್ಯವೇ ಇಲ್ಲವೆಂಬಂಥ ಪರಿಸ್ಥಿತಿ ಇದೆ.

ಬಿಬಿಎಂಪಿ ವ್ಯಾಪ್ತಿಯಲ್ಲಂತೂ ಜಮೀನಿಗೆ ಸಂಬಂಧಿಸಿದ ದಾಖಲೆಗಳೆಲ್ಲವೂ ಸಮರ್ಪಕವಾಗಿದ್ದರೂ ಲಂಚ ನೀಡದೇ ಅಗತ್ಯ ಮಂಜೂರಾತಿಗಳು ಸಿಗುವುದೇ ಇಲ್ಲ. ಕಟ್ಟಡ ನಿರ್ಮಾಣ ಯೋಜನೆ ರೂಪಿಸುವಾಗಲೇ ಲಂಚಕ್ಕೆಂದೇ ನಿರ್ದಿಷ್ಟ ಮೊತ್ತವನ್ನು ತೆಗೆದಿಡಬೇಕಾದ ಅನಿವಾರ್ಯ ಸ್ಥಿತಿ ಇದೆ ಎನ್ನುತ್ತಾರೆ ಕಟ್ಟಡ ನಿರ್ಮಾಣ ಸಲಹಾ ಸಂಸ್ಥೆಗಳ ಎಂಜಿನಿಯರ್‌ಗಳು.

ಕಟ್ಟಡ ಪರವಾನಗಿ ನೀಡಲೆಂದೇ ಬಿಬಿಎಂಪಿ ಕೆಲಸ ಕಾರ್ಯಗಳನ್ನು ಸುಲಲಿತಗೊಳಿಸುವ ಯೋಜನೆಯಡಿ ಆನ್‌ಲೈನ್ ವ್ಯವಸ್ಥೆಯನ್ನು ರೂಪಿಸಿದ್ದು, ಎರಡು ವರ್ಷಗಳಿಂದ ಇದು ಚಾಲ್ತಿಯಲ್ಲಿದೆ. 4 ಸಾವಿರ ಚ.ಮೀ. ವಿಸ್ತೀರ್ಣವನ್ನು ಮೀರದ ವಸತಿ ಕಟ್ಟಡಗಳಿಗೆ ಕಟ್ಟಡ ನಕ್ಷೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಮೂರು ದಿನಗಳ ಒಳಗೆ ಮಂಜೂರಾತಿ ನೀಡಬೇಕು. ಇದಕ್ಕಾಗಿ ಯಾವುದೇ ದಾಖಲೆಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸುವ ಅಗತ್ಯ ಇಲ್ಲ. ಆದರೆ, ವಾಸ್ತವ ಬೇರೆಯೇ ಇದೆ. ಬಿಬಿಎಂಪಿಯೇ ಮಾನ್ಯ ಮಾಡಿದ ಕಟ್ಟಡ ತಜ್ಞರೇ ಆನ್‌ಲೈನ್‌ನಲ್ಲಿ ಸಲ್ಲಿಸುವ ಕಟ್ಟಡ ನಕ್ಷೆ ಹಾಗೂ ದಾಖಲೆಗಳು ಸಮರ್ಪಕವಾಗಿದ್ದರೂ, ಅಧಿಕಾರಿಗಳಿಗೆ ಸಂದಾಯ ಆಗಬೇಕಾದ ಮೊತ್ತ ತಲುಪದೇ ಮಂಜೂರಾತಿ ಸಿಗದು. ಏನಾದರೂ ತಕರಾರು ತೆಗೆದು ಅರ್ಜಿಯನ್ನು ತಿರಸ್ಕರಿಸುತ್ತಾರೆ ಎಂದು ಅಳಲು ತೋಡಿಕೊಳ್ಳುತ್ತಾರೆ ಅವರು.

'ಆನ್‌ಲೈನ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ನಕ್ಷೆ ದೋಷಪೂರಿತವಾಗಿದೆ ಎಂಬ ನೆಪಹೇಳಿ ತಿರಸ್ಕರಿಸಲಾಗುತ್ತದೆ. 30 ಅಡಿಗಿಂತ ಹೆಚ್ಚು ಅಗಲದ ರಸ್ತೆ ಪಕ್ಕದಲ್ಲೇ ವಸತಿ ಕಟ್ಟಡ ನಿರ್ಮಿಸುತ್ತಿದ್ದರೂ, ಕಟ್ಟಡಕ್ಕೆ ಪ್ರವೇಶ ಮಾರ್ಗ ಇಲ್ಲ ಎಂದೂ ಎಷ್ಟೋ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. 30X40 ಅಡಿಗಿಂತ ಕಡಿಮೆ ವಿಸ್ತೀರ್ಣದ ಸಣ್ಣ ನಿವೇಶನದಲ್ಲಿ ವಾಸದ ಮನೆ ನಿರ್ಮಿಸುವುದಕ್ಕೆ ಎಲ್ಲ ದಾಖಲೆಗಳು ಸಮರ್ಪಕವಾಗಿದ್ದರೂ ಕನಿಷ್ಠ ₹ 10 ಸಾವಿರವಾದರೂ ಲಂಚ ನೀಡಬೇಕು. ಇನ್ನು ನಿವೇಶನದ ದಾಖಲೆಗಳಲ್ಲಿ ಸಣ್ಣಪುಟ್ಟ ಲೋಪಗಳಿದ್ದರೆ, ವಲಯ ನಿಬಂಧನೆಗೆ ಅಥವಾ ರಾಜಕಾಲುವೆಯ ಮೀಸಲು ಪ್ರದೇಶಕ್ಕೆ ಸಂಬಂಧಿಸಿದ ತಕರಾರುಗಳಿದ್ದರೆ ಲಂಚದ ಮೊತ್ತ ಏರುತ್ತಲೇ ಹೋಗುತ್ತದೆ' ಎಂದು ಕಟ್ಟಡ ನಿರ್ಮಾಣ ಸಂಸ್ಥೆಯ ಎಂಜಿನಿಯರ್ ಒಬ್ಬರು ವಿವರಿಸಿದರು.

ನಗರ ಯೋಜನೆ ವಿಭಾಗದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಲು ಎಂಜಿನಿಯರ್‌ಗಳು 'ನಾ ಮುಂದು– ತಾ ಮುಂದು' ಎಂಬಂತೆ ಪೈಪೋಟಿಗೆ ಬೀಳುತ್ತಾರೆ. ಇಲ್ಲಿ ಕೆಲಸ ಕಡಿಮೆ ಆದರೆ 'ಕಮಾಯಿ' ಜಾಸ್ತಿ. ಆಯಕಟ್ಟಿನ ಹುದ್ದೆ ಗಿಟ್ಟಿಸಲು ₹ 50 ಲಕ್ಷದವರೆಗೂ ಲಂಚ ನೀಡಲು ಸಿದ್ಧ ಇರುತ್ತಾರೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ಒಳಮರ್ಮ ಬಿಚ್ಚಿಟ್ಟರು.

'ನಗರ ಯೋಜನೆಗೆ ಸಂಬಂಧಿಸಿದ ಎಲ್ಲ ಕಟ್ಟುಪಾಡುಗಳನ್ನು ಅನುಸರಿಸಿ ಕಟ್ಟಡ ನಿರ್ಮಿಸುವುದು ಕನಸಿನ ಮಾತು. ವಲಯ ನಿಬಂಧನೆ, ಸೆಟ್ ಬ್ಯಾಕ್‌ಗೆ ಸಂಬಂಧಿಸಿದ ನಿಯಮ, ರಾಜಕಾಲುವೆ, ಕೆರೆಗಳ ಮೀಸಲು ಪ್ರದೇಶಕ್ಕೆ ಕಾಯ್ದಿರಿಸಬೇಕಾದ ಪ್ರದೇಶ... ಹೀಗೆ ಯಾವುದಾದರೂ ಒಂದು ನಿಯಮ ಉಲ್ಲಂಘನೆಗಳು ಇಲ್ಲಿ ಮಾಮೂಲಿ. ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುವವರಿಂದ ಬರುವ 'ಮಾಮೂಲಿ' ವರಮಾನವೂ ಜಾಸ್ತಿ. ಅಕ್ರಮ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕಿ ಎಂದು ಹೈಕೋರ್ಟ್ ಎಷ್ಟೇ ಗಂಟಲು ಹರಿದುಕೊಂಡರೂ ಬಿಬಿಎಂಪಿ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ವಿವರಿಸಿದರು.

ಮಾಹಿತಿ ಕೇಳಿದರೆ 'ಕರ್ತವ್ಯಕ್ಕೆ ಅಡ್ಡಿ' ದೂರು

ಅಕ್ರಮ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಿದ ಬಗ್ಗೆ ಯಾರಾದರೂ ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಿದರೆ, ಅಧಿಕಾರಿಗಳು ವಿವರ ಕೊಡಲೇಬೇಕಾಗುತ್ತದೆ. ಇಂತಹ ಸಂದಿಗ್ಧ ಸಂದರ್ಭವನ್ನು ಎದುರಿಸಲು ಅಧಿಕಾರಿಗಳು 'ಕರ್ತವ್ಯಕ್ಕೆ ಅಡ್ಡಿ' ಎಂದು ಸುಳ್ಳು ದೂರು ದಾಖಲಿಸುವ ತಂತ್ರವನ್ನು ಅನುಸರಿಸುತ್ತಾರೆ.

ಯಡಿಯೂರು ವಾರ್ಡ್‌ನಲ್ಲಿ ಬಿಬಿಎಂಪಿ ಕಚೇರಿ ಸಮೀಪವೇ ಅನಧಿಕೃತವಾಗಿ ಐದು ಮಹಡಿಗಳ ಕಟ್ಟಡವನ್ನು ಖಾಸಗಿ ವ್ಯಕ್ತಿಯೊಬ್ಬರು ನಿರ್ಮಿಸಿದ್ದರು. ಕಣ್ಣೆದುರೇ ಅಕ್ರಮ ಕಟ್ಟಡ ನಿರ್ಮಾಣವಾಗಿದ್ದರೂ ಅಧಿಕಾರಿಗಳು ಚಕಾರ ಎತ್ತಲಿಲ್ಲ. ಈ ಕಟ್ಟಡಕ್ಕೆ ಅನುಮತಿ ನೀಡಿದ ವಿವರ ಕೊಡಿ ಎಂದು ಸ್ಥಳೀಯರೊಬ್ಬರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರು. ಆಗ ಆ ಕಟ್ಟಡ 'ಅನಧಿಕೃತ' ಎಂಬುದನ್ನು ಅಧಿಕಾರಿಗಳು ಅಧಿಕೃತವಾಗಿಯೇ ಘೋಷಿಸಬೇಕಾಯಿತು. ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ ಉತ್ತರ ನೀಡಬೇಕಾಗಿ ಬಂದಾಗ ಆ ಅಧಿಕಾರಿ ಮಾಹಿತಿ ಕೇಳಿದ ಹಿರಿಯ ನಾಗರಿಕರೊಬ್ಬರ ಮೇಲೆ 'ಕರ್ತವ್ಯಕ್ಕೆ ಅಡ್ಡಿ' ಪಡಿಸಿದ ಆರೋಪ ಹೊರಿಸಿ ದೂರು ನೀಡುವ ಮೂಲಕ ಸೇಡು ತೀರಿಸಿಕೊಂಡರು. ಮಾಹಿತಿ ಕೇಳಿದ ತಪ್ಪಿಗೆ ಸ್ಥಳೀಯ ವ್ಯಕ್ತಿ ಎರಡು ದಿನ ಜೈಲಿನಲ್ಲಿ ಕಳೆಯಬೇಕಾಯಿತು. ದುರಂತವೆಂದರೆ, ಕಣ್ಣೆದುರೇ ಐದು ಅಂತಸ್ತಿನ ಕಟ್ಟಡ ನಿರ್ಮಾಣವಾದರೂ ಕ್ರಮ ಕೈಗೊಳ್ಳದ ಬಿಬಿಎಂಪಿಯ ಎಂಜಿನಿಯರ್ ಮೇಲೆ ಯಾವ ಕ್ರಮವೂ ಆಗಿಲ್ಲ!

ಹುಬ್ಬಳ್ಳಿ: ಅಧಿಕಾರಿಗಳ ಜೇಬು ತುಂಬಿಸುವ ವ್ಯವಹಾರ

• ಓದೇಶ ಸಕಲೇಶಪುರ

ಹುಬ್ಬಳ್ಳಿ: ಇಲ್ಲಿನ ಮಹಾನಗರ ಪಾಲಿಕೆಯ ಬಹುತೇಕ ಕಚೇರಿಗಳಲ್ಲಿ ಕರ್ತವ್ಯಕ್ಕಿಂತ ಜೇಬು ತುಂಬಿಸುವ ವ್ಯವಹಾರಗಳಿಗೆ ಅಧಿಕಾರಿಗಳು ಎಷ್ಟು ಒತ್ತು ನೀಡುತ್ತಾರೆ ಎಂಬುದು ಗೊತ್ತಾಗಬೇಕಾದರೆ, ಇಲ್ಲಿನ ಕಚೇರಿಗಳನ್ನೊಮ್ಮೆ ಹೊಕ್ಕಿ ಹೊರಬೇಕು. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ನಗರ ಯೋಜನಾ ವಿಭಾಗದ ಕಚೇರಿ ಮುಂದೆ ಕೆಲವರು ಬೆಳಿಗ್ಗೆಯಿಂದ ಅರ್ಜಿಗಳನ್ನು ಹಿಡಿದು ನಿಂತಿದ್ದರೆ, ಉಳಿದವರು ಹೀಗೆ ಬಂದು ಹಾಗೆ ಕೆಲಸ ಮುಗಿಸಿಕೊಂಡು ಹೋಗುವವರಿದ್ದಾರೆ. ಅಧಿಕಾರಿಗಳ ವ್ಯವಹಾರ ಕುದುರಿಸುವ ಕಲೆಗೆ ಇದೊಂದು ಸಣ್ಣ ನಿದರ್ಶನವಷ್ಟೇ.

ಆಯಾ ಕಚೇರಿ ಮುಖ್ಯಸ್ಥರು ತಮ್ಮ ಸೀಟಿನಲ್ಲಿರುವುದಕ್ಕಿಂತ ಹೊರಗಡೆ ಇರುವುದೇ ಹೆಚ್ಚು. 'ಸಾರ್ ಅವರನ್ನು ಕಾಣಬೇಕಿತ್ತು' ಎಂದು ಕಚೇರಿಗೆ ಸಾರ್ವಜನಿಕರು ಕೇಳಿಕೊಂಡು ಬಂದರೆ, 'ಸಾಹೇಬ್ರು ಮೀಟಿಂಗ್ ಹೋಗಿದ್ದಾರೆ, ರೌಂಡ್ಸ್‌ನಲ್ಲಿದ್ದಾರೆ ಅಥವಾ ರಜೆಯಲ್ಲಿದ್ದಾರೆ. ಯಾವಾಗ ಬರುತ್ತಾರೊ ಗೊತ್ತಿಲ್ಲ' ಎನ್ನುವ ಸಿದ್ಧ ಉತ್ತರಗಳು ಅಲ್ಲಿ ಸಿಗುತ್ತವೆಯೇ ಹೊರತು, 'ಏತಕ್ಕಾಗಿ ಬಂದಿದ್ದೀರಿ? ಏನು ಕೆಲಸವಾಗಬೇಕು' ಎಂಬ ಸ್ಪಂದನೆಯ ಮಾತುಗಳು ಕಿವಿಗೆ ಬೀಳುವುದಿಲ್ಲ.

ಕೆಲ ಅಧಿಕಾರಿಗಳು ತಮ್ಮ ವ್ಯವಹಾರಗಳನ್ನು ಕುದುರಿಸಿಕೊಳ್ಳಲು ಸ್ಥಳೀಯ ಗುತ್ತಿಗೆದಾರರು, ಪಾಲಿಕೆ ಸದಸ್ಯ ಹಾಗೂ ಕಚೇರಿ ಒಳ-ಹೊರಗು ಬಲ್ಲ ಏಜೆಂಟರ ಬಳಗವನ್ನೇ ಕಟ್ಟಿಕೊಂಡಿದ್ದಾರೆ. ಹಲವು ವರ್ಷಗಳಿಂದ ಒಂದೇ ಕಡೆ ನೆಲೆಯೂರಿರುವ ಇವರು, ಕಚೇರಿ ಕೆಲಸಗಳಿಂದಿಡಿದು ಟೆಂಡರ್‌ವರೆಗೂ ಬೇಕಾದವರಿಗೆ ಆದ್ಯತೆ ಕೊಡುತ್ತಾ, ತಮ್ಮ ಪರ್ಸೆಂಟೇಜ್ ಜೇಬಿಗಿಳಿಸುತ್ತಾರೆ.

ಐಫಾ ಪ್ರಶಸ್ತಿ ಪ್ರದಾನ • ಉತ್ತಮ ನಟ ಪ್ರಶಸ್ತಿ ಇರ್ಫಾನ್ ಖಾನ್‌ಗೆ ಅರ್ಪಿಸಿದ ವಿಕ್ಕಿ ಕೌಶಲ್

'ಶೇರ್‌ಷಾ' ಚಿತ್ರಕ್ಕೆ ಸಿಂಹಪಾಲು

ಅಬುಧಾಬಿ(ಪಿಟಿಐ): ನಟ ಸಿದ್ಧಾರ್ಥ್ ಮಲ್ಹೋತ್ರಾ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಶೇರ್‌ಷಾ' ಚಿತ್ರವು 22ನೇ ಸಾಲಿನ ಅಂತರರಾಷ್ಟ್ರೀಯ ಭಾರತೀಯ ಚಿತ್ರ ಅಕಾಡೆಮಿ(ಐಫಾ) ಪ್ರಶಸ್ತಿ ಸಮಾರಂಭದಲ್ಲಿ ಅತಿಹೆಚ್ಚು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ನಟರಾದ ವಿಕ್ಕಿ ಕೌಶಲ್ ಮತ್ತು ಕೃತಿ ಸೆನನ್ ಅವರು ಸಹ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡರು. ವಿಕ್ಕಿ ಕೌಶಲ್ ಅವರು 'ಸರ್ದಾರ್ ಉಧಮ್' ಚಿತ್ರದಲ್ಲಿನ ಸ್ವಾತಂತ್ರ್ಯ ಹೋರಾಟಗಾರ ಉಧಮ್ ಸಿಂಗ್ ಅವರ ಪಾತ್ರಕ್ಕಾಗಿ ಉತ್ತಮ ನಟ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರು ತಮ್ಮ ಪ್ರಶಸ್ತಿಯನ್ನು ಕ್ಯಾನ್ಸರ್‌ನಿಂದ ಇಹಲೋಕ ತ್ಯಜಿಸಿದ ನಟ ಇರ್ಫಾನ್ ಖಾನ್ ಅವರಿಗೆ ಸಮರ್ಪಿಸಿದ್ದಾರೆ.

ಚಿತ್ರ ನಿರ್ಮಾಪಕ ಕರಣ್ ಜೋಹರ್ ಅವರ ನಿರ್ಮಾಣದ ಶೇರ್‌ಷಾ ಚಿತ್ರವು ಉತ್ತಮ ಚಿತ್ರ ಎಂಬ ಪ್ರಶಸ್ತಿಗೆ ಭಾಜನವಾದರೆ, ವಿಷ್ಣುವರ್ಧನ ಚಿತ್ರವು ಉತ್ತಮ ನಿರ್ದೇಶನದ ವಿಭಾಗದಲ್ಲಿ ಪ್ರಶಸ್ತಿಯನ್ನು ಬಾಚಿಕೊಂಡಿದೆ.

ಅಬುಧಾಬಿಯಲ್ಲಿ ನಡೆದ ಅಂತರರಾಷ್ಟ್ರೀಯ ಭಾರತೀಯ ಚಿತ್ರ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟರಾದ ಮನಿಶ್ ಪಾಲ್, ರಿತೇಶ್ ದೇಶ್‌ಮುಖ್ ಮತ್ತು ಸಲ್ಮಾನ್ ಖಾನ್ ನೃತ್ಯ ಮಾಡಿದರು ಪಿಟಿಐ ಚಿತ್ರ

ಕಾರ್ಗಿಲ್ ಯುದ್ಧದ ವೀರ ಯೋಧ ಕ್ಯಾಪ್ಟನ್ ವಿಕ್ರಂ ಬಾತ್ರಾ ಅವರ ಜೀವನ ಆಧರಿತ ಚಿತ್ರವಾದ 'ಶೇರ್‌ಷಾ' ಉತ್ತಮ ಸಂಗೀತ ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದೆ. ರಾತಾನ್ ಲಂಬಿಯಾನ್ ಚಿತ್ರದ ಗಾಯಕರಾದ ಜುಬಿನ್ ನೌತಿಯಾಲ್ ಮತ್ತು ಆಸೀಸ್ ಕೌರ್ ಅವರು ಕ್ರಮವಾಗಿ ಅವರು ಪುರುಷರ ವಿಭಾಗ ಮತ್ತು ಮಹಿಳಾ ವಿಭಾಗದ ಹಾಡುಗಾರರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಉತ್ತಮ ಸಂಗೀತ ನಿರ್ದೇಶನದ ವಿಭಾಗದಲ್ಲಿ 'ಅತರಂಗಿ ರೇ' ಸಿನಿಮಾದ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಮತ್ತು ಶೇರ್‌ಷಾ ಸಂಗೀತ ನಿರ್ದೇಶಕರಾದ ತನಿಷ್ಕ್ ಬಾಗ್ಚಿ, ಜಸ್ಲೀನ್ ರಾಯಲ್, ಜಾವೇದ್-ಮೊಹ್ಸಿನ್, ವಿಕ್ರಂ ಮೊಂಟ್ರೊಸೆ, ಬಿ. ಪ್ರಾಕ್ ಮತ್ತು ಜಾನಿ ಅವರ ಮಧ್ಯೆ ಟೈ ಆಗಿದೆ.

2020ರಲ್ಲಿ ಬಿಡುಗಡೆಯಾದ 'ಲುಡೊ' ಚಿತ್ರಕ್ಕಾಗಿ ಅನುರಾಗ್ ಬಸು ಅವರು ಉತ್ತಮ ಮೂಲ ಚಿತ್ರಕತೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

1983ರಲ್ಲಿ ಭಾರತ ವಿಶ್ವಕಪ್ ಗೆಲುವು ಸಾಧಿಸಿದ ಘಟನಾವಳಿ ಆಧರಿಸಿದ 83 ಚಿತ್ರದ ಕಬೀರ್ ಖಾನ್ ಮತ್ತು ಸಂಜಯ್ ಪೂರಣ್ ಸಿಂಗ್ ಚೌಹಾನ್ ಅವರು ಅಳವಡಿಸಿಕೊಂಡ ಉತ್ತಮ ಕಥೆ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಸರ್ದಾರ್ ಉಧಮ್ ಚಿತ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಉಧಮ್ ಸಿಂಗ್ ಅವರ ಪಾತ್ರ ನಿರ್ವಹಿಸಿದ ವಿಕ್ಕಿ ಕೌಶಲ್ ಅವರು ಉತ್ತಮ ನಟ ಎಂಬ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಕ್ಕಿ ಕೌಶಲ್ ಅವರು, 'ಇದು ನನ್ನ ಮೊದಲ ಉತ್ತಮ ನಟ ಪ್ರಶಸ್ತಿಯಾಗಿದೆ' ಎಂದರು. ಅಲ್ಲದೆ, ತಮ್ಮ ಕುಟುಂಬ ಸದಸ್ಯರು, ಪತ್ನಿ ಕತ್ರಿನಾ, ನಿರ್ದೇಶಕ ಸುಜಿತ್ ಸರ್ಕಾರ್ ಮತ್ತು ಚಿತ್ರದ ನಿರ್ಮಾಪಕ ರೊನ್ನೀ ಲಹಿರಿ ಅವರಿಗೆ ಅಭಿನಂದನೆ ಸಲ್ಲಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Services

ನಾವು ವೈಯಕ್ತಿಕ, ವ್ಯಾಪಾರ, ಆಸ್ತಿ, ಕೃಷಿ ಮತ್ತು ಶೈಕ್ಷಣಿಕವನ್ನು ಒದಗಿಸುತ್ತೇವೆ. (ಏಜೆಂಟರು ಸ್ವಾಗತ) Ph. 8222841175, 8278291749

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Walk-in

ಕನ್ನಡ ಮಾತನಾಡುವ ಟೆಲಿಕಾಲರ್ಸ್ ಯುವತಿಯರು ತಕ್ಷಣ ಬೇಕಾಗಿದ್ದಾರೆ,ವಯಸ್ಸು 30 ವರ್ಷದ ಕೆಳಗೆ, ಕಲ್ಯಾಣ್ ನಗರ ಸುತ್ತಮುತ್ತ ವಾಸಿಸುವವರಿಗೆ ಆದ್ಯತೆ. 8884773331/ 08048531033

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Marathahalli

COMMERCIAL Building Space for rent at (Madhuloka building, next to Nandana hotel, near vims hospital, Outer Ring Road, Marathahalli), Near (landmark; Radisson blu hotel, Marathahalli) - 1st Floor available for rent (Size 2328.57) Sq. Ft. Tel: 9844441088. WhatsApp ;- 9164019777.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 17.06.2022 8ದಿನಗಳು ಡಾರ್ಜಲಿಂಗ್,ಗ್ಯಾಂಗಟಕ್, ನಾಂಚಿ,ಮಿರಿಕ್,ಲಾಚೆನ್, 05.07.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ(ಅಮರಕಂಟಕ, ಮಯ್ಯಾರ್,ಚಿತ್ರಕೂಟ,ಕಳ್ಳೆಂಜರ್ ಸಹಿತ),05.07.2022 13ದಿನಗಳು ಚಂಡೀಗಡ್,ಸಿಮ್ಲಾ,ಮನಾಲಿ, 5ದೇವಿಯರು,ವೈಷ್ಣೋದೇವಿ, ಡಾಲ್‌ಹೌಸಿ,ಜಮ್ಮು, ಅಮೃತಸರ್,ಕುರುಕ್ಷೇತ್ರ, 22.07.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ ಸಹಿತ). 22.07.2022 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.(ವಲ್ಲಭಭಾಯಿ ಪ್ರತಿಮೆ,ನಿಷ್ಕಳಂಕ,ಡಿಯು ಸಹಿತ) 8073824856/ 9206979202/ 6366322639

ಸ್ವಯಂಭೂ ಹಿಮಲಿಂಗ ಅಮರನಾಥ್, ವೈಷ್ಣವಿದೇವಿ ಕಾಶ್ಮೀರ್ ಅಮೃತಸರ್ 26.06.2022 ರಿಂದ 13/17 ದಿನಗಳು. ಚಿತ್ರಕೂಟ, ನೈಮೀಶಾರಣ್ಯ ಕಾಶಿ,ಗಯಾ, ಪ್ರಯಾಗ,ಅಯೋಧ್ಯ 8 ದಿನಗಳು. ಸಿಕ್ಕಿಂ,ಕಾಮಕ್ಯ, ಡಾರ್ಜಲಿಂಗ್, ಪುರಿ,ಭುವನೇಶ್ವರ್ 14 ದಿನಗಳು. 07.08.2022 14.08.2022 ರಿಂದ ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

26.06.2022 07.07.2022 ರಿಂದ 10/13/24 ದಿನಗಳ ಪುರಿಜಗನ್ನಾಥ್ ಕಾಶಿ.,ಗಯಾ, ಅಯೋಧ್ಯ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ, ವೈಷ್ಣೋದೇವಿ ಅಮೃತ್‌ಸರ್ ದೆಹಲಿ/ 07.08.2022 07.09.2022 ರಿಂದ 11/13 ದಿನಗಳ ಮುಕ್ತಿನಾಥ್, ಜನಕಪುರಿ,ನೇಪಾಳ ನೈಮೀಶಾರಣ್ಯ, ಗೋರಕ್‌ಪುರ್ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290 9019301300

15.08.2022 7 ದಿನಗಳ ಕಾಶಿ,ಗಯಾ,ಅಯೋಧ್ಯ 15.09.2022 35 ದಿನಗಳ ಉತ್ತರ ಭಾರತ. 05.09.2022 ಚಾರ್‌ಧಾಮ್. 22.08.2022 11 ದಿನಗಳ ಮುಕ್ತಿನಾಥ್ ನೇಪಾಳ. 14.07.2022 ಅಮರನಾಥ ಯಾತ್ರೆ ಪ್ರವಾಸಗಳಿಗಾಗಿ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131 26573421 9964108171

22.07.2022ರಿಂದ 12ದಿನಗಳು ವಿಮಾನ ಮತ್ತು ಏಸಿ ಬಸ್ಸು ಹಾಗೂ ಏಸಿ ರೂಂಸಹಿತ 45000/...ಅಮರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ಅಮೃತಸರ್,ವಾಘಬಾರ್ಡರ್. ಏಷ್ಯನ್ ಟ್ರಾವಲ್ ಲೈನ್ಸ್,163/3 ಆರ್.ವಿ.ರಸ್ತೆ,ಬೆಂಗಳೂರು 8105657052, 9480182865.

ಶ್ರೀರಾಜರಾಜೇಶ್ವರಿ ಟೂರ್ಸ್ 9743895346 9739618243, 22.6.2022 5ದಿನ ತಮಿಳುನಾಡು. 3.7.22 8ದಿನ ಶಿರಡಿ ಪಂಚಜ್ಯೋತಿರ್ಲಿಂಗ. 7.8.22 7ದಿನ ಕಾಶಿ,ಅಯೋಧ್ಯ, ನೈಮೀಶಾರಣ್ಯ 18.9.22 14ದಿನ ಚಾರ್ಧಾಮ್ 6.10.22 12ದಿನ ನಾರ್ತ್‌ಈಸ್ಟ್

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 23/6/22 ಕಾಶಿ, ಜಾರ್ಖಂಡ್ ಬೈದ್ಯನಾಥ್, ಗಯಾ, ಬುಧಗಯಾ, ಪ್ರಯಾಗ್ರಾಜ್, ಅಯೋಧ್ಯೆ ರೈಲು ವಿಮಾನ.14/7:ಶಿರಡಿ 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಹಣದುಬ್ಬರದ ಪರಿಣಾಮ; ತಜ್ಞರ ಅಭಿಪ್ರಾಯ
ಬಡ್ಡಿದರ ಶೇ 0.35 ಹೆಚ್ಚಳ ಸಾಧ್ಯತೆ

ಮುಂಬೈ (ಪಿಟಿಐ): ಹಣದುಬ್ಬರ ಕಡಿಮೆ ಆಗದೇ ಇರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಕನಿಷ್ಠ ಶೇ 0.35ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಸೋಮವಾರದಿಂದ ಬುಧವಾರದವರೆಗೆ ಮೂರು ದಿನ ಸಭೆ ನಡೆಸಲಿದ್ದು, ಸಭೆಯ ನಿರ್ಧಾರಗಳನ್ನು ಬುಧವಾರ ಘೋಷಿಸಲಿದೆ.

ಬಡ್ಡಿದರ ನಿರ್ಧರಿಸಲು ಆರ್‌ಬಿಐ ಪ್ರಮುಖವಾಗಿ ಪರಿಗಣನೆಗೆ ತೆಗೆದುಕೊಳ್ಳುವ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 7.79ಕ್ಕೆ ಏರಿಕೆ ಅಗಿದ್ದು, ಎಂಟು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಸಗಟು ಹಣದುಬ್ಬರ ಸಹ ಏಪ್ರಿಲ್‌ನಲ್ಲಿ ಶೇ 15.08ಕ್ಕೆ ದಾಖಲೆಯ ಏರಿಕೆ ಕಂಡಿದೆ.

‘ಬಡ್ಡಿದರ ಏರಿಕೆಯು ಶೇ 0.25 ರಿಂದ ಶೇ 0.35ಕ್ಕಿಂತಲೂ ಹೆಚ್ಚಿಗೆ ಇರಲಾರದು. ಏಕೆಂದರೆ ಒಂದೇ ಬಾರಿಗೆ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡುವುದರ ಪರವಾಗಿ ಇಲ್ಲ ಎಂದು ಎಂಪಿಸಿಯು ಮೇ ತಿಂಗಳಿನಲ್ಲಿ ನಡೆದಿದ್ದ ಸಭೆಯಲ್ಲಿ ಸೂಚನೆ ನೀಡಿದೆ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಆರ್ಥಿಕ ತಜ್ಞ ಮದನ್ ಸಬ್ನವೀಸ್ ಹೇಳಿದ್ದಾರೆ.

ಬಿಒಎಫ್‌ಎ ಸೆಕ್ಯುರಿಟೀಸ್ ವರದಿಯ ಪ್ರಕಾರ, ಎಂಪಿಸಿಯು ಬಡ್ಡಿದರವನ್ನು ಜೂನ್‌ನಲ್ಲಿ ಶೇ 0.40ರಷ್ಟು ಮತ್ತು ಆಗಸ್ಟ್‌ನಲ್ಲಿ ಶೇ 0.35ರಷ್ಟು ಹೆಚ್ಚಿಸಲಿದೆ.

‘ಚಾಲ್ತಿ ಖಾತೆ ಕೊರತೆ ಮತ್ತು ವಿತ್ತೀಯ ಕೊರತೆ ಹೆಚ್ಚಾಗಿವೆ. ಹಣದುಬ್ಬರವೂ ಏರಿಕೆ ಆಗುತ್ತಿದೆ.

ಮುಖ್ಯಾಂಶಗಳು
- ಇಂದಿನಿಂದ ಆರ್‌ಬಿಐನ ಎಂಪಿಸಿ ಸಮಿತಿ ಸಭೆ
- ಹೊಂದಾಣಿಕೆ ನೀತಿ ಕೈಬಿಡುವ ಸಾಧ್ಯತೆ

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಿಸುತ್ತಿದೆ. ಹೀಗಾಗಿ ಆರ್‌ಬಿಐಗೆ ಬಡ್ಡಿದರವನ್ನು ಹೆಚ್ಚಳ ಮಾಡದೇ ಬೇರೆ ದಾರಿ ಇಲ್ಲ’ ಎಂದು ಕ್ಲಿಕ್ಸ್ ಕ್ಯಾಪಿಟಲ್ ಕಂಪನಿಯ ಸಿಇಒ ರಾಕೇಶ್ ಕೌಲ್ ತಿಳಿಸಿದ್ದಾರೆ.

‘ದರ ಹೆಚ್ಚಾಗುತ್ತದೆ ಎಂಬುದನ್ನು ಹೇಳಲು ಬುದ್ಧಿವಂತಿಕೆ ಬೇಕಾಗಿಲ್ಲ. ರೆಪೊ ಏರಿಕೆ ಆಗುತ್ತದೆ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಈಚೆಗಷ್ಟೇ ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಹೀಗಾಗಿ ದರ ಏರಿಕೆ ಆಗುವುದಂತೂ ಖಚಿತ. ಆದರೆ, ಪ್ರಮಾಣ ಎಷ್ಟು ಎನ್ನುವುದನ್ನು ಕಾದು ನೋಡಬೇಕಿದೆ ಎಂದು ತಜ್ಞರು ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಮೌಲ್ಯ ₹ 1.38 ಲಕ್ಷ ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ಜೂನ್ 3ಕ್ಕೆ ಕೊನೆಗೊಂಡ ವಾರದಲ್ಲಿ ಅತ್ಯಂತ ಮೌಲ್ಯಯುತ 10 ಕಂಪನಿಗಳಲ್ಲಿ ನಾಲ್ಕು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹2.31 ಲಕ್ಷ ಕೋಟಿ ಹೆಚ್ಚಾಗಿದೆ. ಇದರಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಪಾಲೇ ಹೆಚ್ಚಿಗೆ ಇದೆ.

ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯುತ್ತಿರುವುದರಿಂದ ಕಂಪನಿಗಳ ಬಂಡವಾಳ ಮೌಲ್ಯ ಹೆಚ್ಚಾಗುತ್ತಿದೆ. ವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಶೇ 1.61ರಷ್ಟು ಗಳಿಕೆ ಕಂಡುಕೊಂಡಿದೆ.

ನಾಲ್ಕು ಕಂಪನಿಗಳಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ ₹1.38 ಲಕ್ಷ ಕೋಟಿಯಷ್ಟು ಗರಿಷ್ಠ ಏರಿಕೆ ಆಗಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್), ಇನ್ಫೊಸಿಸ್ ಮತ್ತು ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯವೂ ಹೆಚ್ಚಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಯುಎಲ್, ಎಲ್‌ಐಸಿ, ಎಸ್‌ಬಿಐ, ಎಚ್‌ಡಿಎಫ್‌ಸಿ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳ ಒಟ್ಟಾರೆ ನಷ್ಟವು ₹68,140 ಕೋಟಿ ಆಗಿದೆ.

10 ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮೊದಲ ಸ್ಥಾನದಲ್ಲಿದೆ. ಟಿಸಿಎಸ್ ಮತ್ತು ಎಚ್‌ಡಿಎಫ್ ಬ್ಯಾಂಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

10 ಕಂಪನಿಗಳ ಮಾರುಕಟ್ಟೆ ಬಂಡವಾಳ (ಕೋಟಿಗಳಲ್ಲಿ)

ಕಂಪನಿ	ಏರಿಕೆ/ಇಳಿಕೆ	ಒಟ್ಟಾರೆ ಮೌಲ್ಯ
ರಿಲಯನ್ಸ್	₹1,38,222 ▲	₹18,80,350
ಟಿಸಿಎಸ್	₹64,618 ▲	₹12,58,274
ಎಚ್‌ಡಿಎಫ್‌ಸಿ ಬ್ಯಾಂಕ್	₹6,199 ▼	₹7,66,314
ಇನ್ಫೊಸಿಸ್	₹25,728 ▲	₹6,40,373
ಎಚ್‌ಯುಎಲ್	₹8,963 ▼	₹5,38,561
ಐಸಿಐಸಿಐ ಬ್ಯಾಂಕ್	₹2,750 ▲	₹5,17,049
ಎಲ್‌ಐಸಿ	₹13,472 ▼	₹5,06,157
ಎಸ್‌ಬಿಐ	₹4,194 ▼	₹4,14,369
ಎಚ್‌ಡಿಎಫ್‌ಸಿ	₹9,355 ▼	₹4,13,299
ಭಾರ್ತಿ ಏರ್‌ಟೆಲ್	₹25,955 ▼	₹3,76,972

‘10 ಲಕ್ಷ ಮರ್ಸಿಡಿಸ್ ಕಾರು ದುರಸ್ತಿಗೆ’

ಬರ್ಲಿನ್ (ಎಎಫ್‌ಪಿ): ಬ್ರೇಕಿಂಗ್ ವ್ಯವಸ್ಥೆಯಲ್ಲಿ ಕಂಡುಬಂದಿರುವ ದೋಷ ಸರಿಪಡಿಸಲು ಮರ್ಸಿಡಿಸ್ ಬೆಂಜ್ ಕಂಪನಿಯು 10 ಲಕ್ಷ ಕಾರುಗಳನ್ನು ಹಿಂದಕ್ಕೆ ಪಡೆಯಲಿದೆ ಎಂದು ಜರ್ಮನಿಯ ಫೆಡರಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ (ಕೆಬಿಎ) ಹೇಳಿದೆ.

2004 ರಿಂದ 2015ರ ಅವಧಿಯಲ್ಲಿ ತಯಾರಾದ ಎಂಎ, ಜಿಎಲ್ ಮತ್ತು ಆರ್–ಕ್ಲಾಸ್ ಮಿನಿವ್ಯಾನ್‌ಗಳಲ್ಲಿ ಈ ದೋಷ ಕಂಡುಬಂದಿದೆ ಎಂದು ಜರ್ಮನಿಯ ಮಾಧ್ಯಮಗಳಿಗೆ ಕೆಬಿಎ ಶನಿವಾರ ತಡರಾತ್ರಿ ಮಾಹಿತಿ ನೀಡಿದೆ. ಜರ್ಮನಿಯಲ್ಲಿಯೇ 70 ಸಾವಿರ ಕಾರುಗಳಿವೆ ಎಂದು ಅದು ತಿಳಿಸಿದೆ.

ಕಾರುಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು. ಅಗತ್ಯ ಬಿದ್ದರೆ ಬಿಡಿ ಭಾಗವನ್ನು ಬದಲಾಯಿಸಿ ಕೊಡಲಾಗುವುದು ಎಂದು ಕಂಪನಿ ಹೇಳಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹500

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ	₹302-611
ದ್ವಿತಳಿ	₹444-780

ಷೇರುಪೇಟೆ: ಪರ್ಯಾಯ ಆದಾಯ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಒಂದೆಡೆ ಹಣದುಬ್ಬರ ದಿನದಿಂದ ದಿನಕ್ಕೆ ಏರುಗತಿಯಲ್ಲೇ ಸಾಗುತ್ತಿದೆ, ಮತ್ತೊಂದೆಡೆ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿಯ ಬಡ್ಡಿದರ ಶೇ 7ರ ಗಡಿ ದಾಟುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ನಿರ್ದಿಷ್ಟ ಪರ್ಯಾಯ ಆದಾಯ ಕಂಡುಕೊಳ್ಳುವುದು ಹೇಗೆ ಎನ್ನುವುದು ಹಲವರ ಪ್ರಶ್ನೆ. ಷೇರುಗಳಲ್ಲಿ ಹೂಡಿಕೆ ಮಾಡಿ ಅವುಗಳಿಂದ ಸಿಗುವ ಲಾಭಾಂಶದ (ಡಿವಿಡೆಂಡ್) ಮೂಲಕ ಪರ್ಯಾಯ ಆದಾಯ ಗಳಿಸಲು ಸಾಧ್ಯವಿದೆ. ಷೇರು ಹೂಡಿಕೆಯಲ್ಲಿ ಲಾಭಾಂಶ ಅಂದರೆ ಏನು? ಕಂಪನಿಗಳು ಏಕೆ ಲಾಭಾಂಶ ಕೊಡುತ್ತವೆ? ಷೇರು ಲಾಭಾಂಶದ ಮೂಲಕ ಆದಾಯ ಗಳಿಸಲು ತಿಳಿದಿರಬೇಕಾದ ವಿಚಾರಗಳೇನು? ಹೆಚ್ಚು ಲಾಭಾಂಶ ಆದಾಯ ಗಳಿಸಲು ಯಾವ ರೀತಿ ಷೇರುಗಳ ಆಯ್ಕೆ ಮಾಡಬೇಕು? ಬನ್ನಿ ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕಂಡುಕೊಳ್ಳೋಣ.

ಷೇರುಗಳಲ್ಲಿ ಹೂಡಿಕೆ ಮಾಡಿ 2 ರೀತಿಯ ಆದಾಯ ಗಳಿಕೆ ಸಾಧ್ಯ: ಷೇರುಗಳಲ್ಲಿ ಹೂಡಿಕೆ ಮಾಡಿ ಆದಾಯ ಗಳಿಸಲು ಎರಡು ದಾರಿಗಳಿವೆ. ಒಂದನೆಯದು, ಷೇರಿನ ಬೆಲೆ ಹೆಚ್ಚಳದ ಮೂಲಕ, ಅಂದರೆ, ನೀವು ₹ 100 ನೀಡಿ ಕಂಪನಿಯೊಂದರ ಷೇರು ಖರೀದಿಸಿರುತ್ತೀರಿ. ಅದರ ಬೆಲೆ ಮುಂದಿನ ದಿನಗಳಲಿ ₹ 150 ಆಗುತ್ತದೆ. ಹೀಗಾದಾಗ ನಿಮಗೆ ₹ 50 ಲಾಭವಾಗುತ್ತದೆ. ಇನ್ನು ಎರಡನೇಯ ದಾರಿ, ಕಂಪನಿಗಳು ಘೋಷಣೆ ಮಾಡುವ ಲಾಭಾಂಶದ ಮೂಲಕ ನಿಮಗೆ ಆದಾಯ ಸಿಗುತ್ತದೆ. ಉದಾಹರಣೆಗೆ ನಿಮ್ಮ ಬಳಿ ಕಂಪನಿಯೊಂದರ 20 ಷೇರುಗಳಿವೆ ಎಂದುಕೊಳ್ಳಿ ಆ ಕಂಪನಿ ಪ್ರತಿ ಷೇರಿಗೆ ₹10 ಲಾಭಾಂಶ ಘೋಷಣೆ ಮಾಡಿದರೆ ನಿಮ್ಮ ಬ್ಯಾಂಕ್ ಖಾತೆಗೆ ₹ 200 ರೂಪಾಯಿ ಸಂದಾಯವಾಗುತ್ತದೆ.

ಲಾಭಾಂಶ ಅಂದರೆ ಏನು? ಯಾವುದೇ ಕಂಪನಿಯ ಷೇರು ಖರೀದಿಸಿದಾಗ ಅದರಲ್ಲಿ ನಿಮ್ಮದೊಂದಿಷ್ಟು ಪಾಲುದಾರಿಕೆ ಇರುತ್ತದೆ. ಷೇರು ಹೊಂದಿರುವ ಕಂಪನಿ ಲಾಭ ಗಳಿಸಿದಾಗ ಆ ಲಾಭದ ಒಂದಿಷ್ಟು ಪಾಲನ್ನು ಷೇರುದಾರರಿಗೆ ಹಂಚಿಕೆ ಮಾಡುತ್ತದೆ. ಅದೇ ಲಾಭಾಂಶ ಆದಾಯ. ಎಲ್ಲಾ ಕಂಪನಿಗಳ ಷೇರುಗಳು ಹೆಚ್ಚು ಲಾಭಾಂಶದ ಆದಾಯ ತಂದು ಕೊಡುವುದಿಲ್ಲ. ಉದಾಹರಣೆಗೆ ಐಟಿಸಿ ಹೆಚ್ಚೆಚ್ಚು ಲಾಭಾಂಶವನ್ನು ಹೂಡಿಕೆದಾರರಿಗೆ ನೀಡುತ್ತಾ ಬಂದಿದೆ. ಆದರೆ ಹಿಂದೂಸ್ಥಾನ ಯುನಿಲಿವರ್ ತನ್ನ ಹೂಡಿಕೆದಾರರಿಗೆ ಹೆಚ್ಚು ಪ್ರಮಾಣದಲ್ಲಿ ಲಾಭಾಂಶ ಘೋಷಣೆ ಮಾಡುವುದಿಲ್ಲ. ಬಂದ ಲಾಭದಿಂದ ವಹಿವಾಟು ವಿಸ್ತರಣೆ ಮಾಡಿ ಷೇರುಗಳ ಬೆಲೆ ಮತ್ತಷ್ಟು ಹೆಚ್ಚಳವಾಗುವಂತೆ ನೋಡಿಕೊಳ್ಳುತ್ತಿದೆ. ನೆನಪಿಡಿ ಲಾಭಾಂಶ ಘೋಷಣೆ ಮಾಡುವ ಕಂಪನಿಗಳೆಲ್ಲಾ ಉತ್ತಮ, ಘೋಷಣೆ ಮಾಡದ ಕಂಪನಿಗಳೆಲ್ಲಾ ಕಳಪೆ ಎಂಬ ಲೆಕ್ಕಾಚಾರ ಸರಿಯಲ್ಲ. ಲಾಭಾಂಶ ಘೋಷಣೆ ನಿರ್ದಿಷ್ಟ ಕಂಪನಿಯ ವಹಿವಾಟಿನ ವಿಧಾನ ಮತ್ತು ರೀತಿ–ನೀತಿಗಳನ್ನು ಅವಲಂಬಿಸಿರುತ್ತದೆ.

ಒಳ್ಳೆಯ ಲಾಭಾಂಶ ನೀಡುವ ಷೇರುಗಳ ಆಯ್ಕೆ ಹೇಗೆ: ಮೊದಲೇ ಹೇಳಿದ ಹಾಗೆ ಎಲ್ಲಾ ಕಂಪನಿಗಳು ಹೂಡಿಕೆದಾರರಿಗೆ ಲಾಭಾಂಶ ಘೋಷಣೆ ಮಾಡುವುದಿಲ್ಲ. ಹಾಗಾಗಿ ಐತಿಹಾಸಿಕವಾಗಿ ಯಾವ ಕಂಪನಿಗಳು ನಿಯಮಿತವಾಗಿ ಲಾಭಾಂಶ ಘೋಷಣೆ ಮಾಡುತ್ತಿವೆ ಎನ್ನುವುದನ್ನು ಮೊದಲು ನೋಡಿಕೊಂಡು ಷೇರುಗಳ ಆಯ್ಕೆ ಮಾಡಿಕೊಳ್ಳಬೇಕು. ಎರಡನೆಯದಾಗಿ ಕಂಪನಿ ವಾರ್ಷಿಕವಾಗಿ ಎಷ್ಟು ಪ್ರಮಾಣದಲ್ಲಿ ಲಾಭಾಂಶ ಘೋಷಣೆ ಮಾಡುತ್ತಿದೆ ಎನ್ನುವ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ಶೇ 1 ರಿಂದ ಶೇ 4 ರಷ್ಟು ಲಾಭಾಂಶವನ್ನು ಕಂಪನಿಗಳು ನೀಡುತ್ತವೆ. ಅದಕ್ಕಿಂತಲೂ ಹೆಚ್ಚು ಲಾಭಾಂಶ ನೀಡುವ ಕಂಪನಿಗಳೂ ಕೂಡ ಇವೆ. ನಿರ್ದಿಷ್ಟ ಕಂಪನಿ ಪ್ರತಿ ಷೇರಿಗೆ ವಾರ್ಷಿಕವಾಗಿ ಲಾಭಾಂಶ ನೀಡಿರುವ ಮೊತ್ತವನ್ನು ತೆಗೆದುಕೊಂಡು, ಆ ಷೇರಿನ ಪ್ರಸ್ತುತ ಮಾರುಕಟ್ಟೆ ಬೆಲೆಯೊಂದಿಗೆ ಭಾಗಿಸಿದಾಗ ಪ್ರತಿ ಷೇರಿಗೆ ಸಿಗುತ್ತಿರುವ ಶೇಕಡವಾರು ಲಾಭಾಂಶದ ಮೊತ್ತ ತಿಳಿಯುತ್ತದೆ. (ಸೂತ್ರ:ಪ್ರತಿ ಷೇರಿಗೆ ಘೋಷಣೆಯಾಗಿರುವ ಲಾಭಾಂಶ / ಷೇರಿನ ಪ್ರಸ್ತುತ ಮಾರುಕಟ್ಟೆ ಬೆಲೆ = ಲಾಭಾಂಶ ಗಳಿಕೆ. ಉದಾಹರಣೆಗೆ ಕಂಪನಿಯೊಂದು ಒಂದು ವರ್ಷದ ಅವಧಿಯಲ್ಲಿ ₹ 10 ಲಾಭಾಂಶ ಘೋಷಣೆ ಮಾಡಿದ್ದು ಆ ಕಂಪನಿಯ ಷೇರಿನ ಪ್ರಸ್ತುತ ಮಾರುಕಟ್ಟೆ ದರ ₹ 100 ಇದೆ ಎಂದಾದಲ್ಲಿ ಲಾಭಾಂಶ ಗಳಿಕೆ ಶೇ 10 ರಷ್ಟಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಮೂರನೇ ವಾರವೂ ಸೂಚ್ಯಂಕಗಳ ಗಳಿಕೆ

ಅನಿಶ್ಚಿತತೆಯ ನಡುವೆ ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಗಳಿಕೆ ದಾಖಲಿಸಿವೆ. ಜೂನ್ 3 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಶೇ 1.61 ರಷ್ಟು ಜಿಗಿದಿದೆ. ನಿಫ್ಟಿ ಶೇ 1.42 ರಷ್ಟು ಸುಧಾರಿಸಿದೆ. ನಿಫ್ಟಿ ಮಿಡ್ ಕ್ಯಾಪ್ 100 ಸೂಚ್ಯಂಕ ಶೇ 1.32 ರಷ್ಟು ಹೆಚ್ಚಳ ದಾಖಲಿಸಿದ್ದರೆ, ಬಿಎಸ್‌ಸಿ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.98 ರಷ್ಟು ಮುನ್ನಡೆದಿದೆ.

ವಲಯವಾರು ಪ್ರಗತಿಯಲ್ಲಿ ಫಾರ್ಮಾ ಮತ್ತು ಬ್ಯಾಂಕಿಂಗ್ ವಲಯ ಹೊರತುಪಡಿಸಿ ಎಲ್ಲ ವಲಯಗಳು ಗಳಿಕೆ ಕಂಡಿವೆ. ನಿಫ್ಟಿ ರಿಯಲ್ ಎಸ್ಟೇಟ್ ಶೇ 4.90, ಮಾಹಿತಿ ತಂತ್ರಜ್ಞಾನ ಶೇ 4.41, ನಿಫ್ಟಿ ಮಾಧ್ಯಮ ಶೇ 3.59, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.43, ಲೋಹ ವಲಯ ಶೇ 2.25 ರಷ್ಟು ಹೆಚ್ಚಳವಾಗಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಮಹಿಂದ್ರ ಅಂಡ್ ಮಹಿಂದ್ರ ಶೇ 7.96, ರಿಲಯನ್ಸ್ ಶೇ 7.94, ಟಿಸಿಎಸ್ ಶೇ 5.48 ರಷ್ಟು ಜಿಗಿದಿವೆ. ಅಪೊಲೋ ಹಾಸ್ಪಿಟಲ್ಸ್ ಶೇ 7.07, ಹಿರೋ ಮೋಟೋ ಕಾರ್ಪ್ ಶೇ 5 ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಶೇ 4.53 ರಷ್ಟು ಕುಸಿದಿವೆ.

ಮುನ್ನೋಟ: ಜೂನ್ 6 ರಂದು ಅಮೆರಿಕ ಉದ್ಯೋಗ ಕುರಿತ ದತ್ತಾಂಶಕ್ಕೆ ಮಾರುಕಟ್ಟೆಗಳು ಪ್ರತಿಕ್ರಿಯಿಸಲಿವೆ. ಜಾಗತಿಕವಾಗಿ ಬಹುತೇಕ ದೇಶಗಳ ಷೇರುಪೇಟೆಗಳು ಸದ್ಯ ಬಡ್ಡಿ ದರ ಹೆಚ್ಚಳ ಮತ್ತು ಬೆಲೆ ಏರಿಕೆ ಹೊಡೆತಕ್ಕೆ ಸಿಲುಕಿವೆ. ಈ ನಡುವೆ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು 40 ಮೂಲಾಂಶಗಳಷ್ಟು ಹೆಚ್ಚಳ ಮಾಡುವ ಸಾಧ್ಯತೆಯಿದ್ದು, ಅದು ಕೂಡ ಪೇಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ.

ಕಳೆದ 1 ವರ್ಷದಲ್ಲಿ ಉತ್ತಮ ಲಾಭಾಂಶ ನೀಡಿರುವ ಕಂಪನಿಗಳು

ಕಂಪನಿ ಹೆಸರು	1 ವರ್ಷದ ಸರಾಸರಿ ಲಾಭಾಂಶ (%)	ಕಂಪನಿ ಹೆಸರು	1 ವರ್ಷದ ಸರಾಸರಿ ಲಾಭಾಂಶ (%)
ವೇದಾಂತ	14.2	ಹಿಂದೂಸ್ಥಾನ್ ಜಿಂಕ್	7.11
ಎನ್‌ಎಂಡಿಸಿ	11.7	ಎನ್‌ಎಚ್‌ಪಿಸಿ	4.91
ಆರ್‌ಇಸಿ	10.7	ಐಆರ್‌ಎಫ್‌ಸಿ	4.91
ಇಂಡಿಯನ್ ಆಯಿಲ್	10.27	ಐಟಿಸಿ	4.16
ಇಂಡಸ್ ಟವರ್ಸ್	9.99	ಎನ್‌ಟಿಪಿಸಿ	4.01
ಕೋಲ್ ಇಂಡಿಯಾ	8.08	ಬಜಾಜ್ ಆಟೋ	3.81
ಎಸ್‌ಜೆವಿಎನ್	7.88	ಎಚ್‌ಸಿಎಲ್ ಟೆಕ್ನಾಲಜೀಸ್	2.98

(ಸೂಚನೆ: ಜೂನ್ 3 ರ ಅಂಕಿ- ಅಂಶ. ಇದು ಹೂಡಿಕೆ ಶಿಫಾರಸು ಅಲ್ಲ. ಹೂಡಿಕೆಗೂ ಮುನ್ನ ತಜ್ಞರ ಸಲಹೆ ಪಡೆಯಿರಿ)

‘ಉಕ್ರೇನ್‌ಗೆ ದೂರಗಾಮಿ ಕ್ಷಿಪಣಿ ಕೊಡದಿರಿ’

ಮಾಸ್ಕೊ/ಕೀವ್ (ಎಪಿ/ಎಎಫ್‌ಪಿ): ‘ಉಕ್ರೇನ್‌ಗೆ ದೂರಗಾಮಿ ಕ್ಷಿಪಣಿಗಳನ್ನು ಪೂರೈಸಿದರೆ, ಅದಕ್ಕೆ ತಕ್ಕನಾದ ಶಸ್ತ್ರಾಸ್ತ್ರಗಳನ್ನು ನಾವು ಬಳಸುತ್ತೇವೆ’ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳಿಗೆ ಭಾನುವಾರ ಹೊಸ ಎಚ್ಚರಿಕೆ ನೀಡಿದ್ದಾರೆ.

‘ಪಶ್ಚಿಮದ ರಾಷ್ಟ್ರಗಳ ನಿರ್ಧಾರ, ಸಂಘರ್ಷವನ್ನು ಸಾಧ್ಯವಾದಷ್ಟು ಕಾಲ ವಿಸ್ತರಿಸುವ ಏಕೈಕ ಉದ್ದೇಶ ಹೊಂದಿದೆ. ಇದಕ್ಕೆ ಪ್ರತ್ಯುತ್ತರವಾಗಿ, ನಾವು ಮುಟ್ಟದೇ ಬಿಟ್ಟಿರುವ ಹೊಸ ಗುರಿಗಳನ್ನು ಹೊಡೆಯುತ್ತೇವೆ’ ಎಂದು ಪುಟಿನ್ ಎಚ್ಚರಿಸಿರುವುದಾಗಿ ರಷ್ಯಾದ ಸುದ್ದಿ ಸಂಸ್ಥೆ ಹೇಳಿದೆ.

ಅಮೆರಿಕವು ಉಕ್ರೇನ್‌ಗೆ ಹಿಮಾರ್ಸ್ ಕ್ಷಿಪಣಿ ವ್ಯವಸ್ಥೆ ಪೂರೈಸುವುದಾಗಿ ಘೋಷಿಸಿರುವ ಬೆನ್ನಲ್ಲೇ ಪುಟಿನ್, ರೋಸ್ಸಿಯಾ –1 ಟಿ.ವಿಗೆ ಭಾನುವಾರ ನೀಡಿದ್ದಾರೆ. ‘ಅಮೆರಿಕವು ಪೂರೈಸಿರುವ ಶಸ್ತ್ರಾಸ್ತ್ರಗಳಲ್ಲಿ ಹೊಸದೇನು ಇಲ್ಲ. ಇವು ಸೋವಿಯತ್ ಯುಗದ ಶಸ್ತ್ರಾಸ್ತ್ರಗಳನ್ನು ಹೋಲುತ್ತವೆ’ ಎಂದಿದ್ದಾರೆ.

ಕೀವ್ ಮೇಲೆ ಕ್ಷಿಪಣಿಗಳ ಸುರಿಮಳೆ

ಕೀವ್ ಮೇಲೆ ಭಾನುವಾರ ನಸುಕಿನಲ್ಲಿ ವಾಯು ಮತ್ತು ಕ್ಷಿಪಣಿ ದಾಳಿ ನಡೆಸಿ, ಪಶ್ಚಿಮ ದೇಶಗಳು ಪೂರೈಸಿದ್ದ ಯುದ್ಧ ಟ್ಯಾಂಕ್‌ಗಳು, ಪ್ರಮುಖ ಶಸ್ತ್ರಾಸ್ತ್ರಗಳನ್ನು ನಾಶಗೊಳಿಸಲಾಗಿದೆ. ರಾಜಧಾನಿ ಗುರಿಯಾಗಿಸಿ ಕ್ಷಿಪಣಿಗಳ ಸುರಿಮಳೆಗರೆದಿರುವ ರಷ್ಯಾ ಸೇನೆ, ರೈಲ್ವೆ ಸೌಲಭ್ಯಗಳು ಮತ್ತು ಇತರ ಮೂಲಸೌಕರ್ಯಗಳನ್ನು ಧ್ವಂಸಗೊಳಿಸಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ಕ್ಯಾಸ್ಪಿಯನ್ ಸಮುದ್ರದಿಂದ ರಷ್ಯಾ ಉಡಾಯಿಸಿರುವ ಕ್ಷಿಪಣಿಗಳು ಮತ್ತು ವೈಮಾನಿಕ ಬಾಂಬ್ ದಾಳಿಗಳು ಕೀವ್ ಹೊರವಲಯದ ಡಾರ್ನಿಟ್‌ಸ್ಕಿ ಮತ್ತು ನಿಪ್ರೊವ್‌ಸ್ಕಿ ಜಿಲ್ಲೆಗಳಲ್ಲಿ ಭಾರಿ ಹಾನಿ ಮಾಡಿವೆ.

ಸಂಕ್ಷಿಪ್ತ ಸುದ್ದಿ

ಚೀನಾ ಬಾಹ್ಯಾಕಾಶ ನಿಲ್ದಾಣಕ್ಕೆ ಮೂವರು ಗಗನಯಾನಿಗಳು

ಬೀಜಿಂಗ್/ಜಿಯುಕ್ವಾನ್ (ಪಿಟಿಐ): ಪ್ರಸ್ತುತ ಭೂಮಿಯ ಸುತ್ತ ಸುತ್ತುತ್ತಿರುವ ಚೀನಾದ ಬಾಹ್ಯಾಕಾಶ ನಿಲ್ದಾಣದ ನಿರ್ಮಾಣವನ್ನು ಪೂರ್ಣಗೊಳಿಸಲು ಚೀನಾ ಭಾನುವಾರ ಆರು ತಿಂಗಳ ಕಾರ್ಯಾಚರಣೆಗೆ ಮೂವರು ಗಗನಯಾತ್ರಿಗಳನ್ನು ಕಳುಹಿಸಿದೆ.

ಗನಯಾತ್ರಿಗಳಾದ ಚೆನ್ ಡಾಂಗ್, ಲಿಯು ಯಾಂಗ್ ಮತ್ತು ಕೈ ಕ್ಸುಝೆ ಅವರನ್ನು ವಾಯುವ್ಯ ಚೀನಾದ ಜಿಯುಕ್ವಾನ್‌ನಲ್ಲಿರುವ ಉಪಗ್ರಹ ಉಡಾವಣಾ ಕೇಂದ್ರದಿಂದ ಶೆಂಝೌ-14 ನೌಕೆಯ ಮೂಲಕ ಬಾಹ್ಯಾಕಾಶಕ್ಕೆ ಕಳುಹಿಸಲಾಗಿದೆ.

ಚರ್ಚ್‌ನಲ್ಲಿ ದಾಳಿ: ಹಲವರ ಸಾವು

ಅಬುಜಾ (ಎಪಿ): ನೈರುತ್ಯ ನೈಜೀರಿಯಾದ ಒಂಡೋ ರಾಜ್ಯದ ಸೇಂಟ್ ಫ್ರಾನ್ಸಿಸ್ ಕ್ಯಾಥೋಲಿಕ್ ಚರ್ಚ್‌ನಲ್ಲಿ ಭಾನುವಾರ ಬಂದೂಕುಧಾರಿಗಳು ಗುಂಡಿನ ಮಳೆಗರೆದು, ಸ್ಫೋಟಕಗಳನ್ನು ಸ್ಫೋಟಿಸಿದ್ದರಿಂದ ಮಕ್ಕಳು ಸೇರಿ ಹತ್ತಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

॥ ಶ್ರೀ ಗುರು ಬಸವಲಿಂಗಾಯ ನಮಃ ॥

ಕನ್ನಡ ನಾಡಿನ ಬಸವ ಜನ್ಮಭೂಮಿ ವಿಜಯಪುರ ಜಿಲ್ಲೆಯ
ಬಸವನ ಬಾಗೇವಾಡಿ ತಾಲೂಕಿನ ಇಂಗಳೇಶ್ವರದ
ಶ್ರೀ ಬಸವೇಶ್ವರ ವಚನ ಶಿಲಾಮಂಟಪದ ಲೋಕಾರ್ಪಣೆ (ಉದ್ಘಾಟನೆ) ಸಮಾರಂಭ

ಶ್ರೀ ಮ.ನಿ.ಪ್ರ ಚನ್ನಬಸವ ಮಹಾಸ್ವಾಮಿಗಳು
ವಿರಕ್ತಮಠ, ಇಂಗಳೇಶ್ವರ, ನಿವರಗಿ.



ಶ್ರೀ ಮ.ನಿ.ಪ್ರ ಜಗದ್ಗುರು ಡಾ. ಸಿದ್ಧಲಿಂಗಸ್ವಾಮಿಗಳು
ಇಂಗಳೇಶ್ವರ, ಕೊಡಂಗಲ್, ಚಿಕ್ಕಸೂಗೂರ, ಹೊಸಪೇಟ, ಮಹಾಗಾಂವ, ಬಸವತೀರ್ಥಮಠ, ಕ್ಷೇತ್ರಾಧ್ಯಕ್ಷರು

ದಿನಾಂಕ : 08-06-2022 ರಂದು ಬೆಳಿಗ್ಗೆ 10-00 ಘಂಟೆಗೆ ವಚನ ಶಿಲಾ ಮಂಟಪದ ಲೋಕಾರ್ಪಣೆ

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು
ಸುತ್ತೂರು ಶ್ರೀವೀರಸಿಂಹಾಸನಮಠ, ಮೈಸೂರು.

ಪದ್ಮವಿಭೂಷಣ ಡಾ॥ ಶ್ರೀ ವಿರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ

ಮಾನ್ಯಶ್ರೀ ಥಾವರ್‌ಚಂದ್ ಗೆಹ್ಲೋಟ್
ಘನವೆತ್ತ ರಾಜ್ಯಪಾಲರು, ಕರ್ನಾಟಕ ಸರಕಾರ

ಮಾನ್ಯಶ್ರೀ ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ
ಇವರನ್ನು ಆಹ್ವಾನಿಸಲಾಗಿದೆ

ಮಾನ್ಯಶ್ರೀ ಬಿ. ಎಸ್. ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ದಿನಾಂಕ : 07-06-2022 ರಂದು ಬೆಳಿಗ್ಗೆ 10-00 ಘಂಟೆಗೆ

ಶ್ರೀ ಮು.ನಿ.ಪ್ರ. ಡಾ. ಸಿದ್ಧಲಿಂಗ ಮಹಾಸ್ವಾಮಿಗಳು
ಸಿದ್ಧಗಂಗಾಮಠ ತುಮಕೂರು. ಇವರುಗಳ ಸಾನಿಧ್ಯದಲ್ಲಿ

ಪ.ಪೂ. ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು
ಜ್ಞಾನಯೋಗಾಶ್ರಮ ವಿಜಯಪುರ.

ಸಾಯಂಕಾಲ 4-00 ಗಂಟೆಗೆ

ಮಾನ್ಯಶ್ರೀ ಸಿದ್ಧರಾಮಯ್ಯ
ವಿರೋಧ ಪಕ್ಷದ ನಾಯಕರು,

ಮಾನ್ಯಶ್ರೀ ಡಿ ಕೆ ಶಿವಕುಮಾರ
ಕೆಪಿಸಿಸಿ, ಅಧ್ಯಕ್ಷರು

ಮಾನ್ಯಶ್ರೀ ಹೆಚ್. ಡಿ. ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿಗಳು ಸಭಾದಲ್ಲಿ ಭಾಗವಹಿಸುವರು

ಬಸವ ಪುರಾಣವು ದಿ : 19.05.2022 ರಿಂದ 06.06.2022ರ ವರೆಗೆ ಪ್ರತಿ ದಿನ ಸಾಯಂಕಾಲ 7.00 ಘಂಟೆಯಿಂದ 9.00 ಘಂಟೆಯವರೆಗೆ ಮಠದ ಆವರಣದಲ್ಲಿ ನಡೆಯುವುದು.
ಕನ್ನಡ ಸಾಹಿತ್ಯ ಪರಿಷತ್ ವಿಜಯಪುರ ಇವರಿಂದ ಸಂಯೋಜನೆಗೊಂಡ ಗೋಷ್ಠಿಗಳ : ದಿನಾಂಕ : 7 ಹಾಗೂ 8 ರಂದು ಪ್ರತಿದಿನ ಮುಂಜಾನೆ 10.00 ಗಂಟೆಗೆ ಪ್ರಾರಂಭವಾಗಿ ಸಾಯಂಕಾಲ 8.00 ಗಂಟೆಯವರೆಗೆ ನಡೆಯುವುದು. ಮಧ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜನಗೊಂಡ ಭರತನಾಟ್ಯ, ವಚನ ಸಂಗೀತೋತ್ಸವ ಹಾಗೂ
ದಿನಾಂಕ : 07.06.2022 ರಂದು ಪ್ರಾತಃಕಾಲದಲ್ಲಿ ಇಂಗಳೇಶ್ವರ ವಿರಕ್ತಮಠದ ಕಿರಿಯ ಶ್ರೀಗಳಾದ ಶ್ರೀ ಮ.ನಿ.ಪ್ರ. ಡಾ॥ ಸಿದ್ಧಲಿಂಗಸ್ವಾಮಿಗಳವರ ಪಟ್ಟಾಧಿಕಾರ ಕಾರ್ಯಕ್ರಮವು ನಡೆಯುವುದು.

ಮಾದರಸ, ಮಾದಲಾಂಬಿಕೆ, ವಿಶ್ವಗುರು ಬಸವಣ್ಣನವರ, ಅಕ್ಕನಾಗಮ್ಮ ಹಾಗೂ ಷಟ್‌ಸ್ಥಲಜ್ಞಾನಿ ಚನ್ನಬಸವಣ್ಣನವರ ಜನ್ಮಭೂಮಿಯಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರದ ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠದಲ್ಲಿ ಬಸವೇಶ್ವರ ವಚನ ಶಿಲಾ ಶಾಸನದ ಕಟ್ಟಡವನ್ನು ಸುಮಾರು 40 ವರ್ಷಗಳ ಪರ್ಯಂತರ ಕಾಮಗಾರಿ ನಡೆದು ಈಗ ಸಂಪನ್ನವಾಗುತ್ತಿದೆ. ಬಸವಣ್ಣನವರ ಸಮಗ್ರ ವಚನಗಳನ್ನು ಕಲ್ಲಿನಲ್ಲಿ ಕೆತ್ತಿದಂತೆ ಉಳಿದ ಶರಣರ ಹಾಗೂ ಶೂನ್ಯ ಸಂಪಾದನೆಯ ಒಂದು ಭಾಗವನ್ನು ಕೂಡ ಶಿಲಾದಲ್ಲಿ ಕೆತ್ತಿಸಲಾಗಿದೆ. ಇದು ಬರೋಡಾ ವಿಶ್ವ ವಿದ್ಯಾಲಯದಂತೆ ಜಗತ್ತಿನಲ್ಲಿಯೇ ಹೆಚ್ಚು ಅಕ್ಷರಗಳುಳ್ಳ ಲಿಪಿ ಕಟ್ಟಡ. ಅಂದರೆ 1 ಲಕ್ಷ 60ಸಾವಿರಕ್ಕಿಂತ ಹೆಚ್ಚು ಅಕ್ಷರಗಳನ್ನು ಹೊಂದಿದೆ, ಈ ಐತಿಹಾಸಿಕ ಕಟ್ಟಡ ಲೋಕಾರ್ಪಣೆ ಆಗಲಿದೆ. ದಿನಾಂಕ : 07/08-06-2022 ಮಂಗಳವಾರ, ಬುಧವಾರ ಶ್ರೀ ಸಿದ್ದಲಿಂಗ ಶಿವಯೋಗಿಗಳವರ ಜಾತ್ರಾಮಹೋತ್ಸವ ಅಂದರೆ ಇಂಗಳೇಶ್ವರ ಉತ್ಸವ ಇರುತ್ತದೆ. ಈ ದಿನಾಂಕದಂದು ಸಂಸ್ಥೆಯ ಕಟ್ಟಡಗಳ ಲೋಕಾರ್ಪಣೆ ಮಾಡುವ ವಿಚಾರ, ಘನವೆತ್ತ ರಾಜ್ಯಪಾಲರನ್ನು, ಮಾನ್ಯ ಮುಖ್ಯಮಂತ್ರಿಗಳನ್ನು, ಕೇಂದ್ರ ಗಣ್ಯಾತಿಗಣ್ಯರನ್ನು ಆಹ್ವಾನಿಸಲಾಗಿದೆ. ಕನ್ನಡ ನಾಡಿನ ಸುಮಾರು 300ಕ್ಕೂ ಹೆಚ್ಚು ಮಠಾಧಿಪತಿಗಳನ್ನು, ಆಹ್ವಾನಿಸುವ ಉದ್ದೇಶವನ್ನು ಹೊಂದಲಾಗಿದೆ. ಅಲ್ಲದೆ ಕನಿಷ್ಠ 2-3 ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಗುರುವಾರ ದಿನಾಂಕ 05.05.2022 ರಿಂದ ಪ್ರಾರಂಭವಾಗಿ ಬಸವ ಜ್ಯೋತಿ ರಥವು ಅಖಂಡ ವಿಜಯಪುರ ಜಿಲ್ಲೆಯಾದ್ಯಂತ ಸಂಚರಿಸಿ 07ನೇ ಜೂನ್ 2022 ತಾರೀಖಿಗೆ ಇಂಗಳೇಶ್ವರ ತಲುಪುತ್ತಿದೆ. ಇಡೀ ಭಾರತದ್ಯಾಂತ ಪಾದಯಾತ್ರೆಯ ಮೂಲಕ ಸಂಚರಿಸಿದ, ವಾಕ್ ಸಿದ್ಧಿಪುರುಷರು, ಪರಮ ವೈರಾಗ್ಯ ಮೂರ್ತಿಗಳೂ, ಲಿಂಗಪೂಜಾನಿಷ್ಠರು ಸತ್ತ ಹಯ(ಕುದರೆ)ಯನ್ನು ಬದುಕಿಸಿದ ಹಿರಿಯ ಪೂಜ್ಯರಾದ ಶ್ರೀ ಮ.ನಿ.ಪ್ರ. ಚನ್ನಬಸವ ಮಹಾಸ್ವಾಮಿಗಳು ಕನಡ್ನನಾಡಿನ ಹಿರಿಯ ವಿರಕ್ತಪೂಜ್ಯರು, ಇಂತಹ ಪೂಜ್ಯರು ನಡೆದಾಡುವ ದೇವರು, ನಮ್ಮ ಮಧ್ಯದಲ್ಲಿ ಶತಾಯಿಷಿಗಳಾಗುತ್ತಿರುವ ಪೂಜ್ಯರು ಇರುವುದು ನಮ್ಮ ಭಾಗ್ಯ ಅವರ ಆಶೀರ್ವಾದ ಪಡೆಯುವುದೊಂದೆ ನಾಡಿನ ಜನರ ಪುಣ್ಯ ಭಕ್ತರಲ್ಲಿ ಸವಿನಯ ಪ್ರಾರ್ಥನೆ : ಎಲ್ಲರೂ ವೈಯಕ್ತಿಕ ಆಮಂತ್ರಣ ಪತ್ರಿಕೆಯನ್ನು ಬಯಸುವ ಬದಲು ತಾವಾಗಿಯೇ ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಬೇಕೆಂದು ವಿನಂತಿಸುತ್ತೇವೆ. ಆಡಳಿತ ಅಧಿಕಾರಿಗಳು ಹಾಗೂ ಸಮಸ್ತ ಸದ್ಭಕ ಮಂಡಳಿ.

ಕಾಣಿಕೆ ಕೊಡುವ ಸದ್ಭಕ್ತರ ಸಂಖ್ಯೆ ಹೇರಳ ಆಗುತ್ತಿರುವರಿಂದ ಈ ನಂಬರಿಗೆ ಸಲ್ಲಿಸಬಹುದು ಪೆ 8105216111 ದವಸ ಧಾನ್ಯ, ರೊಟ್ಟಿ, ಕೊಡುತ್ತಿರುವ ಸದ್ಭಕ್ತರು ಕೌಂಟರಿನಲ್ಲಿ ಹೆಸರು ನೋದಾಂಯಿಸಿರಿ

ಸಮಸ್ತ ಸದ್ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕನ್ನಡ ಸಾಹಿತ್ಯವನ್ನು ಆಸ್ವಾದಿಸಿ ಬಸವಾದಿ ಪ್ರಮಥರ ಕೃಪೆಗೆ ಪಾತ್ರರಾಗಲು ಕೋರಿದೆ.
ವಿಜಯಪುರ, ಬಾಗಲಕೋಟೆ ಅವಳಿ ಜಿಲ್ಲೆಯ ಉಸ್ತುವಾರಿ ಸಚಿವರುಗಳು, ಶಾಸಕರುಗಳು ಹಾಗೂ ಶ್ರೀ ಹಾಸಿಂಪೀರ ವಾಲೀಕಾರ
ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರು ಹಾಗೂ ತಾಲೂಕಾ ಅಧ್ಯಕ್ಷರು ಮತ್ತು ಸಮಸ್ತ ಪದಾಧಿಕಾರಿಗಳು ಸ್ವಾಗತಕಾರರಾಗಿರುವರು.

ಸಂಪರ್ಕ : 9972997681, 8105592601, 6362739872
ಸರ್ವರಿಗೂ ಹಾರ್ದಿಕ ಸುಸ್ವಾಗತ : ಸಮಸ್ತ ಸದ್ಭಕ್ತ ಮಂಡಳಿ ವಿರಕ್ತಮಠ, ಇಂಗಳೇಶ್ವರ

ಫ್ರೆಂಚ್ ಓಪನ್ ಟೆನಿಸ್: ಫೈನಲ್‌ನಲ್ಲಿ ರೂಡ್ ವಿರುದ್ಧ ಸುಲಭ ಗೆಲುವು

ನಡಾಲ್‌ಗೆ 22ನೇ ಗ್ರ್ಯಾನ್‌ಸ್ಲಾಂ

ಪ್ಯಾರಿಸ್ (ರಾಯಿಟರ್ಸ್): ಅಪಾರ ಅನುಭವ, ದೈಹಿಕ ಸಾಮರ್ಥ್ಯ ಮತ್ತು ಕೌಶಲವನ್ನು ಸಮಪ್ರಮಾಣದಲ್ಲಿ ಬೆರೆಸಿಕೊಂಡು ಆಡಿದ ಸ್ಪೇನ್‌ನ ರಫೆಲ್ ನಡಾಲ್, ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಂ ಟೆನಿಸ್ ಟೂರ್ನಿಯ ಕಿರೀಟ ಮುಡಿಗೇರಿಸಿಕೊಂಡರು.

ರೋಲ್ಯಾಂಡ್ ಗ್ಯಾರೋಸ್‌ನ ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು ನಾರ್ವೆಯ ಕಾಸ್ಪರ್ ರೂಡ್ ವಿರುದ್ಧ 6–3, 6–3, 6–0ರ ನೇರ ಸೆಟ್‌ಗಳ ಜಯ ಸಾಧಿಸಿದರು. ಇಲ್ಲಿ ತಮ್ಮ 14ನೇ ಪ್ರಶಸ್ತಿ ಮುಡಿಗೇರಿಸಿಕೊಂಡರಲ್ಲದೆ, 'ಕ್ಲೇ ಕೋರ್ಟ್ ಕಿಂಗ್' ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಜನವರಿಯಲ್ಲಿ ನಡೆದಿದ್ದ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಗೆದ್ದು ದಾಖಲೆಯ 21ನೇ ಟ್ರೋಫಿ ಜಯಿಸಿದ್ದ ನಡಾಲ್, ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳ ಸಂಖ್ಯೆಯನ್ನು 22ಕ್ಕೆ ಹೆಚ್ಚಿಸಿಕೊಂಡರು.

23 ವರ್ಷದ ರೂಡ್, ತನಗಿಂತ 13 ವರ್ಷ ಹಿರಿಯ ಆಟಗಾರನಿಗೆ ಸರಿಸಾಟಿಯಾಗಿ ನಿಲ್ಲಲು ವಿಫಲರಾದರು. ರೂಡ್ ಬತ್ತಳಿಕೆಯಲ್ಲಿದ್ದ ಅಸ್ತ್ರಗಳು ನಡಾಲ್ ಅನುಭವದ ಮುಂದೆ ಸೊರಗಿದವು. ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ನಾರ್ವೆಯ ಮೊದಲ ಆಟಗಾರ ಎನಿಸಿಕೊಳ್ಳಬೇಕೆಂಬ ಅವರ ಆಸೆ ಕೈಗೂಡಲಿಲ್ಲ.

ಫ್ರೆಂಚ್ ಓಪನ್‌ನಲ್ಲಿ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎಂಬ ಗೌರವ ನಡಾಲ್‌ಗೆ ಒಲಿಯಿತು. ಆಂಡ್ರೆಸ್ ಗಿಮೆನೊ ಹೆಸರಲ್ಲಿದ್ದ 50 ವರ್ಷಗಳಷ್ಟು ಹಳೆಯ ದಾಖಲೆಯನ್ನು ಅವರು ಮುರಿದರು. ಸ್ಪೇನ್‌ನವರೇ ಆದ ಗಿಮೆನೊ 1972 ರಲ್ಲಿ ತಮ್ಮ 34ನೇ ವಯಸ್ಸಿನಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು.

ಏಕಪಕ್ಷೀಯ ಹೋರಾಟ: ಫೈನಲ್ ಪಂದ್ಯದ ಮೊದಲ ಸೆಟ್‌ನ ಎರಡನೇ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ನಡಾಲ್, ತಮ್ಮ ಉದ್ದೇಶ ಏನೆಂಬುದನ್ನು ಸ್ಪಷ್ಟಪಡಿಸಿದರು. ಮುಂದಿನ ಗೇಮ್‌ನಲ್ಲಿ ರೂಡ್, ನಡಾಲ್ ಸರ್ವ್ ಮುರಿದು ತಿರುಗೇಟು ನೀಡಿದರು. ನಾಲ್ಕನೇ ಗೇಮ್‌ನಲ್ಲಿ ಮತ್ತೆ ಎದುರಾಳಿಯ ಸರ್ವ್ ಮುರಿದ ಸ್ಪೇನ್ ಆಟಗಾರ, 3–1ರ ಮುನ್ನಡೆ ಗಳಿಸಿದರು. ಪಂದ್ಯ ಸಾಗಿದಂತೆ ತಮ್ಮ ಹಿಡಿತ ಬಿಗಿಗೊಳಿಸಿ 6–3 ರಲ್ಲಿ ಸೆಟ್ ಗೆದ್ದರು.ಎರಡನೇ ಸೆಟ್‌ನ ನಾಲ್ಕನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ರೂಡ್ 3–1 ರಲ್ಲಿ ಮೇಲುಗೈ ಸಾಧಿಸಿ, ಮರುಹೋರಾಟದ ಸೂಚನೆ ನೀಡಿದರು. ಆದರೆ ಮುಂದಿನ ಗೇಮ್‌ನಲ್ಲಿ ರೂಡ್ ಸರ್ವ್ ಬ್ರೇಕ್ ಮಾಡಿ, ಬಳಿಕ ತಮ್ಮ ಸರ್ವ್ ಉಳಿಸಿಕೊಂಡ ನಡಾಲ್ 3–3 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕದ ಆಟ ಏಕಪಕ್ಷೀಯವಾಗಿ ನಡೆಯಿತು. ಸತತ 11 ಗೇಮ್‌ಗಳನ್ನು ಗೆದ್ದುಕೊಂಡು ಟ್ರೋಫಿಗೆ ಮುತ್ತಿಕ್ಕಿದರು.

ಗಾರ್ಸಿಯಾ–ಕ್ರಿಸ್ಟಿನಾಗೆ ಪ್ರಶಸ್ತಿ: ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಫ್ರಾನ್ಸ್‌ನ ಕೆರೋಲಿನಾ ಗಾರ್ಸಿಯಾ ಮತ್ತು ಕ್ರಿಸ್ಟಿನಾ ಮ್ಲಾಡೆನೊವಿಚ್ ಜೋಡಿ 2–6, 6–3, 6–2 ರಲ್ಲಿ ಅಮೆರಿಕದ ಕೊಕೊ ಗಫ್– ಜೆಸ್ಸಿಕಾ ಪೆಗುಲಾ ಅವರನ್ನು ಮಣಿಸಿ ಟ್ರೋಫಿ ಜಯಿಸಿತು.

ಕಾಸ್ಪರ್ ರೂಡ್ ವಿರುದ್ಧ 6–3, 6–3, 6–0 ಗೆಲುವು

- ಫ್ರೆಂಚ್ ಓಪನ್ ಗೆದ್ದ ಅತಿ ಹಿರಿಯ ಆಟಗಾರ
- ದಾಖಲೆಯ 22ನೇ ಗ್ರ್ಯಾನ್‌ಸ್ಲಾಂ ಕಿರೀಟ
- ಫ್ರೆಂಚ್ ಓಪನ್‌ನಲ್ಲಿ 14ನೇ ಪ್ರಶಸ್ತಿ ಸಂಭ್ರಮ
- 17 ವರ್ಷಗಳ ಹಿಂದೆ ಇಲ್ಲಿ ಮೊದಲ ಟ್ರೋಫಿ ಜಯಿಸಿದ್ದರು
- ಈ ಋತುವಿನ ಎರಡನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ

ಚಾಂಪಿಯನ್ ರಫೆಲ್ ನಡಾಲ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ನಡಾಲ್ ಗೆದ್ದ ಗ್ರ್ಯಾನ್‌ಸ್ಲಾಂ ಪ್ರಶಸ್ತಿ

ಟೂರ್ನಿ	ವರ್ಷ
ಆಸ್ಟ್ರೇಲಿಯನ್ ಓಪನ್	2009, 2022
ಫ್ರೆಂಚ್ ಓಪನ್	2005, 2006, 2007, 2008, 2010, 2011, 2012, 2013, 2014, 2017, 2018, 2019, 2020, 2022
ವಿಂಬಲ್ಡನ್	2008, 2010
ಯುಎಸ್ ಓಪನ್	2010, 2013, 2017, 2019

ಕರ್ನಾಟಕಕ್ಕೆ ಬ್ಯಾಟಿಂಗ್ ಪಡೆಯೇ 'ಶಕ್ತಿ'

ರಣಜಿ ಕ್ರಿಕೆಟ್: ಇಂದಿನಿಂದ ಎಂಟರಘಟ್ಟದ ಪಂದ್ಯ; ಉತ್ತರಪ್ರದೇಶ ಸವಾಲು

ಐತಿಹಾಸಿಕ ಕ್ವಾರ್ಟರ್ ಫೈನಲ್

ರಣಜಿ ಕ್ರಿಕೆಟ್ ಟೂರ್ನಿ ಇತಿಹಾಸದಲ್ಲಿಯೇ ಮೊದಲ ಸಲ ನಾಲ್ಕು ಕ್ವಾರ್ಟರ್‌ಫೈನಲ್ ಪಂದ್ಯಗಳೂ ಒಂದೇ ಊರಿನಲ್ಲಿ ನಡೆಯುತ್ತಿರುವುದು ಇದೇ ಮೊದಲು.

ಆಲೂರಿನ ಕ್ರೀಡಾಂಗಣದಲ್ಲಿ ಮೂರು ಮತ್ತು ಜಸ್ಟ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಒಂದು ಪಂದ್ಯ ನಡೆಯಲಿದೆ. ಅಲ್ಲದೇ ಎರಡು ಸೆಮಿಫೈನಲ್ ಮತ್ತು ಫೈನಲ್‌ಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಆತಿಥ್ಯ ವಹಿಸಲಿದೆ. ಇದೊಂದು ನೂತನ ದಾಖಲೆಯಾಗಿದೆ ಎಂದು ದೇಶಿ ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತ ಚನ್ನಗಿರಿ ಕೇಶವಮೂರ್ತಿ ತಿಳಿಸಿದ್ದಾರೆ.

ಕೆ.ವಿ.ಸಿದ್ಧಾರ್ಥ್ ಮತ್ತು ಮನೀಷ್ ಪಾಂಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ರಂಗಿನಲ್ಲಿ ಮಿಂದೆದ್ದು ಬಂದಿರುವ ಹುಡುಗರೀಗ ಬಿಳಿ ಸಮವಸ್ತ್ರ ಧರಿಸಿ ಕಣಕ್ಕಿಳಿಯಲಿದ್ದಾರೆ.

ದೇಶಿ ಕ್ರಿಕೆಟ್‌ನ 'ರಾಜ' ರಣಜಿ ಟ್ರೋಫಿಯನ್ನು ಗೆಲ್ಲುವ ಕನಸು ಕಂಗಳೊಂದಿಗೆ ಉದ್ಯಾನನಗರಿಯಲ್ಲಿ ತಮ್ಮ ಸಾಮರ್ಥ್ಯ ಮೆರೆಯಲು ಉತ್ಸುಕರಾಗಿದ್ದಾರೆ.

ಸೋಮವಾರದಿಂದ ರಣಜಿ ಟ್ರೋಫಿ ಟೂರ್ನಿಯ ಎಂಟರ ಘಟ್ಟದ ನಾಲ್ಕು ಪಂದ್ಯಗಳಿಗೂ ಇದೇ ಮೊದಲ ಬಾರಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆತಿಥ್ಯ ವಹಿಸುತ್ತಿದೆ.

ಇದರಲ್ಲಿ ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಉತ್ತರ ಪ್ರದೇಶವನ್ನು ಎದುರಿಸಲಿದೆ. ಐಪಿಎಲ್‌ನಲ್ಲಿ ಬೇರೆ ಬೇರೆ ತಂಡಗಳಲ್ಲಿ ಆಡಿ ಬಂದಿರುವ ಮನೀಷ್, ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಕೃಷ್ಣಪ್ಪ ಗೌತಮ್ ಮತ್ತು ಮಯಂಕ್ ಅಗರವಾಲ್ ಕರ್ನಾಟಕ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಅವರೊಂದಿಗೆ ಆರ್. ಸಮರ್ಥ್ ಮತ್ತು ಕೆ.ವಿ. ಸಿದ್ಧಾರ್ಥ್ ಅವರೂ ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ಕರ್ನಾಟಕವು ಉತ್ತರ ಪ್ರದೇಶಕ್ಕಿಂತ ಬಲಿಷ್ಠ ಬ್ಯಾಟಿಂಗ್ ಪಡೆ ಹೊಂದಿದೆ.ಆದರೆ, ಬೌಲಿಂಗ್ ವಿಭಾಗ ತುಸು ದುರ್ಬಲವಾಗಿದೆ. ಮಧ್ಯಮವೇಗಿ ರೋನಿತ್ ಮೋರೆ, ವಿ. ಕೌಶಿಕ್, ಸ್ಪಿನ್ ಜೋಡಿ ಕೃಷ್ಣಪ್ಪ ಗೌತಮ್ ಮತ್ತು ಶ್ರೇಯಸ್ ಗೋಪಾಲ್ ಅವರ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಉತ್ತರಪ್ರದೇಶದ ಪ್ರಿಯಂ ಗರ್ಗ್, ರಿಂಕುಸಿಂಗ್, ಆಕ್ಷದೀಪ್ ನಾಥ್ ಅವರನ್ನು ಕಟ್ಟಿಹಾಕುವ ಸವಾಲು ರಾಜ್ಯ ಬೌಲಿಂಗ್ ಬಳಗದ ಮುಂದಿದೆ.

ಕರ್ನಾಟಕದ ವಿಕೆಟ್‌ಕೀಪಿಂಗ್‌ನಲ್ಲಿಯೂ ಸಮರ್ಥ ಆಟದ ಕೊರತೆ ಇದೆ. ಬಿ.ಆರ್. ಶರತ್ ಮತ್ತು ಶರತ್ ಶ್ರೀನಿವಾಸ್ ತಂಡದಲ್ಲಿದ್ದಾರೆ. ಅವಕಾಶ ಪಡೆದವರು ತಮ್ಮ ಕೀಪಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಸಾಮರ್ಥ್ಯ ತೋರಲು ಇದು ಸಕಾಲ.

ಕರ್ನಾಟಕ ತಂಡದಲ್ಲಿ ಕೆ.ಎಲ್. ರಾಹುಲ್ ಲಭ್ಯರಿಲ್ಲ. ಉತ್ತರಪ್ರದೇಶ ತಂಡದಲ್ಲಿ ಭುವನೇಶ್ವರ್ ಕುಮಾರ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಅವರು ಇಲ್ಲ. ಈ ಮೂವರೂ ಭಾರತ ತಂಡದಲ್ಲಿದ್ದಾರೆ.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಬಲಾಬಲ

ಪಂದ್ಯ	ತಂಡ	ಜಯ	ಡ್ರಾ
13	ಕರ್ನಾಟಕ	4	9
	ಉತ್ತರಪ್ರದೇಶ	0	

ಗುಂಪು ಹಂತದಲ್ಲಿ ಸಾಧನೆ (2021–22)

ತಂಡ	ಪಂದ್ಯ	ಗೆಲುವು	ಸೋಲು	ಡ್ರಾ
ಕರ್ನಾಟಕ	3	2	0	1
ಉತ್ತರ ಪ್ರದೇಶ	3	2	0	1

ಅಂಕಿ ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಕ್ವಾರ್ಟರ್‌ಫೈನಲ್‌ಗಳು

- ಮುಂಬೈ–ಉತ್ತರಾಖಂಡ
- ಕರ್ನಾಟಕ–ಉತ್ತರಪ್ರದೇಶ
- ಪಂಜಾಬ್–ಮಧ್ಯಪ್ರದೇಶ

ಕೆಎಸ್‌ಸಿಎ ಕ್ರೀಡಾಂಗಣ, ಆಲೂರು

- ಬಂಗಾಳ–ಜಾರ್ಖಂಡ್

ಜಸ್ಟ್ ಕ್ರಿಕೆಟ್ ಮೈದಾನ

ಪಂದ್ಯಗಳ ಆರಂಭ ಬೆಳಿಗ್ಗೆ 9.30ರಿಂದ

ಉಭಯ ತಂಡಗಳ ಸಾಧನೆ

ತಂಡ	ಪಂದ್ಯಗಳು	ಜಯ	ಸೋಲು	ಡ್ರಾ	ಫಲಿತಾಂಶವಿಲ್ಲ
ಕರ್ನಾಟಕ	452	205	67	172	8
ಉತ್ತರಪ್ರದೇಶ	383	92	92	181	17

ಅಖಿಲ ಭಾರತ ಕೊಕ್ಕೊ: ಪಶ್ಚಿಮ ರೈಲ್ವೆ ತಂಡಕ್ಕೆ ಟ್ರೋಫಿ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಪಶ್ಚಿಮ ರೈಲ್ವೆ ತಂಡವು ತಾಲ್ಲೂಕಿನ ಕ್ಯಾತನಹಳ್ಳಿ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಸ್ಮರಣಾರ್ಥ ನಡೆದ ಅಖಿಲ ಭಾರತ ಪುರುಷರ ಹೊನಲು ಬೆಳಕಿನ ಕೊಕ್ಕೊ ಟೂರ್ನಿಯಲ್ಲಿ ಟ್ರೋಫಿ ಜಯಿಸಿದರು.

ಭಾರತ ಕೊಕ್ಕೊ ಫೆಡರೇಷನ್, ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ, ಮಂಡ್ಯ ಜಿಲ್ಲಾ ಕೊಕ್ಕೊ ಸಂಸ್ಥೆ ಹಾಗೂ ಕ್ಯಾತನಹಳ್ಳಿ ಕ್ರೀಡಾ ಒಕ್ಕೂಟದ ಸಹಯೋಗದಲ್ಲಿ ನಡೆದ ಟೂರ್ನಿಯಲ್ಲಿ ಟ್ರೋಫಿಗಾಗಿ ನವಿ ಮುಂಬೈ ನಗರ ಪಾಲಿಕೆ ಹಾಗೂ ಪಶ್ಚಿಮ ರೈಲ್ವೆ ತಂಡಗಳ ನಡುವೆ ತೀವ್ರ ಹಣಾಹಣಿ ನಡೆಯಿತು. ಪಶ್ಚಿಮ ರೈಲ್ವೆ ತಂಡವು 4 ಅಂಕದಿಂದ ಗೆದ್ದಿತು. ಒಂದು ಲಕ್ಷ ರೂಪಾಯಿ ಹಾಗೂ ಟ್ರೋಫಿ ತನ್ನದಾಗಿಸಿಕೊಂಡಿತು. 2ನೇ ಸ್ಥಾನ ಪಡೆದ ನವಿ ಮುಂಬೈ ನಗರಪಾಲಿಕೆ ತಂಡವು ₹ 50ಸಾವಿರ ಹಾಗೂ ಟ್ರೋಫಿ ಪಡೆಯಿತು.

ಹಾಕಿ: ಭಾರತ ಪುರುಷರ ತಂಡ ಚಾಂಪಿಯನ್

ಲಾಸನ್ (ಪಿಟಿಐ): ಮೊದಲ ಬಾರಿಗೆ ನಡೆದ ಎಫ್‌ಐಎಚ್ 5ಎ ಸೈಡ್ ಹಾಕಿ ಟೂರ್ನಿಯಲ್ಲಿ ಭಾರತ ಪುರುಷರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮೂರು ಗೋಲುಗಳ ಹಿನ್ನಡೆಯಿಂದ ಚೇತರಿಸಿಕೊಂಡ ಗುರಿಂದರ್ ಸಿಂಗ್ ನಾಯಕತ್ವದ ಭಾರತ 6-4ರಿಂದ ಪೋಲೆಂಡ್ ತಂಡಕ್ಕೆ ಸೋಲುಣಿಸಿತು.

ಭಾರತ ಮಹಿಳಾ ತಂಡವು ಫೈನಲ್ ತಲುಪಲು ವಿಫಲವಾಯಿತು. ಗೆಲ್ಲಲೇಬೇಕಿದ್ದ ಕೊನೆಯ ಲೀಗ್ ಪಂದ್ಯದಲ್ಲಿ 4–4ರಿಂದ ದಕ್ಷಿಣ ಆಫ್ರಿಕಾ ಎದುರು ಡ್ರಾ ಸಾಧಿಸಿತು.

ರೂಟ್ ಶತಕ; ಇಂಗ್ಲೆಂಡ್‌ಗೆ ಜಯದ ಪುಳಕ

ಲಂಡನ್ (ಎಎಫ್‌ಪಿ): ಅಜೇಯ ಶತಕ ಗಳಿಸಿದ ಜೋ ರೂಟ್ ಇಂಗ್ಲೆಂಡ್ ತಂಡಕ್ಕೆ ಮೊದಲ ಟೆಸ್ಟ್‌ನಲ್ಲಿ ಜಯದ ಕಾಣಿಕೆ ನೀಡಿದರು.

ಲಾರ್ಡ್ಸ್‌ನಲ್ಲಿ ನ್ಯೂಜಿಲೆಂಡ್ ಎದುರು ನಡೆದ ಮೊದಲ ಟೆಸ್ಟ್‌ನಲ್ಲಿ ಭಾನುವಾರ ರೂಟ್ (ಅಜೇಯ 115; 170ಎಸೆತ, 4X12) ಮತ್ತು ನಾಯಕನಾಗಿ ಮೊದಲ ಬಾರಿ ಕಣಕ್ಕಿಳಿದಿರುವ ಬೆನ್‌ಸ್ಟೋಕ್ಸ್ (54;110ಎ, 4X5, 6X3) ಅವರ ಆಟದಿಂದ ಇಂಗ್ಲೆಂಡ್ 5 ವಿಕೆಟ್‌ನಿಂದ ಜಯಿಸಿತು.

ಜೋ ರೂಟ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 40 ಓವರ್‌ಗಳಲ್ಲಿ 132, ಇಂಗ್ಲೆಂಡ್: 42.5 ಓವರ್‌ಗಳಲ್ಲಿ 141, ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 91.3 ಓವರ್‌ಗಳಲ್ಲಿ 285, ಇಂಗ್ಲೆಂಡ್: 78.5 ಓವರ್‌ಗಳಲ್ಲಿ 5ಕ್ಕೆ279 (ಜೋ ರೂಟ್ ಔಟಾಗದೆ 115, ಬೆನ್ ಸ್ಟೋಕ್ಸ್ 54, ಬೆನ್ ಫೋಕ್ಸ್ ಔಟಾಗದೆ 32, ಕೈಲ್ ಜೆಮಿಸನ್ 79ಕ್ಕೆ4) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 5 ವಿಕೆಟ್‌ಗಳ ಜಯ.

ಫಜಲ್ ಮಿಂಚು: ರೆಬೆಲ್ಸ್‌ಗೆ ಜಯ

ಬೆಂಗಳೂರು: ಫಜಲ್ ಜಫಾ ಕೊನನ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ರೆಬೆಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 3–0ಯಿಂದ ಬೆಂಗಳೂರು ಗನ್ನರ್ಸ್ ತಂಡವನ್ನು ಸೋಲಿಸಿತು. ಫಜಲ್ 38, 43 ಮತ್ತು 61ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಇನ್ನೊಂದು ಪಂದ್ಯದಲಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ 4–1ರಿಂದ ಆರ್‌ಡಬ್ಲ್ಯುಎಫ್ ಎಫ್‌ಸಿಗೆ ಸೋಲುಣಿಸಿತು. ಮತ್ತೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ 2–0ಯಿಂದ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ಎದುರು ಗೆದ್ದಿತು.

12ರಂದು ರ‍್ಯಾಪಿಡ್ ಚೆಸ್ ಟೂರ್ನಿ

ಬೆಂಗಳೂರು: ಶ್ರೀ ಸದ್ಗುರು ಚೆಸ್‌ಮಾರ್ಟ್ಸ್ ಅಕಾಡೆಮಿಯು ಇದೇ 12ರಂದು ಮುಕ್ತ ಮತ್ತು ವಯೋವರ್ಗ ವಿಭಾಗಗಳಲ್ಲಿ ರ‍್ಯಾಪಿಡ್ ಚೆಸ್ ಟೂರ್ನಿಯನ್ನು ಆಯೋಜಿಸಿದೆ.

ಜೆ.ಪಿ. ನಗರದ ಪೂರ್ಣ ವಿಕಾಸ ವಿದ್ಯಾಲಯದಲ್ಲಿ ಟೂರ್ನಿ ನಡೆಯಲಿದೆ. ಒಟ್ಟು ₹ 30 ಸಾವಿರ ಬಹುಮಾನ ಮೊತ್ತವಿದೆ. ಮುಕ್ತ ₹ 600 ಮತ್ತು ವಯೋವರ್ಗ ವಿಭಾಗದವರಿಗೆ ₹ 500 ಪ್ರವೇಶ ಶುಲ್ಕವಿದೆ. ಮಾಹಿತಿಗೆ ಅರ್ಚನಾ ನಾಯ್ಕ (ಮೊ. ಸಂ. 8762191789/ 8431737265) ಅವರನ್ನು ಸಂಪರ್ಕಿಸಬೇಕು.

ಕುಸ್ತಿ: ಅಮನ್‌ಗೆ ಚಿನ್ನ

ಅಲ್ಮೇಟಿ (ಪಿಟಿಐ): ಭಾರತದ ಕುಸ್ತಿಪಟು ಅಮನ್ ಅವರು ಸೀನಿಯರ್ ವಿಭಾಗದಲ್ಲಿ ತಮ್ಮ ಮೊದಲ ಅಂತರರಾಷ್ಟ್ರೀಯ ಚಿನ್ನದ ಪದಕ ಗೆದ್ದುಕೊಂಡರು

ಇಲ್ಲಿ ನಡೆಯುತ್ತಿರುವ ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸರಣಿಯ ಕುಸ್ತಿಯಲ್ಲಿ ಅವರು ಭಾನುವಾರ 57 ಕೆ.ಜಿ ವಿಭಾಗದಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಅವರು ಕಜಕಸ್ತಾನದ ಮೆರೆಯ್ ಬಜರ್‌ಬಯೇವ್ ವಿರುದ್ಧ 10–9 ರಲ್ಲಿ ಗೆಲುವು ಪಡೆದರು.

ಬಜರಂಗ್ ಪೂನಿಯಾ ಕಂಚು ಗೆದ್ದುಕೊಂಡರು. ಮೊದಲ ಬೌಟ್‌ನಲ್ಲಿ ಅವರು 3–5 ರಲ್ಲಿ ಉಜ್ಬೆಕಿಸ್ತಾನದ ಅಬ್ಬೋಸ್ ರಖಮನೊವ್ ಎದುರು ಪರಾಭವಗೊಂಡರು. ಕಂಚಿನ ಪದಕದ ಹೋರಾಟದಲ್ಲಿ 7–0 ರಲ್ಲಿ ಕಜಕಸ್ತಾನದ ರಿಫಾತ್ ಸೈಬೊತಲೋವ್ ವಿರುದ್ಧ ಗೆದ್ದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ ರೇಸ್‌ನಲ್ಲಿ ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಕಪ್ ಜಯಿಸಿದ ಆಲ್ ಅಟ್ರ್ಯಾಕ್ಷನ್ ಕುದುರೆಯ ತರಬೇತುದಾರ ವಿ. ಲೋಕನಾಥ್ ಅವರಿಗೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಅವರು ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿ ವ್ಯವಸ್ಥಾಪಕ ಸಮಿತಿ ಸದಸ್ಯ ಅರವಿಂದ್ ರಾಘವನ್ ಮತ್ತು ಚೇರ್ಮನ್ ಕೆ. ಉದಯ್ ಈಶ್ವರನ್ ಇದ್ದಾರೆ – ಪ್ರಜಾವಾಣಿ ಚಿತ್ರ

ಜೂನಿಯರ್ ಫೆಡರೇಷನ್ ಕಪ್‌ನಲ್ಲಿ ಉತ್ತಮ ಪ್ರದರ್ಶನ

ವಿಶ್ವ ಅಥ್ಲೆಟಿಕ್ಸ್‌ಗೆ ಪ್ರಿಯಾ, ಆರ್ಯನ್

ನಡಿಯಾದ್, ಗುಜರಾತ್ (ಪಿಟಿಐ): ಕರ್ನಾಟಕದ ಪ್ರಿಯಾ ಮೋಹನ್ ಮತ್ತು ಆರ್ಯನ್ ಕಶ್ಯಪ್ ಅವರು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡರು.

ಗುಜರಾತ್‌ನ ನಡಿಯಾದ್‌ನಲ್ಲಿ ನಡೆದ ಜೂನಿಯರ್ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನ ಮಹಿಳೆಯರ 200 ಮೀ. ಓಟದಲ್ಲಿ ಪ್ರಿಯಾ 23.98 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರಲ್ಲದೆ, ವಿಶ್ವ ಅಥ್ಲೆಟಿಕ್ಸ್‌ನ ಅರ್ಹತೆಗೆ ಬೇಕಾದ ಸಮಯ ಕಂಡುಕೊಂಡರು.

ಆರ್ಯನ್ 400 ಮೀ. ಹರ್ಡಲ್ಸ್‌ನಲ್ಲಿ ಎರಡನೇ ಸ್ಥಾನ ಗಳಿಸಿದರು. ಆರ್ಯನ್ ಅಲ್ಲದೆ ಮೊದಲ ಸ್ಥಾನ ಪಡೆದ ಪಂಜಾಬ್‌ನ ಹರ್ದೀಪ್ ಮತ್ತು ಮೂರನೇ ಸ್ಥಾನ ಗಳಿಸಿದ ಪಶ್ಚಿಮ ಬಂಗಾಳದ ಕರ್ಣ ಬಾಗ್ ಅವರೂ ಅರ್ಹತೆ ಪಡೆದುಕೊಂಡರು.

ಈ ಕೂಟದಲ್ಲಿ ಗಮನಾರ್ಹ ಪ್ರದರ್ಶನ ನೀಡಿದ ಒಟ್ಟು 16 ಸ್ಪರ್ಧಿಗಳು ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಪಡೆದುಕೊಂಡರು. ಲಾಂಗ್ ಜಂಪ್ ಸ್ಪರ್ಧಿ ತಮಿಳುನಾಡಿನ ಸೆಲ್ವಪ್ರಭು ಅವರು 15.84 ಮೀ. ದೂರ ಜಿಗಿದು ಚಿನ್ನ ಗೆದ್ದರು.

ತಮಿಳುನಾಡಿನ ಪ್ರದೀಪ್ ಸೆಂಥಿಲ್‌ಕುಮಾರ್ 800 ಮೀ. ಓಟದಲ್ಲಿ (1ನಿ. 49.59 ಸೆ.) ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿದರು. ಉತ್ತರ ಪ್ರದೇಶದ ತಾನ್ಯಾ ಚೌಧರಿ ಅವರು ಹ್ಯಾಮರ್ ಥ್ರೋನಲ್ಲಿ (57.09 ಮೀ.), ಹರಿಯಾಣದ ಸಿಮಿ ಅವರು ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ (1ನಿ. 0.72 ಸೆ.) ಮೊದಲ ಸ್ಥಾನ ಗಳಿಸಿದರು.

ಪ್ರಿಯಾ ಮೋಹನ್

ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 800 ಮೀ.ಓಟದ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದ ಪ್ರದೀಪ್ ಸೆಂಥಿಲ್ ಕುಮಾರ್ (ತಮಿಳುನಾಡು), ಅರ್ಜುನ್, ಸೋಮಂತ್ ಚೌಹಾಣ್ (ಹರಿಯಾಣ) ಹಾಗೂ ಆಶಾಕಿರಣ್ ಬಾರ್ಲ (ಜಾರ್ಖಂಡ್), ಲಕ್ಷಿತಾ ಶಾಂಡಿಲ್ಯ (ಗುಜರಾತ್) ಮತ್ತು ಊರ್ವಶಿ (ಹರಿಯಾಣ) ಅವರು ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಗಳಿಸಿದರು.

ಪ್ರವೀಣ್ ಕುಮಾರ್ ಅಮೋಘ ಸಾಧನೆ

ಪ್ಯಾರಾ ಅಥ್ಲೀಟ್ ಸ್ಪರ್ಧಿ ಪ್ರವೀಣ್ ಕುಮಾರ್ ಈ ಕೂಟದಲ್ಲಿ ಪಾಲ್ಗೊಂಡು ಹೈಜಂಪ್‌ನಲ್ಲಿ ಚಿನ್ನ ಗೆದ್ದು ಎಲ್ಲರ ಗಮನ ಸೆಳೆದರು. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಪ್ರವೀಣ್ 2.06 ಮೀ. ಎತ್ತರ ಜಿಗಿದರು. ಸಾಮಾನ್ಯ ವರ್ಗದ ಅಥ್ಲೀಟ್‌ಗಳನ್ನು ಹಿಂದಿಕ್ಕಿ ಚಿನ್ನ ಜಯಿಸಿದ್ದು ವಿಶೇಷ. ಅವರು ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಟಿ–44 ವಿಭಾಗದಲ್ಲಿ (ಕಾಲು ಊನವಾಗಿರುವವರು) ಸ್ಪರ್ಧಿಸುವರು.

100 ಮೀ. ಓಟ: ಧನಲಕ್ಷ್ಮಿ ಮಿಂಚು

ನವದೆಹಲಿ (ಪಿಟಿಐ): ಭಾರತದ ಎಸ್.ಧನಲಕ್ಷ್ಮಿ ಅವರು ಟರ್ಕಿಯಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪ್ರಿಂಟ್ ಚಾಂಪಿಯನ್‌ಷಿಪ್‌ನ 100 ಮೀ. ಓಟದಲ್ಲಿ ಚಿನ್ನ ಗೆದ್ದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಅವರು 11.26 ಸೆ.ಗಳೊಂದಿಗೆ ಗುರಿಮುಟ್ಟಿ, ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದರು. 11.59 ಸೆ.ಗಳೊಂದಿಗೆ ಹಿಮಾ ದಾಸ್ ಎರಡನೇ ಸ್ಥಾನ ಪಡೆದರು.

ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಅರ್ಹತೆಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ ಸಮಯಕ್ಕಿಂತ ಉತ್ತಮ ಸಮಯವನ್ನು ಧನಲಕ್ಷ್ಮಿ ಕಂಡುಕೊಂಡರು. 200 ಮೀ. ಓಟದಲ್ಲೂ ಶ್ರೇಷ್ಠ ಸಾಧನೆ ತೋರಿದ ಧನಲಕ್ಷ್ಮಿ 23.26 ಸೆ.ಗಳೊಂದಿಗೆ ಅಗ್ರಸ್ಥಾನ ಗಳಿಸಿದರು. ಹಿಮಾ ದಾಸ್ (23.51 ಸೆ.) ಎರಡನೇ ಸ್ಥಾನ ಪಡೆದರು.

ಧನಲಕ್ಷ್ಮಿ

ಸಂಕ್ಷಿಪ್ತ ಸುದ್ದಿ

ಪ್ಯಾರಾ ಈಜು: ನಿರಂಜನ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು ಫ್ರಾನ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

50 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ಅವರಿಗೆ ಪದಕ ಒಲಿದಿದೆ. 34 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರು.

ನಿರಂಜನ್

ಖೇಲೊ ಇಂಡಿಯಾ ಫುಟ್‌ಬಾಲ್: ಕರ್ನಾಟಕ ಜಯಭೇರಿ

ಬೆಂಗಳೂರು: ಕರ್ನಾಟಕ ತಂಡವು ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ನಡೆಯುತ್ತಿರುವ ಫುಟ್‌ಬಾಲ್ ಸ್ಪರ್ಧೆಯ ಮೊದಲ ಪಂದ್ಯದಲ್ಲಿ ಜಯ ಗಳಿಸಿದೆ.

ಚಂಡೀಗಡದ ಪಂಚಕುಲಾದಲ್ಲಿ ನಡೆಯುತ್ತಿರುವ ಕೂಟದಲ್ಲಿ ಕರ್ನಾಟಕ ತಂಡದವರು ಭಾನುವಾರ 2–0ಯಿಂದ ಪಶ್ಚಿಮ ಬಂಗಾಳ ತಂಡಕ್ಕೆ ಸೋಲುಣಿಸಿದರು. ರಾಜ್ಯ ತಂಡದ ವಿಶಾಲ್ 11ನೇ ನಿಮಿಷದಲ್ಲಿ ಶರತ್ ರಾಜ್‌ಕುಮಾರ್ ನೀಡಿದ ಕ್ರಾಸ್‌ನಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು.

ಪಂದ್ಯ ಮುಗಿಯಲು ನಾಲ್ಕು ನಿಮಿಷಗಳಿರುವಾಗ ಮ್ಯಾಕರ್ಟನ್ ಲೂಯಿಸ್ ಕಾಲ್ಚಳಕ ತೋರಿ ತಂಡದ ಗೆಲುವು ಖಚಿತಪಡಿಸಿದರು. ಅಜಯ್ ಕದಮ್ ನೀಡಿದ ಪಾಸ್‌ನಲ್ಲಿ ಅವರು ಗೋಲು ಹೊಡೆದರು. ಮಂಗಳವಾರ ನಡೆಯುವ ಪಂದ್ಯದಲ್ಲಿ ಕರ್ನಾಟಕ, ಮೇಘಾಲಯದ ಸವಾಲು ಎದುರಿಸಲಿದೆ.

ಗಾಲ್ಫ್: ಅಗ್ರ 10ರಲ್ಲಿ ವಿರಾಜ್ ಮಾದಪ್ಪ

ನ್ಯೂಕ್ಯಾಸಲ್, ಇಂಗ್ಲೆಂಡ್ (ಪಿಟಿಐ): ಭಾರತದ ವಿರಾಜ್ ಮಾದಪ್ಪ ಅವರು ಇಲ್ಲಿ ನಡೆಯುತ್ತಿರುವ ಇಂಟರ್‌ನ್ಯಾಷನಲ್ ಸೀರಿಸ್ ಇಂಗ್ಲೆಂಡ್ ಗಾಲ್ಫ್ ಟೂರ್ನಿಯಲ್ಲಿ ಮೂರನೇ ಸುತ್ತಿನ ಬಳಿಕ ಜಂಟಿ ಎಂಟನೇ ಸ್ಥಾನದಲ್ಲಿದ್ದಾರೆ.

ಕಣದಲ್ಲಿರುವ ಭಾರತದ ಇತರ ಯಾವುದೇ ಆಟಗಾರರು ಅಗ್ರ 10 ರಲ್ಲಿ ಕಾಣಿಸಿಕೊಂಡಿಲ್ಲ.

ಎರಡನೇ ಸುತ್ತಿನ ಬಳಿಕ ಜಂಟಿ ಮೂರನೇ ಸ್ಥಾನದಲ್ಲಿದ್ದ ಶಿವ ಕಪೂರ್, ನಿಖರ ಪ್ರದರ್ಶನ ನೀಡುವಲ್ಲಿ ವಿಫಲರಾಗಿ ಜಂಟಿ 29ನೇ ಸ್ಥಾನಕ್ಕೆ ಕುಸಿತ ಕಂಡಿದ್ದಾರೆ.